ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮಾಧ್ಯಮ ಕ್ಷೇತ್ರದಲ್ಲಿ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ. ಹಾಗೆಯೇ ಈ ಕ್ಷೇತ್ರ ಬರವಣಿಗೆ, ಮಾತುಗಾರಿಕೆಯಂತಹ ಕೌಶಲಗಳ ಜೊತೆಗೆ ತಾಂತ್ರಿಕ ನೈಪುಣ್ಯತೆಯನ್ನೂ ನಿರೀಕ್ಷಿಸುತ್ತದೆ.



ಆಳ-ಅಗಲ
ಭಾರತ-ರಷ್ಯಾ ಮೈತ್ರಿಗೆ ಹೊಸ ಭಾಷ್ಯ

ರಾಯಾಪುರದಲ್ಲಿ ಇ.ವಿ ಘಟಕ 9
‘3 ಲಕ್ಷ ಲೇವಣಿದಾರರಿಗೆ ಶೀಘ್ರವೇ ವಿಮಾ ಹಣ’ 9

ಹಿಂದುತ್ವವಾದಿಗಳನ್ನು ಉಚ್ಚಾಟಿಸಿ, ಹಿಂದೂಗಳ ಆಳ್ವಿಕೆ ನೆಲೆಗೊಳಿಸಿ: ರಾಹುಲ್
‘ಭಾರತ ಹಿಂದುತ್ವವಾದಿಗಳ ದೇಶವಲ್ಲ’ 8

ಬಲವಂತ, ಆಮಿಷದ ಮತಾಂತರಕ್ಕೆ ತಡೆ • ಪ್ರಸಕ್ತ ಅಧಿವೇಶನದಲ್ಲಿಯೇ ಮಸೂದೆ?

ಮತಾಂತರ ನಿಷೇಧ: ಸಿ.ಎಂ ಸುಳಿವು

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿ: ‘ಮತಾಂತರ ನಿಷೇಧ ಕಾಯ್ದೆ ಜಾರಿಗೆ ಬಂದರೆ ಕ್ರೈಸ್ತರು ಆತಂಕ ಪಡುವ ಅಗತ್ಯವಿಲ್ಲ. ಅವರ ಧಾರ್ಮಿಕ ಆಚರಣೆಗೆ ಯಾವುದೇ ಕುತ್ತು ಬರುವುದಿಲ್ಲ’ ಎಂದು ಮುಖ್ಯ ಮಂತ್ರಿ ಬಸವರಾಜ ಬೊ ಮ್ಮಾ ಯಿ ಹೇಳಿದರು. ಆ ಮೂಲಕ ಬೆಳಗಾವಿ ಅಧಿವೇಶನದಲ್ಲಿಯೇ ಮತಾಂತರ ನಿಷೇಧ ಮಸೂದೆ ಮಂಡನೆ ಮಾಡುವ ಸುಳಿವು ನೀಡಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಬಡತನ, ಮನೆಯ ಪರಿಸ್ಥಿತಿ ದುರುಪಯೋಗಪಡಿಸಿಕೊಂಡು ಹಾಗೂ ಆಮಿಷ ಒಡ್ಡಿ ಮತಾಂತರಕ್ಕೆ ಯತ್ನಿಸು-ವವರಿಗೆ ಕಡಿವಾಣ ಹಾಕಲು ಕಾಯ್ದೆ ಅನುಕೂಲವಾಗಲಿದೆ. ಸ್ವಾತಂತ್ರ್ಯ ನಂತರ ಈ ಬಗ್ಗೆ ಅನೇಕ ಬಾರಿ ಚರ್ಚೆಗ ಳಾಗಿವೆ. ಹಲವು ರಾಜ್ಯಗಳಲ್ಲಿ ಜಾರಿಗೆ ಬಂದಿದೆ. ಮತಾಂತರ ನಿಷೇಧ ಕಾಯ್ದೆ ಜಾರಿಯಾಗಬೇಕು ಎಂಬುದು ಬಹಳಷ್ಟು ಜನರ ಒತ್ತಾಸೆಯಾಗಿದೆ’ ಎಂದರು.

’ಕಾಯ್ದೆ ಬಗ್ಗೆ ಕಾನೂನು ಇಲಾಖೆ ಕರಡು ಸಿದ್ಧಪಡಿಸುತ್ತಿದ್ದು, ಸೋಮವಾರ ಆರಂಭವಾಗಲಿರುವ ಬೆಳಗಾವಿ ಅಧಿ-ವೇಶನದಲ್ಲಿ ಈ ಮಸೂದೆಯ ಕುರಿತು ಚರ್ಚೆಯಾಗಲಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಹೀಗೆ ಎಲ್ಲವೂ ಸಂವಿಧಾನದಲ್ಲಿ ಗುರುತಿಸಲಾದ ಧರ್ಮಗಳಾಗಿವೆ. ಯಾರ ಪ್ರಾರ್ಥನೆ, ಆಚರಣೆ, ಧಾರ್ಮಿಕ ಭಾವನೆಗಳಿಗೂ ಧಕ್ಕೆ ತರದ ಹಾಗೆ ಕ್ರಮ ಕೈಗೊಳ್ಳಲಾಗು-ವುದು‘ ಎಂದು ಸ್ಪಷ್ಟಪಡಿಸಿದರು.

‘ಮತಾಂತರ ಸಮಾಜಕ್ಕೆ ಒಳ್ಳೆಯ ದಲ್ಲ. ಯಾವುದೇ ಮನೆಗೆ, ಮನಸ್ಸುಗಳಿಗೆ ಕೆಟ್ಟದಾಗಬಾರದು. ಬಡವರು, ದೀನದಲಿತರು ಇದಕ್ಕೆ ಬಲಿಯಾಗಬಾರದು ಎನ್ನುವ ಕಾರಣಕ್ಕೆ ಕಾನೂನು ಜಾರಿಗೆ ತರುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ’ ಎಂದರು.

ಬೆಳಗಾವಿ ಅಧಿವೇಶನದ ಬಗ್ಗೆ ಪ್ರತಿಕ್ರಿಯಿಸಿ ‘ಎಲ್ಲಾ ತಯಾರಿ ಮಾಡಿ-ಕೊಳ್ಳಲಾಗಿದೆ. ಪ್ರಮುಖ ವಿಷಯಗಳ ಬಗ್ಗೆ ಅರ್ಥಪೂರ್ಣ ಚರ್ಚೆಯಾಗಬೇಕು ಎನ್ನುವ ಆಸೆ ನಮ್ಮದು. ಸಮಗ್ರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕು’ ಎಂದರು.

ಅಂಗೀಕರಿಸಲಿ: ‘ಮತಾಂತರ ನಿಷೇಧ ಮಸೂದೆಯನ್ನು ಬೆಳಗಾವಿ ಅಧಿವೇಶನ-ದಲ್ಲಿಯೇ ಮಂಡಿಸಿ, ಅಂಗೀಕರಿಸಬೇಕು’ ಎಂದು ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಬಾಗಲಕೋಟೆಯಲ್ಲಿ ಸುದ್ದಿಗಾರ ರೊಂದಿಗೆ ಜೊತೆ ಮಾತನಾಡಿದ ಅವರು, ‘ಜನರ ಬಡತನ, ಅಸಹಾಯಕತೆ ದುರುಪಯೋಗ ಪಡಿಸಿಕೊಂಡು ಮತಾಂತರ ಮಾಡಲು ಅವಕಾಶ ಕೊಡ ಬಾರದು. ಸರ್ಕಾರ ಕೂಡ ಸಮಾಜದ ಎಲ್ಲ ವರ್ಗಗಳ ಜನರ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಬೇಕು’ ಎಂದರು.

‘ಮನೆಯವರೇ ಮತಾಂತರವಾದರೆ ಸುಮ್ಮನಿರುತ್ತೀರಾ’: ‘ತಮ್ಮ ಮನೆಯ ಸದಸ್ಯರೇ ಮತಾಂತರ ಆದಲ್ಲಿ ಕಾಂಗ್ರೆಸ್ ನಾಯಕರು ಸುಮ್ಮನೆ ಕೂರುವರಾ’ ಎಂದು ಕೇಂದ್ರ ಸಬಲೀಕರಣ ಹಾಗೂ ಸಾಮಾಜಿಕ ನ್ಯಾಯ ಸಚಿವ ಎ. ನಾರಾಯಣಸ್ವಾಮಿ ಚಿತ್ರದುರ್ಗದಲ್ಲಿ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರು ಏನೇ ಹೇಳಿದರೂ ಧರ್ಮ–ಧರ್ಮಗಳ ಮಧ್ಯೆ ಕಂದಕ ಸೃಷ್ಟಿಸುತ್ತಿರುವ ಮತಾಂತರಕ್ಕೆ ಬಿಜೆಪಿ ವಿರೋಧವಿದೆ ಎಂದು ಹೇಳಿದರು.



ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲ ಅಧಿವೇಶನದಲ್ಲಿ ಮತಾಂತರ ನಿಷೇಧ ಕುರಿತಂತೆ ಮಸೂದೆ ಮಂಡಿಸಿದರೆ ಖಂಡತುಂಡವಾಗಿ ವಿರೋಧಿಸುತ್ತೇವೆ

ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕ

ಬೆಳಗಾವಿ: ಕಲಾಪವೋ ಕದನವೋ

• ವೈ.ಗ. ಜಗದೀಶ್

ಬೆಳಗಾವಿ: ಸರ್ಕಾರಿ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚ, ಪ್ರಭಾವಿ ರಾಜಕಾರಣಿಗಳ ಮಕ್ಕಳು ಹಾಗೂ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದಾರೆಂದು ಆಪಾದಿಸಲಾಗಿರುವ ಬಿಟ್ ಕಾಯಿನ್ ಹಗರಣವನ್ನು ಮುಂದಿಟ್ಟು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷ ಕಾಂಗ್ರೆಸ್ ಅಣಿಯಾಗಿದ್ದರೆ, ಇದೇ ಅಸ್ತ್ರಗಳನ್ನು ಎದುರಾಳಿಯತ್ತ ಎಸೆದು ವಿರೋಧ ಪಕ್ಷದ ಬಾಯಿ ಮುಚ್ಚಿಸಲು ಆಡಳಿತಾರೂಢ ಬಿಜೆಪಿ ಸಜ್ಜಾಗಿದೆ.

ಸೋಮವಾರ ಆರಂಭವಾಗುವ ಅಧಿವೇಶನದಲ್ಲಿ ಕಾಂಗ್ರೆಸ್‌ನ ಸಂಭಾವ್ಯ ದಾಳಿಯನ್ನು ಎದುರಿಸಲು ಮತಾಂತರ ನಿಷೇಧ ಮಸೂದೆ ಮಂಡಿಸಿ, ಚರ್ಚೆಯ ದಿಕ್ಕನ್ನೇ ಬದಲಾಯಿಸಲು ಆಡಳಿತ ಪಕ್ಷ ಆಲೋಚಿಸಿದೆ. 10 ದಿನಗಳ ಕಲಾಪವೋ– ಕದನವೋ ಎಂಬ ಕುತೂಹಲವಂತೂ ರಾಜಕೀಯ ಪಡಸಾಲೆಯಲ್ಲಿದೆ.

ಕೋವಿಡ್ ಕಾರಣದಿಂದಾಗಿ ಹಿಂದಿನ ಎರಡು ವರ್ಷ ಇಲ್ಲಿ ಅಧಿವೇಶನ ನಡೆದಿರಲಿಲ್ಲ. ಹೀಗಾಗಿ, ಈ ಭಾಗದ ಜನರು ಹಾಗೂ ಸಂಘಟನೆಗಳವರಿಗೆ ತಮ್ಮ ಕೂಗನ್ನು ಸರ್ಕಾರಕ್ಕೆ ಮುಟ್ಟಿಸುವ ಅವಕಾಶ ಲಭಿಸಿದ್ದು, ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಹೋರಾಟಗಾರರು ತಯಾರಿ ನಡೆಸಿದ್ದಾರೆ. ಸದನದ ಹೊರಗೆ ಕದನವನ್ನು ನಡೆಸಿ, ಸರ್ಕಾರದ ಗಮನಸೆಳೆಯುವ ಯತ್ನಕ್ಕೆ ಚಳವಳಿಗಾರರು ಮುಂದಡಿ ಇಟ್ಟಿದ್ದಾರೆ.

4A ಪುಟ ನೋಡಿ



ಒಳ ಪುಟಗಳು



ಕೇಂದ್ರದ ಅನುಮತಿಗೆ ಕಾಯುತ್ತಿರುವ ರಾಜ್ಯ ಸರ್ಕಾರ

30 ಲಕ್ಷ ಮಂದಿಗೆ 3ನೇ ಡೋಸ್?

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದು ಆರು ತಿಂಗಳಾದವರಿಗೆ ಬೂಸ್ಟರ್ ಡೋಸ್ ನೀಡಲು ರಾಜ್ಯ ಸರ್ಕಾರ ಕಾರ್ಯಯೋಜನೆ ರೂಪಿಸುತ್ತಿದೆ. ಸದ್ಯ 30 ಲಕ್ಷಕ್ಕೂ ಅಧಿಕ ಮಂದಿ ಮೂರನೇ ಡೋಸ್ ಪಡೆಯಲು ಅರ್ಹತೆ ಹೊಂದಿದ್ದಾರೆ. ಈ ಪ್ರಸ್ತಾವಕ್ಕೆ ಕೇಂದ್ರದ ಅನುಮತಿಗಾಗಿ ರಾಜ್ಯ ಸರ್ಕಾರ ಎದುರು ನೋಡುತ್ತಿದೆ.

ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ರಾಜ್ಯದಲ್ಲೂ ಕಾಣಿಸಿಕೊಂಡಿ-ದ್ದರಿಂದ ಬೂಸ್ಟರ್ ಡೋಸ್ ವಿತರಣೆಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಲಸಿಕೆಯ ಎರಡೂ ಡೋಸ್ ಪಡೆದ ಆರು ತಿಂಗಳವರೆಗೆ ಪ್ರತಿಕಾಯ (ಆ್ಯಂಟಿಬಾಡಿ) ಸಕ್ರಿಯವಾಗಿರಲಿದೆ ಎನ್ನುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಆ ಬಳಿಕ ಕೆಲವರಲ್ಲಿ ಪ್ರತಿಕಾಯ ದುರ್ಬಲವಾಗುವುದರಿಂದ ಬೂಸ್ಟರ್ ಡೋಸ್ ನೀಡುವ ಅಗತ್ಯದ ಬಗ್ಗೆ ವೈದ್ಯಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಹೊಸ ತಳಿಯ ವೈರಾಣುವಿನ ಹರಡು-ವಿಕೆಯನ್ನು ಹಾಗೂ ರೋಗ ಉಲ್ಬಣ-ಗೊಳ್ಳುವುದನ್ನು ತಡೆಯಲು ಮೂರನೇ ಡೋಸ್ ನೀಡಲು ಸರ್ಕಾರಕ್ಕೆ ತಜ್ಞರು ಸಲಹೆ ನೀಡಿದ್ದಾರೆ.

ರಾಜ್ಯದಲ್ಲಿ 2021ರ ಜ.16 ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. ಈವರೆಗೆ 4.65 ಕೋಟಿಗೂ ಹೆಚ್ಚು ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 3.37 ಕೋಟಿಗೂ ಹೆಚ್ಚು ಮಂದಿ ಎರಡೂ ಡೋಸ್‌ಗಳನ್ನು ಹಾಕಿಸಿಕೊಂಡಿದ್ದಾರೆ. ಆರಂಭಿಕ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಮತ್ತು ಮುಂಚೂಣಿ ಕೋವಿಡ್ ಯೋಧರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗಿತ್ತು.

ವರ್ಷಾಂತ್ಯಕ್ಕೆ ಮತ್ತಷ್ಟು ಹೆಚ್ಚಳ: 45 ವರ್ಷಗಳು ಮೇಲ್ಪಟ್ಟವರಲ್ಲಿ 22.92 ಲಕ್ಷ ಮಂದಿ, ಆರೋಗ್ಯ ಕಾರ್ಯಕರ್ತರಲ್ಲಿ 4.81 ಲಕ್ಷ ಮಂದಿ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 2.25 ಲಕ್ಷ ಮಂದಿ ಎರಡೂ ಡೋಸ್‌ಗಳು ಪಡೆದು ಆರು ತಿಂಗಳುಗಳಾಗಿವೆ.

4ನೇ ಪುಟ ನೋಡಿ



ಕೋವಿಡ್ ಲಸಿಕೆಯ ಮೂರನೇ ಡೋಸ್ ಪಡೆಯುವುದರಿಂದ ರೋಗದ ತೀವ್ರತೆ ಶೇ 90 ರಷ್ಟು ಕಡಿಮೆ ಆಗಲಿದೆ. ಹೀಗಾಗಿ, ಬೂಸ್ಟರ್ ಡೋಸ್ ನೀಡಬೇಕಾದ ಅಗತ್ಯವಿದೆ

ಡಾ.ಸಿ.ಎನ್. ಮಂಜುನಾಥ್
ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಪ್ರಜಾವಾಣಿ ವಿಶೇಷ

ಪ್ರಧಾನಿ ಟ್ವಿಟರ್ ಖಾತೆ ಹ್ಯಾಕ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಟ್ವಿಟರ್ ಖಾತೆ ಭಾನುವಾರ ಅಲ್ಪಾವಧಿಗೆ ಹ್ಯಾಕ್ ಆಗಿತ್ತು. ‘ಬಿಟ್ ಕಾಯಿನ್‌ಗೆ ಭಾರತ ಅಧಿಕೃತವಾಗಿ ಮಾನ್ಯತೆ ನೀಡಿದೆ’ ಎಂಬ ಸಂದೇಶವನ್ನು ಹಾಕಲಾಗಿತ್ತು. 9

ಮತಾಂತರ ಆರೋಪ: ಕ್ರೈಸ್ತ ಧರ್ಮ ಪ್ರಚಾರಕರ ಮೇಲೆ ಹಲ್ಲೆ

ಕೋಲಾರ: ಜಿಲ್ಲೆಯ ಶ್ರೀನಿವಾಸಪುರದಲ್ಲಿ ಮತಾಂತರ ಮಾಡಲಾಗುತ್ತಿದೆ ಎಂದು ಆರೋಪಿಸಿ ಯುವಕರ ಗುಂಪೊಂದು ಭಾನುವಾರ ಕ್ರೈಸ್ತ ಧರ್ಮ ಪ್ರಚಾರಕರ ಮೇಲೆ ಹಲ್ಲೆ ನಡೆಸಿ, ಕರಪತ್ರಗಳನ್ನು ಸುಟ್ಟು ಹಾಕಿದೆ. 2

ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟನೆಗೆ ಸಜ್ಜು

ವಾರಾಣಸಿ: ವಾರಾಣಸಿಯ ಕೇಂದ್ರ ಭಾಗದಲ್ಲಿ ನಿರ್ಮಿಸಿರುವ ಬಹುನಿರೀಕ್ಷಿತ ಕಾಶಿ ವಿಶ್ವನಾಥ ಕಾರಿಡಾರ್ ಅನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವರು. ಈ ಯೋಜನೆಯಿಂದಾಗಿ ಪಾರಂಪರಿಕ ನಗರದಲ್ಲಿ ಪ್ರವಾಸೋದ್ಯಮ ಚೇತರಿಕೆ ಕಾಣಲಿದೆ ಎಂದು ಆಶಿಸಲಾಗಿದೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ









₹1,120 ಕೋಟಿ ವೆಚ್ಚದ ಯೋಜನೆ –ಟೆಂಡರ್ ಪಕ್ರಿಯೆ ನ್ಯೂನತೆಗಳ ವಿವರ ಕೇಳಿದ ಸಿ.ಎಂ

ಅತಿ ದಟ್ಟಣೆ ಕಾರಿಡಾರ್–ಕೊನೆಗೂ ಮರುಟೆಂಡರ್

• ಪ್ರವೀಣ್ ಕುಮಾರ್ ಪಿ.ವಿ

ಬೆಂಗಳೂರು: ನಗರದ 12 ಅತಿ ದಟ್ಟಣೆಯ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ₹1,120.48 ಕೋಟಿ ವೆಚ್ಚದ ಯೋಜನೆಯ ಟೆಂಡರ್‌ನ ನ್ಯೂನತೆಗಳ ಕುರಿತು ಟೀಕೆಗಳು ವ್ಯಕ್ತವಾಗುತ್ತಿದ್ದಂತೆಯೇ ಇದಕ್ಕೆ ಮರು ಟೆಂಡರ್ ಕರೆದು ಸಚಿವ ಸಂಪುಟದ ಮುಂದೆ ಮಂಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಈ ಯೋಜನೆಯ ಅನೇಕ ಲೋಪಗಳ ಬಗ್ಗೆ 'ಪ್ರಜಾವಾಣಿ' ವಿಶೇಷ ವರದಿಗಳ ಮೂಲಕ ಬೆಳಕು ಚೆಲ್ಲಿತ್ತು. ನಾಲ್ಕು ಪ್ಯಾಕೇಜ್‌ಗಳನ್ನು ಒಳಗೊಂಡ ಈ ಯೋಜನೆಯ ಏಳು ಗಹನವಾದ ನ್ಯೂನತೆಗಳನ್ನು ಪಟ್ಟಿ ಮಾಡಿರುವ ಮುಖ್ಯಮಂತ್ರಿ ಅವರು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸುವಂತೆಯೂ ಸೂಚನೆ ನೀಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಕಪ್ಪುಪಟ್ಟಿಯಲ್ಲಿರುವ ಗುತ್ತಿಗೆದಾರನಿಗೆ ಟೆಂಡರ್– ಆಕ್ಷೇಪ

ಪ್ಯಾಕೇಜ್–3ರ ಗುತ್ತಿಗೆದಾರ ಉದಯ್ ಶಿವಕುಮಾರ್ (ಇಂಡಿಯಾ ಪ್ರೈ ಲಿ.) ಅವರನ್ನು ಲೋಕೋಪಯೋಗಿ ಇಲಾಖೆ 2019ರ ಮೇ 27ರಂದು ಕಪ್ಪುಪಟ್ಟಿಗೆ ಸೇರಿಸಿತ್ತು. ಟೆಂಡರ್‌ನಲ್ಲಿ ತಾಂತ್ರಿಕ ಅರ್ಹತೆ ಪಡೆಯಲು ಐದು ವರ್ಷಗಳಲ್ಲಿ ₹ 80 ಕೋಟಿ ಮೊತ್ತದ ಒಂದಾದರೂ ಕಾಮಗಾರಿ ನಿರ್ವಹಿಸಿರಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಈ ಗುತ್ತಿಗೆದಾರ ₹ 60 ಕೋಟಿಗಿಂತ ಹೆಚ್ಚು ಮೊತ್ತದ ಕಾಮಗಾರಿ ನಿರ್ವಹಿಸಿಲ್ಲ ಎಂಬ ಕಾರಣಕ್ಕೆ ತಾಂತ್ರಿಕವಾಗಿ ಅನರ್ಹಗೊಳಿಸಲಾಗಿತ್ತು. ನಂತರ ಇದೇ ಗುತ್ತಿಗೆದಾರ ಮತ್ತೆ ಅರ್ಹತೆ ಗಿಟ್ಟಿಸಿಕೊಂಡಿದ್ದು ಹೇಗೆ ಎಂಬ ಬಗ್ಗೆಯೂ ಮುಖ್ಯಮಂತ್ರಿ ಸ್ಪಷ್ಟನೆ ಬಯಸಿದ್ದಾರೆ.

ವರದಿ ಪರಿಣಾಮ

ನಗರದ 191 ಕಿ.ಮೀ ಉದ್ದದ ರಸ್ತೆಯ ನಿರ್ವಹಣೆಯ ಹೊಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ಪ್ರಾಧಿಕಾರಕ್ಕೆ (ಕೆಆರ್‌ಡಿಸಿಎಲ್) ವಹಿಸಲಾಗಿದ್ದು, ಅದರಲ್ಲಿ ಬಿಬಿಎಂಪಿ ಅಧೀನದಲ್ಲಿದ್ದ 98 ಕಿ.ಮೀ ರಸ್ತೆಯೂ ಸೇರಿದೆ. 2017–18ರಲ್ಲಿ ಅತಿ ದಟ್ಟಣೆ ಕಾರಿಡಾರ್ ಅಭಿವೃದ್ಧಿಗೆ ಸರ್ಕಾರ ₹ 200 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ಅದರ ಕಾಮಗಾರಿಗಳು ಪ್ರಗತಿಯಲ್ಲಿವೆ. ಒಟ್ಟು 191 ಕಿ.ಮೀ ರಸ್ತೆಯಲ್ಲಿ 51 ಕಿ.ಮೀ ರಸ್ತೆಗಳನ್ನು ವೈಟ್‌ಟಾಪಿಂಗ್ ಮಾಡಲಾಗಿದೆ. ಅಂದರೆ, ಇನ್ನು ಅಭಿವೃದ್ಧಿಪಡಿಸುವುದಕ್ಕೆ ಬಾಕಿ ಇರುವುದು 67 ಕಿ.ಮೀ ಉದ್ದದ ರಸ್ತೆ ಮಾತ್ರ. ಆದರೂ 191 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿಗೆ ಟೆಂಡರ್ ಕರೆದಿರುವುದು ಏಕೆ ಎಂದು ಮುಖ್ಯಮಂತ್ರಿ ವಿವರಣೆ ಕೇಳಿದ್ದಾರೆ.

ವೈಟ್‌ಟಾಪಿಂಗ್ ಆಗಿರುವ ರಸ್ತೆಗಳ ನಿರ್ವಹಣೆಗೆ ಅತ್ಯಲ್ಪ ವೆಚ್ಚವಾಗುತ್ತದೆ. ಆದರೂ, ಕಾರಿಡಾರ್‌ಗಳ ನಿರ್ವಹಣೆಗೆ ಕೋಟ್ಯಂತರ ರೂಪಾಯಿ ವ್ಯಯಿಸುವ ಅಗತ್ಯವೇನು. ಹೆಬ್ಬಾಳ – ಕೆ.ಆರ್.ಪುರ – ಸಿಲ್ಕ್ ಬೋರ್ಡ್ ಹೊರವರ್ತುಲ ರಸ್ತೆಯಲ್ಲಿ ಮೆಟ್ರೊ ಮಾರ್ಗ ನಿರ್ಮಾಣವಾಗುವುದರಿಂದ ಈ ರಸ್ತೆಯನ್ನು ಈ ಹಂತದಲ್ಲಿ ಅಭಿವೃದ್ಧಿಪಡಿಸುವುದು ಕಾರ್ಯಸಾಧುವೇ ಎಂದೂ ಪ್ರಶ್ನಿಸಿದ್ದಾರೆ.

12 ಕಾರಿಡಾರ್‌ಗಳ ಅಭಿವೃದ್ಧಿಗೆ ₹ 335 ಕೋಟಿ ವ್ಯಯಿಸಿ, ಅವುಗಳ ನಿರ್ವಹಣೆಗೆ ಮತ್ತೆ ₹ 785 ಕೋಟಿ ವೆಚ್ಚ ಮಾಡಲಾಗುತ್ತದೆ ಎಂದು ಅಂದಾಜಿಸಲಾಗಿದೆ. ರಾಜ್ಯದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸಿದರೂ, ಎರಡು ವರ್ಷ ಅವುಗಳ ದೋಷ ಬಾಧ್ಯತಾ ಅವಧಿ ಇರುತ್ತದೆ. ಈ ಅವಧಿಯಲ್ಲಿ ಏನೇ ದೋಷ ಕಾಣಿಸಿಕೊಂಡರೂ ಗುತ್ತಿಗೆದಾರರೇ ದುರಸ್ತಿಪಡಿಸಬೇಕು ಹಾಗಿದ್ದರೂ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಿದ ಮೊದಲ ಎರಡು ವರ್ಷಗಳಿಗೆ ₹ 291.35 ಕೋಟಿ ವೆಚ್ಚ ಮಾಡುವುದಕ್ಕೆ ಸಮರ್ಥನೆ ನೀಡಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೆಆರ್‌ಡಿಸಿಎಲ್‌ಗೆ ನೀಡುವುದಕ್ಕೆ ಬಿಬಿಎಂಪಿ ಆಯುಕ್ತರು ಆರಂಭದಲ್ಲೇ ವಿರೋಧ ವ್ಯಕ್ತಪಡಿಸಿದ್ದರು. ಇವುಗಳ ನಿರ್ವಹಣೆಯನ್ನು ಬಿಬಿಎಂಪಿಗೇ ವಹಿಸುವುದಕ್ಕೆ ಹಿಂದಿನ ಮುಖ್ಯ ಕಾರ್ಯದರ್ಶಿಯವರು ಸಮನ್ವಯ ಸಮಿತಿ ಸಭೆಯಲ್ಲಿ ಸಮ್ಮತಿಯನ್ನೂ ನೀಡಿದ್ದರು. ಈಗ ಇವುಗಳನ್ನು ಯಾವ ಸಂಸ್ಥೆಯಿಂದ ಕಾಮಗಾರಿ ಅನುಷ್ಠಾನ ಮಾಡಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಬೇಕೂ ಎಂದೂ ಹೇಳಿದ್ದಾರೆ.

ಪ್ಯಾಕೇಜ್– 2ರಲ್ಲಿ ಟೆಂಡರ್‌ನಲ್ಲಿ ಎಲ್– 1 ಬಿಡ್‌ದಾರರಾಗಿದ್ದ ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ನಿಗದಿಪಡಿಸಿದಷ್ಟು ಆರ್ಥಿಕ ವಹಿವಾಟು ನಡೆಸಿಲ್ಲ ಎಂಬ ಕಾರಣಕ್ಕೆ ಎಲ್–2 ಗುತ್ತಿಗೆದಾರರಾಗಿದ್ದ ಆರ್.ಎಂ.ಎನ್ ಇನ್‌ಫ್ರಾಸ್ಟ್ರಕ್ಚರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಟೆಂಡರ್ ಮೊತ್ತಕ್ಕಿಂತ (₹ 145.29 ಕೋಟಿ) ಶೇ 5ರಷ್ಟು ಅಧಿಕ ಟೆಂಡರ್ ಪ್ರೀಮಿಯಂ (₹152.55 ಕೋಟಿ) ಮಿತಿ ನಿಗದಿಪಡಿಸಿ ಅನುಮೋದನೆ ನೀಡಲಾಗಿದೆ. ನಂತರ ಮತ್ತೆ ಜೆಎಂಸಿ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಗೆ ಟೆಂಡರ್ ಮೊತ್ತಕ್ಕಿಂತ ಶೇ 5ರಷ್ಟು ಅಧಿಕ ಪ್ರೀಮಿಯಂ ಮಿತಿ ನಿಗದಿಪಡಿಸಿ ಅನುಮೋದನೆ ನೀಡುವ ಮೂಲಕ ದ್ವಂದ್ವ ನಿರ್ಧಾರ ಕೈಗೊಂಡಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟಿದ್ದಾರೆ.

ಶ್ರೀನಿವಾಸಪುರ: ಕ್ರೈಸ್ತ ಧರ್ಮ ಪ್ರಚಾರಕರ ಮೇಲೆ ಹಲ್ಲೆ

ಕೋಲಾರ: ಜಿಲ್ಲೆಯ ಶ್ರೀನಿವಾಸಪುರದಲ್ಲಿ ಮತಾಂತರ ಮಾಡಲಾಗುತ್ತಿದೆ ಎಂದು ಆರೋಪಿಸಿ ಯುವಕರ ಗುಂಪೊಂದು ಭಾನುವಾರ ಕ್ರೈಸ್ತ ಧರ್ಮ ಪ್ರಚಾರಕರ ಮೇಲೆ ಹಲ್ಲೆ ನಡೆಸಿ, ಕರಪತ್ರಗಳನ್ನು ಸುಟ್ಟು ಹಾಕಿದೆ.

ಪಟ್ಟಣದ ಮೋತಿಲಾಲ್ ರಸ್ತೆ ನಿವಾಸಿ ಬೇಗಮ್ಮ ಎಂಬುವರ ಮನೆಗೆ ಬಂದಿದ್ದ ನಾಲ್ವರು ಕ್ರೈಸ್ತ ಧರ್ಮ ಪ್ರಚಾರಕರೊಂದಿಗೆ ವಾಗ್ವಾದಕ್ಕೆ ಇಳಿದ ಸ್ಥಳೀಯ ಯುವಕರ ಗುಂಪು, ಬಳಿಕ ಹಲ್ಲೆ ನಡೆಸಿದೆ. ಅಲ್ಲದೆ, ಅವರ ಬಳಿ ಇದ್ದ ಧರ್ಮ ಪ್ರಚಾರದ ಕರಪತ್ರಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದೆ ಎಂದು ಪೊಲೀಸರು ಹೇಳಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಿಂದ ಬಂದಿದ್ದ ನಾಲ್ವರು ಕ್ರೈಸ್ತ ಧರ್ಮ ಪ್ರಚಾರಕರು ಮೋತಿಲಾಲ್ ರಸ್ತೆ ಸುತ್ತಮುತ್ತ ಕ್ರೈಸ್ತ ಧರ್ಮ ಪ್ರಚಾರ ನಡೆಸುತ್ತಿದ್ದರು. ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ರಾಜ್ಯ ಒಕ್ಕಲಿಗರ ಸಂಘದ ಚುನಾವಣೆ ಅಂಗವಾಗಿ ನಗರದ ಕೆ.ಆರ್.ರಸ್ತೆಯ ಬಿಐಟಿ ಕಾಲೇಜಿನ ಮತಗಟ್ಟೆಯಲ್ಲಿ ಮತ ಚಲಾಯಿಸಿದ ಮಹಿಳೆಯರು ಭಾನುವಾರ ಶಾಯಿ ಗುರುತು ತೋರಿಸಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಪೊಲೀಸರಿಂದ ತಪ್ಪಿಸಿಕೊಳ್ಳುವಾಗ ಅಪಘಾತ: ಯುವಕ ಸಾವು

ಬೆಂಗಳೂರು: ವಾಹನಗಳ ತಪಾಸಣೆ ನಡೆಸುತ್ತಿದ್ದ ಪೊಲೀಸರಿಂದ ತಪ್ಪಿಸಿಕೊಳ್ಳುವಾಗ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಕೌಶಿಕ್ (19) ಎಂಬುವವರು ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರ ಮೃತಪಟ್ಟಿದ್ದಾರೆ.

'ನ್ಯೂ ಬಿನ್ನಿಪೇಟೆ ನಿವಾಸಿ ಕೌಶಿಕ್, ಚೇತನ್ ಎಂಬುವರ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿತ್ತು. ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಚೇತನ್ ಘಟನಾ ಸ್ಥಳದಿಂದ ಪರಾರಿಯಾಗಿದ್ದಾನೆ. ತೀವ್ರ ಗಾಯಗೊಂಡಿದ್ದ ಕೌಶಿಕ್ ಹಾಗೂ ಗೃಹ ರಕ್ಷಕ ದಳದ ಸಿಬ್ಬಂದಿ ರಾಧಾಕೃಷ್ಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಿಕಿತ್ಸೆಗೆ ಸ್ಪಂದಿಸದೇ ಕೌಶಿಕ್ ತೀರಿಕೊಂಡಿದ್ದಾರೆ. ರಾಧಾಕೃಷ್ಣ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತಿದೆ' ಎಂದೂ ತಿಳಿಸಿವೆ.

ಆರ್‌ಟಿಒ ಕಚೇರಿಯಿಂದ ಮರಳುತ್ತಿದ್ದರು: 'ಕೌಶಿಕ್ ಹಾಗೂ ಚೇತನ್, ಡಿ. 9ರಂದು ಉಲ್ಲಾಳದ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಗೆ ಹೋಗಿ ಮನೆಗೆ ಮರಳುತ್ತಿದ್ದರು. ಆರ್‌ಪಿಸಿ ಬಡಾವಣೆ ರಸ್ತೆಯಲ್ಲಿ ಪಿಎಸ್‌ಐ ನಿಂಗರಾಜು ಮತ್ತು ಹೆಡ್ ಕಾನ್‌ಸ್ಟೆಬಲ್ ಕೃಷ್ಣಮೂರ್ತಿ ಅವರು ವಾಹನಗಳ ತಪಾಸಣೆ ನಡೆಸುತ್ತಿದ್ದರು.'

'ಪೊಲೀಸರನ್ನು ನೋಡಿ ಹೆದರಿದ್ದ ಸವಾರರು, ಅವರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಅತಿವೇಗವಾಗಿ ಬೈಕ್ ಚಲಾಯಿಸಿ, ರಸ್ತೆಯಲ್ಲಿ ನಿಂತಿದ್ದ ರಾಧಾಕೃಷ್ಣ ಅವರಿಗೆ ಗುದ್ದಿಸಿದ್ದರು. ನಿಯಂತ್ರಣ ತಪ್ಪಿ ಬೈಕ್ ಉರುಳಿ ಬಿದ್ದಿತ್ತು. ಬೈಕ್ ಚಲಾಯಿಸುತ್ತಿದ್ದವರು ಯಾರೆಂದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದೂ ಮೂಲಗಳು ಹೇಳಿವೆ.

ರಾಜಭವನ ರಸ್ತೆಯಲ್ಲಿ ಜಗಳ, ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್

ಕಾರಿನಲ್ಲೇ ಲೈಂಗಿಕ ಕ್ರಿಯೆ: ಪತ್ನಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹೋದ್ಯೋಗಿ ಯುವತಿ ಜೊತೆ ಸಲುಗೆ ಬೆಳೆಸಿದ್ದ ನನ್ನ ಪತಿಯು, ಆ ಯುವತಿ ಜೊತೆ ಕಾರಿನಲ್ಲೇ ಲೈಂಗಿಕ ಕ್ರಿಯೆ ನಡೆಸಿ ಸಿಕ್ಕಿಬಿದ್ದಿದ್ದಾರೆ' ಎಂದು ಮಹಿಳೆಯೊಬ್ಬರು ವಿಧಾನಸೌಧ ಠಾಣೆಗೆ ದೂರು ನೀಡಿದ್ದಾರೆ. ಇದಕ್ಕೆ ಪ್ರತಿಯಾಗಿ ಯುವತಿ ಸಹ ದೂರು ಕೊಟ್ಟಿದ್ದಾರೆ.

'ಕೌಟುಂಬಿಕ ಹಾಗೂ ಅಕ್ರಮ ಸಂಬಂಧದ ವಿಚಾರವಾಗಿ ರಾಜಭವನ ರಸ್ತೆಯಲ್ಲಿ ಮಹಿಳೆ, ಆಕೆಯ ಪತಿ ಹಾಗೂ ಯುವತಿ ನಡುವೆ ಡಿ. 6ರಂದು ರಾತ್ರಿ ಗಲಾಟೆ ನಡೆದಿದೆ. ಈ ಬಗ್ಗೆ ಎರಡು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಎರಡೂ ಕಡೆಯ ದೂರುದಾರರಿಂದ ಹೇಳಿಕೆ ಪಡೆಯಲಾಗಿದೆ. ಸ್ಥಳದಲ್ಲಿ ಏನಾಯಿತು ಹಾಗೂ ಗಲಾಟೆಗೆ ನಿಖರ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪತ್ನಿಯ ದೂರಿನ ವಿವರ: 'ಮದುವೆಯಾದ ಆರಂಭದಲ್ಲಿ ನನ್ನ ಜೊತೆ ಚೆನ್ನಾಗಿದ್ದ ಪತಿ, ಇತ್ತೀಚೆಗೆ ವಿನಾಕಾರಣ ಜಗಳ ಮಾಡಲಾರಂಭಿಸಿದ್ದರು. ನನ್ನಿಂದ ದೂರವಾಗಲು ಇಚ್ಛಿಸುತ್ತಿದ್ದರು. ಅವರ ನಡೆಯಿಂದ ಅನುಮಾನ ಬಂದಿತ್ತು. ಸ್ನೇಹಿತರನ್ನು ವಿಚಾರಿಸಿದಾಗ, ಅವರು ಕೆಲಸ ಮಾಡುತ್ತಿದ್ದ ಕಂಪನಿಯ ಸಹೋದ್ಯೋಗಿ ಯುವತಿ ಜೊತೆ ಸಲುಗೆ ಇರುವುದು ತಿಳಿಯಿತು' ಎಂದು ಪತ್ನಿ ದೂರಿನಲ್ಲಿ ಹೇಳಿದ್ದಾರೆ.

'ಡಿ. 6ರಂದು ಸಂಜೆ ಯುವತಿ ಹಾಗೂ ನಾಲ್ವರು ಸ್ನೇಹಿತರ ಜೊತೆಯಲ್ಲಿ ಪತಿ ಹಲಸೂರು ಬಳಿಯ ಹೋಟೆಲ್‌ಗೆ ಹೋಗಿ ಪಾರ್ಟಿ ಮಾಡಿದ್ದರು. ಈ ಬಗ್ಗೆ ಗೊತ್ತಾಗುತ್ತಿದ್ದಂತೆ ಗ್ರಾಹಕರ ರೀತಿಯಲ್ಲಿ ಹೋಟೆಲ್‌ಗೆ ಹೋಗಿ ಮರೆಯಲ್ಲಿ ನಿಂತು ಗಮನಿಸಿದ್ದೆ. ಮದ್ಯದ ಅಮಲಿನಲ್ಲಿದ್ದ ಎಲ್ಲರೂ ಹೋಟೆಲ್‌ನಿಂದ ರಾತ್ರಿ ಕಾರಿನಲ್ಲಿ ಹೊರಟಿದ್ದರು. ಅವರನ್ನು ನಾನೂ ಕಾರಿನಲ್ಲಿ ಹಿಂಬಾಲಿಸಿದ್ದೆ.'

'ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣ ಬಳಿ ನಾಲ್ವರು ಸ್ನೇಹಿತರನ್ನು ಪತಿ ಕಾರಿನಿಂದ ಇಳಿಸಿದ್ದರು. ನಂತರ, ಯುವತಿಯೊಬ್ಬರನ್ನೇ ಕಾರಿನ ಮುಂದಿನ ಸೀಟಿನಲ್ಲಿ ಕೂರಿಸಿಕೊಂಡು ರಾಜಭವನ ರಸ್ತೆಯತ್ತ ಹೊರಟಿದ್ದರು. ಮಾರ್ಗಮಧ್ಯೆಯೇ ರಸ್ತೆ ಬದಿ ಕಾರು ನಿಲ್ಲಿಸಿದ್ದ ಅವರಿಬ್ಬರು, ಪರಸ್ಪರ ಆಲಂಗಿಸಿಕೊಂಡು ಚುಂಬಿಸುತ್ತ ಲೈಂಗಿಕ ಕ್ರಿಯೆ ನಡೆಸಲಾರಂಭಿಸಿದ್ದರು. ನಾನು ಹೋಗಿ ಕಾರಿನ ಬಳಿ ನಿಲ್ಲುತ್ತಿದ್ದಂತೆ ಇಬ್ಬರೂ ಗಾಬರಿಯಿಂದ ವಾಹನದಿಂದ ಕೆಳಗೆ ಇಳಿದರು' ಎಂದೂ ದೂರಿನಲ್ಲಿ ಹೇಳಿದ್ದಾರೆ.

ಯುವತಿ ದೂರಿನ ವಿವರ: ವ್ಯವಸ್ಥಾಪಕರ ಪತ್ನಿ ವಿರುದ್ಧ ಯುವತಿ ಸಹ ದೂರು ನೀಡಿದ್ದಾರೆ.

'ಡ್ರಗ್ಸ್‌ಗೆ ಪೀಡಿಸಿ, ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯ'

ಬೆಂಗಳೂರು: 'ಡ್ರಗ್ಸ್ ತೆಗೆದುಕೊಳ್ಳುವಂತೆ ಪೀಡಿಸುತ್ತಿರುವ ಪತಿ, ಅಸ್ವಾಭಾವಿಕ ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿದ್ದಾರೆ' ಎಂದು ಆರೋಪಿಸಿ ಗೃಹಿಣಿಯೊಬ್ಬರು ನಗರದ ಬಸವನಗುಡಿ ಮಹಿಳಾ ಠಾಣೆಗೆ ದೂರು ನೀಡಿದ್ದಾರೆ.

'ನಗರದ ನಿವಾಸಿಯಾಗಿರುವ 30 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅವರ ಪತಿ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆಯ ಪತಿ, ಖಾಸಗಿ ಕಂಪನಿ ಉದ್ಯೋಗಿ. ಕೆಲ ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿ, ಆರಂಭದ ದಿನದಿಂದಲೂ ಲೈಂಗಿಕ ಕ್ರಿಯೆ ವಿಚಾರವಾಗಿ ಪರಸ್ಪರ ಮೈಮನಸ್ಸು ಹೊಂದಿದ್ದರು. ಅದನ್ನೇ ನೆಪವಾಗಿಟ್ಟುಕೊಂಡಿದ್ದ ಪತಿ, ನಿತ್ಯವೂ ಚಿತ್ರಹಿಂಸೆ ನೀಡುತ್ತಿದ್ದರು. ಮಹಿಳೆಯ ತಾಯಿ ಹಾಗೂ ತಂಗಿಯನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಈ ಸಂಗತಿ ಮಹಿಳೆಯ ದೂರಿನಲ್ಲಿದೆ' ಎಂದೂ ತಿಳಿಸಿವೆ.

ಅಪರಾಧ ಸುದ್ದಿ

ಕ್ಷುಲ್ಲಕ ಕಾರಣಕ್ಕೆ ಜಗಳ: ಇರಿದು ಕೊಲೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರನ್ನು ಚಾಕುವಿನಿಂದ ಇರಿದು ಭಾನುವಾರ ರಾತ್ರಿ ಕೊಲೆ ಮಾಡಲಾಗಿದೆ.

'ಕೊಲೆಯಾದ ವ್ಯಕ್ತಿ ಹೆಸರು ಗೊತ್ತಾಗಿಲ್ಲ. ಅವರದ್ದು 35 ವಯಸ್ಸಿರಬಹುದು. ಕೃತ್ಯ ಎಸಗಿದ್ದು ಆಫ್ರಿಕಾ ಪ್ರಜೆ ಎಂಬ ಮಾಹಿತಿ ಸಿಕ್ಕಿದೆ' ಎಂದು ಪೊಲೀಸರು ಹೇಳಿದರು.

'ಕುಳ್ಳಪ್ಪ ವೃತ್ತದಲ್ಲಿ ವ್ಯಕ್ತಿ ಹಾಗೂ ಆಫ್ರಿಕಾ ಪ್ರಜೆಗಳು ನಡೆದುಕೊಂಡು ಹೊರಟಿದ್ದರು. ಕ್ಷುಲ್ಲಕ ಕಾರಣಕ್ಕೆ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಅದೇ ಸಂದರ್ಭದಲ್ಲಿ ಆಫ್ರಿಕಾ ಪ್ರಜೆ, ಚಾಕುವಿನಿಂದ ವ್ಯಕ್ತಿಯ ದೇಹದ ಹಲವೆಡೆ ಇರಿದಿದ್ದ. ರಕ್ತಸ್ರಾವದಿಂದ ವ್ಯಕ್ತಿ ಮೃತಪಟ್ಟಿದ್ದಾನೆ' ಎಂದೂ ತಿಳಿಸಿದರು. 'ಕೊಲೆಯಾದ ವ್ಯಕ್ತಿ ಹಾಗೂ ಆರೋಪಿ, ಪರಿಚಯಸ್ಥರೆಂದು ತಿಳಿದುಬಂದಿದೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ಹೇಳಿದರು.

'ಮುಸ್ಲಿಮರನ್ನು ದೂರವಿಡಲು ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಂ ಸಮುದಾಯವನ್ನು ರಾಜಕೀಯ ವಲಯದಿಂದ ದೂರ ಇರಿಸುವ ಪ್ರಯತ್ನ ನಡೆಯುತ್ತಿದೆ' ಎಂದು ಪತ್ರಕರ್ತ ಆಕಾರ್ ಪಟೇಲ್ ಅಭಿಪ್ರಾಯಪಟ್ಟರು.

ನಗರದಲ್ಲಿ 'ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಎಮಿಟಿ (ಎಫ್‌ಡಿಸಿಎ–ಕೆ)' ಭಾನುವಾರ ಆಯೋಜಿಸಿದ್ದ 'ಬಿಕ್ಕಟ್ಟಿನಲ್ಲಿ ಪ್ರಜಾಪ್ರಭುತ್ವ–ಮುಂದಿನ ಹಾದಿ' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ದೇಶದ ಯಾವುದೇ ರಾಜ್ಯದಲ್ಲಿ ಮುಸ್ಲಿಂ ಮುಖ್ಯಮಂತ್ರಿ ಇಲ್ಲ. 15 ರಾಜ್ಯಗಳಲ್ಲಿ ಯಾವುದೇ ಮುಸ್ಲಿಂ ಸಚಿವರಿಲ್ಲ. ಕೆಲವೇ ರಾಜ್ಯಗಳಲ್ಲಿ ಮುಸ್ಲಿಂ ಸಚಿವರಿದ್ದಾರೆ. ಆದರೆ, ಅವರಿಗೆ ವಕ್ಫ್ ಖಾತೆಗಳನ್ನಷ್ಟೇ ನೀಡಲಾಗಿದೆ. ಉತ್ತರ ಪ್ರದೇಶದಲ್ಲಿ ಮುಸ್ಲಿಂ ಶಾಸಕರು ಇಲ್ಲದ ಕಾರಣಕ್ಕೆ ವಕ್ಫ್ ಖಾತೆಯನ್ನು ಹಿಂದೂ ಸಮುದಾಯಕ್ಕೆ ನೀಡಲಾಗಿದೆ' ಎಂದು ವಸ್ತುಸ್ಥಿತಿ ವಿವರಿಸಿದರು.

'ರಾಜಕೀಯವಾಗಿ ಮುಸ್ಲಿಂ ಸಮುದಾಯವನ್ನು ಸೋಲಿಸಬೇಕು ಎಂದು ಜನಸಂಘದ ಮುಖ್ಯಸ್ಥರಾಗಿದ್ದ ದೀನ ದಯಾಳ ಉಪಾಧ್ಯಾಯ ಅವರು 1965ರಲ್ಲಿ ಭಾಷಣ ಮಾಡಿದ್ದರು. ಪ್ರಸ್ತುತ ಪರಿಸ್ಥಿತಿ ವಿಶ್ಲೇಷಿಸಿದಾಗ ಬಿಜೆಪಿ ಮತ್ತು ಜನಸಂಘ ತಮ್ಮ ಗುರಿ ಸಾಧಿಸಿರುವುದನ್ನು ಕಾಣಬಹುದು. ಎಲ್ಲ ರೀತಿಯ ಕೃತ್ಯಗಳಿಗೆ ಮುಸ್ಲಿಂ ಸಮುದಾಯವನ್ನೇ ಗುರಿ ಮಾಡಲಾಗುತ್ತಿದೆ. ಕೋವಿಡ್ ಹಬ್ಬಲು ಮುಸ್ಲಿಮರೇ ಕಾರಣ ಎನ್ನುವ ಆರೋಪ ಮಾಡಲಾಯಿತು' ಎಂದು ಹೇಳಿದರು.

'2014ರ ಬಳಿಕ ದೇಶದ ಆರ್ಥಿಕ ಸ್ಥಿತಿಯೂ ಕುಸಿತವಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಬಿಜೆಪಿ ಕಟುವಾಗಿ ಟೀಕಿಸಿತ್ತು. ಆದರೆ, ಆಡಳಿತಕ್ಕೆ ಬಂದ ನಂತರ ಇದೇ ಯೋಜನೆಯನ್ನು ಮುಂದುವರಿಸಿ ಹಿಂದಿನ ಸರ್ಕಾರಕ್ಕಿಂತ 14 ಪಟ್ಟು ಹೆಚ್ಚು ಅನುದಾನ ನೀಡಿತು' ಎಂದರು.

ಜಮಾತ್ ಎ ಇಸ್ಲಾಮಿ ಹಿಂದ್ ರಾಷ್ಟ್ರೀಯ ಅಧ್ಯಕ್ಷ ಸೈಯದ್ ಸಾದತ್ ಉಲ್ಲಾ ಹುಸೈನಿ ಮಾತನಾಡಿ, 'ವೈವಿಧ್ಯಮಯ ಮತ್ತು ಬಹು ಸಂಸ್ಕೃತಿ ಮತ್ತು ಭಾಷೆಗಳಿರುವ ಭಾರತದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಕುಸಿಯುತ್ತಿರುವುದು ದೊಡ್ಡ ಸವಾಲು' ಎಂದರು'

'ಸರ್ಕಾರದ ಟೀಕೆಗೆ ದೇಶದ್ರೋಹ ಪ್ರಕರಣ'

'ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಇಂದು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ. ಸರ್ಕಾರವನ್ನು ಟೀಕಿಸಿದರೆ ದೇಶದ್ರೋಹ ಪ್ರಕರಣ ದಾಖಲಿಸಲಾಗುತ್ತಿದೆ. ಎನ್‌ಕೌಂಟರ್ ಹೆಸರಿನಲ್ಲಿ ಅಮಾಯಕರನ್ನು ಸಾಯಿಸಲಾಗುತ್ತಿದೆ' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಕಳವಳ ವ್ಯಕ್ತಪಡಿಸಿದರು.

ಕೋನರಡ್ಡಿ ಕಾಂಗ್ರೆಸ್ ಸೇರ್ಪಡೆ ನಾಳೆ

ನವಲಗುಂದ(ಧಾರವಾಡ ಜಿಲ್ಲೆ): ಜೆಡಿಎಸ್ ಮುಖಂಡ ಎನ್.ಎಚ್. ಕೋನರಡ್ಡಿ ಇದೇ 14 ರಂದು, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಬೆಳಗಾವಿಯಲ್ಲಿ ಅಧಿಕೃತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ.

ಸುದ್ದಿ 2 ನಿಮಿಷ

ಹೊಸ ಶಾಲೆ: ಅರ್ಜಿ ಸಲ್ಲಿಸಲು ಜ. 15 ಕೊನೆಯ ದಿನ

ಬೆಂಗಳೂರು: 2022–23ನೇ ಸಾಲಿನಲ್ಲಿ ಹೊಸದಾಗಿ ಖಾಸಗಿ ಅನುದಾನರಹಿತ ಪೂರ್ವ ಪ್ರಾಥಮಿಕ, ಪ್ರಾಥಮಿಕ ಕಿರಿಯ, ಹಿರಿಯ ಹಾಗೂ ಪ್ರೌಢ ಶಾಲೆಗಳನ್ನು ಆರಂಭಿಸಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನವನ್ನು ಜ. 15ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ನ. 30 ಕೊನೆಯ ದಿನವೆಂದು ನಿಗದಿಪಡಿಸಲಾಗಿತ್ತು. ಕಾಲಾವಕಾಶವನ್ನು ವಿಸ್ತರಿಸುವಂತೆ ಅನೇಕ ಸಂಘ, ಸಂಸ್ಥೆಗಳು ಮನವಿ ಮಾಡಿದ್ದವು.

ಅರ್ಹ ನೋಂದಾಯಿತ ಸಂಸ್ಥೆಗಳು ಹೊಸ ಶಾಲೆಗಳ ನೋಂದಣಿಗೆ ಜ. 15ರ ಒಳಗೆ ಅರ್ಜಿ ಸಲ್ಲಿಸಬಹುದು. ಸಲ್ಲಿಕೆಯಾದ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ, ಜ. 24ರ ಒಳಗೆ ಜಿಲ್ಲಾ ಉಪ ನಿರ್ದೇಶಕರಿಗೆ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಸಂಬಂಧಿಸಿದ ಆಯುಕ್ತಾಲಯಗಳಲ್ಲಿ ಅರ್ಜಿಗಳನ್ನು ಇತ್ಯರ್ಥಪಡಿಸಿ, ಮಂಜೂರಾತಿ ಅಥವಾ ತಿರಸ್ಕರಿಸಿ ಆದೇಶ ಹೊರಡಿಸಲು ಫೆ. 18 ಕೊನೆಯ ದಿನ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಿದುಳು ಲೋಕ ಪ್ರತಿಮೆ ಅನಾವರಣ



ಬೆಂಗಳೂರು: 'ಚಿಂತೆ ಬಿಟ್ಟು ಚಿಂತನೆಗಳನ್ನು ಮಾಡಬೇಕು. ನಾವು ಮಿದುಳನ್ನು ಶೇ 10ರಷ್ಟು ಮಾತ್ರ ಬಳಸುತ್ತಿದ್ದೇವೆ. ಮಿದುಳನ್ನು ಸಮರ್ಥವಾಗಿ ಬಳಸಿಕೊಳ್ಳುವಂತಾಗಬೇಕು' ಎಂದು ಮನೋರೋಗ ತಜ್ಞ ಡಾ.ಸಿ.ಆರ್. ಚಂದ್ರಶೇಖರ್ ತಿಳಿಸಿದರು.

ಮಿದುಳತ್ವ ಸಂಸ್ಥೆ ಮತ್ತು ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್ ನಗರದಲ್ಲಿ ಆಯೋಜಿಸಿದ್ದ 'ಮಿದುಳು ಲೋಕ ಪ್ರತಿಮೆ' ಅನಾವರಣ ಕಾರ್ಯಕ್ರಮದಲ್ಲಿ ಅವರು ಭಾನುವಾರ ಮಾತನಾಡಿದರು.

ಮಿದುಳತ್ವ ಸಂಸ್ಥೆಯ ಅಧ್ಯಕ್ಷ ಸಿ.ಎಸ್. ಹನುಮಂತಪ್ಪ,'ಮಿದುಳಿನ ಬೆಳವಣಿಗೆಯ ಹಂತಗಳನ್ನು ಚಿತ್ರಗಳ ಮೂಲಕ ಸಂಗ್ರಹಾಲಯದಲ್ಲಿ ವಿವರಿಸಲಾಗಿದೆ. ಮಿದುಳಿನ ಲೋಕ ಪ್ರತಿಮೆಯ ಮೂಲಕ ಜನರನ್ನು ವೈಜ್ಞಾನಿಕ ಚಿಂತನೆಗೆ ಪ್ರೇರೇಪಿಸುತ್ತಿದ್ದೇವೆ' ಎಂದರು.

'ಇತಿಹಾಸದಲ್ಲೂ ಜ್ಞಾನಾಭಿವೃದ್ಧಿಯ ಬಗ್ಗೆ ಹೇಳಿದ್ದಾರೆ. ಚಾರ್ವಾಕ, ಬುದ್ಧ, ಬಸವಣ್ಣ, ಕುವೆಂಪು ಎಲ್ಲರೂ ವೈಜ್ಞಾನಿಕ ಸತ್ಯದ ವಿಚಾರವನ್ನು ಪ್ರತಿಪಾದಿಸಿದ್ದಾರೆ. ಮಿದುಳತ್ವ ಸಂಸ್ಥೆಯೂ ಜನರಲ್ಲಿ ವೈಜ್ಞಾನಿಕ ಚಿಂತನೆ ಮಾಡುವಂತೆ ಮಾಡುತ್ತಿದೆ' ಎಂದು ಜಿ. ರಾಮಕೃಷ್ಣ ಹೇಳಿದರು.

ಕೋವಿಡ್ ಸೋಂಕಿತೆಯ ಸರ ಕಳವು: ಆಸ್ಪತ್ರೆ ಸಿಬ್ಬಂದಿ ಬಂಧನ

ಬೆಂಗಳೂರು: ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಾಗಿದ್ದ ಕೋವಿಡ್ ಸೋಂಕಿತೆಯ ಚಿನ್ನದ ಸರ ಕಳವು ಮಾಡಿದ್ದ ಆರೋಪದಡಿ, ಅದೇ ಆಸ್ಪತ್ರೆಯ ಸಹಾಯಕ ಸಿಬ್ಬಂದಿ ಇಮ್ತಿಯಾಜ್ (27) ಎಂಬಾತನನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಚಿತ್ರದುರ್ಗದ ಇಮ್ತಿಯಾಜ್, ಹೆಸರಘಟ್ಟ ಮುಖ್ಯರಸ್ತೆಯಲ್ಲಿ ವಾಸವಿದ್ದ. ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಆಸ್ಪತ್ರೆಯೊಂದರಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಆತನಿಂದ ₹ 3 ಲಕ್ಷ ಮೌಲ್ಯದ ಚಿನ್ನದ ಮಾಂಗಲ್ಯ ಸರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕೋವಿಡ್ ಸೋಂಕಿಗೆ ತುತ್ತಾಗಿದ್ದ 65 ವರ್ಷದ ವೃದ್ಧೆ, ತೀವ್ರ ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಏಪ್ರಿಲ್ 22ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ತುರ್ತು ನಿಗಾ ಘಟಕದಲ್ಲಿ (ಐಸಿಯು) ವೆಂಟಿಲೇಟರ್ ಅಳವಡಿಸಿ ವೃದ್ಧೆಗೆ ಚಿಕಿತ್ಸೆ ನೀಡಲಾಗುತ್ತಿತ್ತು.'

'ಆರೋಗ್ಯ ತೀವ್ರ ಹದಗೆಟ್ಟಿದ್ದರಿಂದ ವೃದ್ಧೆ ಕೆಲ ದಿನ ಪ್ರಜ್ಞೆ ಕಳೆದುಕೊಂಡಿದ್ದರು. ಐಸಿಯುನಲ್ಲೇ ಕೆಲಸ ಮಾಡುತ್ತಿದ್ದ ಆರೋಪಿ ಇಮ್ತಿಯಾಜ್, ವೃದ್ಧೆಯ ಮಾಂಗಲ್ಯ ಸರವನ್ನು ಬಿಚ್ಚಿಕೊಂಡಿದ್ದ. ಕೆಲ ದಿನಗಳ ನಂತರ ವೃದ್ಧೆ ಚೇತರಿಸಿಕೊಂಡಾಗ ಮಾಂಗಲ್ಯ ಸರ ಕಳುವಾಗಿದ್ದು ಗಮನಕ್ಕೆ ಬಂದಿತ್ತು. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮಗಳ ಮೂಲಕ ಠಾಣೆಗೆ ದೂರು ಕೊಟ್ಟಿದ್ದರು' ಎಂದೂ ಪೊಲೀಸರು ತಿಳಿಸಿದರು.

ಸಾಲ ತೀರಿಸಲು ಕಳವು: 'ಆರೋಪಿ ಇಮ್ತಿಯಾಜ್ ಹಲವು ಕಡೆ ಸಾಲ ಮಾಡಿಕೊಂಡಿದ್ದ. ಕೋವಿಡ್ ಸಂದರ್ಭದಲ್ಲಿ ಸಾಲ ತೀರಿಸಲು ಆಗಿರಲಿಲ್ಲ. ಅದೇ ಚಿಂತೆಯಲ್ಲಿದ್ದ ಆತ, ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲೇ ವೃದ್ಧೆಯ ಮಾಂಗಲ್ಯ ಸರ ಕದ್ದಿದ್ದ. ಈ ಬಗ್ಗೆ ಆತನೇ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ವಿವರಿಸಿದರು.

ಆಟೊ ಚಾಲಕನ ಸುಲಿಗೆ: ನಾಲ್ವರ ಬಂಧನ

ಬೆಂಗಳೂರು: ಆಟೊ ಚಾಲಕನನ್ನು ಪ್ರಯಾಣಿಕರ ಸೋಗಿನಲ್ಲಿ ಬಾಡಿಗೆಗೆ ಕರೆದೊಯ್ದು ಸುಲಿಗೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

'ನಾಗೇಂದ್ರ, ದೊಡ್ಡವೀರೇಗೌಡ, ದರ್ಶನ್ ಹಾಗೂ ಶಿವಕುಮಾರ್ ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ ಆಟೊ, ಚಿನ್ನದ ಸರ, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಟೊ ಚಾಲಕರೊಬ್ಬರು ನ. 11ರಂದು ರಾತ್ರಿ 11 ಗಂಟೆ ಸುಮಾರಿಗೆ ಠಾಣೆ ವ್ಯಾಪ್ತಿಯಲ್ಲಿ ಹೊರಟಿದ್ದರು. ರಸ್ತೆಯಲ್ಲಿ ಆಟೊಗೆ ಕೈ ಮಾಡಿದ್ದ ನಾಲ್ವರು ಆರೋಪಿಗಳು, ಲಗ್ಗೆರೆಗೆ ಬಾಡಿಗೆಗೆ ಬರುವಂತೆ ಕೇಳಿದ್ದರು. ಅದಕ್ಕೆ ಒಪ್ಪಿದ್ದ ಚಾಲಕ, ಆರೋಪಿಗಳನ್ನು ಹತ್ತಿಸಿಕೊಂಡು ಸ್ಥಳದಿಂದ ಹೊರಟಿದ್ದರು.'

'ಆಟೊ ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಚಾಲಕನ ಮೇಲೆ ಆರೋಪಿಗಳು ದಾಳಿ ಮಾಡಿದ್ದರು. ಚಿನ್ನದ ಸರ, ಎರಡು ಮೊಬೈಲ್ ಹಾಗೂ ನಗದು ಕಿತ್ತುಕೊಂಡಿದ್ದರು. ಸಹಾಯಕ್ಕಾಗಿ ಚಾಲಕ ಚೀರಾಡಿದ್ದರು. ಅವರನ್ನು ರಸ್ತೆಯಲ್ಲೇ ತಳ್ಳಿದ್ದ ಆರೋಪಿಗಳು, ಆಟೊ ಸಮೇತ ಪರಾರಿಯಾಗಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಚಾಲಕ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮತ್ತಷ್ಟು ಕಡೆಗಳಲ್ಲಿ ಆರೋಪಿಗಳು ಸುಲಿಗೆ ಮಾಡಿರುವ ಮಾಹಿತಿ ಇದೆ' ಎಂದೂ ಹೇಳಿದರು.

ಅಕ್ರಮ ಚಿನ್ನ ಸಾಗಣೆ

ದೇವನಹಳ್ಳಿ: ವಿಶೇಷವಾಗಿ ಹೊಲಿಸಲಾದ ಪ್ಯಾಂಟ್ ಮತ್ತು ಒಳಉಡುಪಿನಲ್ಲಿ ಅಕ್ರಮವಾಗಿ ಚಿನ್ನ ಸಾಗಣೆ ಮಾಡುತ್ತಿದ್ದ ಪ್ರಯಾಣಿಕರೊಬ್ಬರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಭಾನುವಾರ ಪತ್ತೆ ಮಾಡಿದ್ದಾರೆ. ಆತನಿಂದ ₹30 ಲಕ್ಷ ಮೌಲ್ಯದ 602 ಗ್ರಾಂ ಪೇಸ್ಟ್ ರೂಪದ ಚಿನ್ನ ಜಪ್ತಿ ಮಾಡಿದ್ದಾರೆ.

ಶಾರ್ಜಾದಿಂದ ಬಂದಿಳಿದ ಪ್ರಯಾಣಿಕನನ್ನು ಕಸ್ಟಮ್ಸ್ ಸಿಬ್ಬಂದಿ ತಪಾಸಣೆ ಮಾಡುವಾಗ ಅಕ್ರಮ ಚಿನ್ನ ಸಾಗಣೆ ಪತ್ತೆಯಾಗಿದೆ.

ನಗರದಲ್ಲಿ ಇಂದು

'1954ರಿಂದ ಬಿಇಎಲ್‌ನ ಪ್ರಯಾಣ' ವಸ್ತು ಪ್ರದರ್ಶನ: ಆನ್‌ಲೈನ್ ಮೂಲಕ ಉದ್ಘಾಟನೆ–ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆಯೋಜನೆ ಮತ್ತು ಸ್ಥಳ–ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್), ಬೆಂಗಳೂರು ಕಾಂಪ್ಲೆಕ್ಸ್, ಜಾಲಹಳ್ಳಿ, ಬೆಳಿಗ್ಗೆ 10

ಹಿಯರಿಂಗ್ ವೆಲ್‌ನೆಸ್ ಕ್ಲಿನಿಕ್ ಉದ್ಘಾಟನೆ: ರೀತ್ ಅಬ್ರಾಹಂ, ಸ್ಥಳ–ವಸಂತಪ್ಪ ಬ್ಲಾಕ್, ಸಿಬಿಐ ರಸ್ತೆ, ಗಂಗಾನಗರ, ಬೆಳಿಗ್ಗೆ 11.30


ಬನ್ನಂಜೆ ಗೋವಿಂದಾಚಾರ್ಯರ ಆರಾಧನೆ: ಅತಿಥಿಗಳು–ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು, ಎಸ್.ಎನ್.ಸೇತುರಾಂ, ವಿದ್ಯಾಭೂಷಣ, ಮಲ್ಲೇಪುರಂ ಜಿ.ವೆಂಕಟೇಶ್, ಎಚ್.ವಿ.ನಾಗರಾಜರಾವ್, ಶ್ರೀನಿವಾಸ ವರಖೇಡಿ, ಆಯೋಜನೆ–ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ–ದಯಾನಂದ ಸಾಗರ ಕಾಲೇಜು ಸಭಾಂಗಣ, ಕುಮಾರಸ್ವಾಮಿ ಬಡಾವಣೆ, ಸಂಜೆ 4

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಬಿ.ನಾರಾಯಣಪುರ ಕೆರೆ ಸೇರುತ್ತಿರುವ ಚರಂಡಿ ನೀರು

ಕೆರೆಗೆ ಕೊಳಚೆ ನೀರು ಸೇರ್ಪಡೆ

ಕೆ.ಆರ್.ಪುರ ಕ್ಷೇತ್ರದ ಬಿ.ನಾರಾಯಣಪುರ ಕೆರೆಗೆ ಚರಂಡಿ ನೀರು ನಿರಂತರವಾಗಿ ಹರಿದು ಸೇರುತ್ತಿದೆ. ಕೆರೆಯಲ್ಲಿ ಮತ್ತೊಂದೆಡೆ ಅಕ್ರಮವಾಗಿ ಮೀನುಗಾರಿಕೆ ನಡೆಯುತ್ತಿದೆ. ಸ್ಥಳೀಯರು ಕೆರೆಯಂಗಳದಲ್ಲೇ ತೋಟ ಮಾಡಿಕೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಧಿಕಾರಿಗಳಿಗೆ ಅನೇಕ ಬಾರಿ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಕೊಳಚೆಯಿಂದಾಗಿ ಕೆರೆ ನೀರು ಮಲಿನಗೊಳ್ಳುತ್ತಿದೆ. ಕೆರೆಯ ಅತಿಕ್ರಮಣವೂ ನಡೆಯುತ್ತಿದ್ದು, ಈಗಲೇ ಇವುಗಳನ್ನು ನಿಯಂತ್ರಿಸಬೇಕು.

ಶ್ರೀನಿವಾಸ್, ಸ್ಥಳೀಯ



ಚರಂಡಿ ಸಂಪರ್ಕವಿಲ್ಲದ ತಿರುಮೇನಹಳ್ಳಿಯ ಬೋವಿ ಕಾಲೊನಿ

ಚರಂಡಿ ನಿರ್ಮಿಸಿ

ಕೆ.ಆರ್.ಪುರ ಸಮೀಪದ ತಿರುಮೇನಹಳ್ಳಿಯ ಭೋವಿ ಕಾಲೊನಿಯಲ್ಲಿ ಸಮರ್ಪಕವಾದ ಚರಂಡಿ ನಿರ್ಮಿಸದ ಕಾರಣ ರಸ್ತೆಯಲ್ಲಿ ಕೊಳಚೆ ನೀರು ನಿಂತು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತಿದೆ. ಮಳೆ ಬಂದಾಗ ಕೊಳಚೆ ನೀರು ರಸ್ತೆಯಲ್ಲೇ ನಿಂತು ದುರ್ವಾಸನೆ ಬೀರುತ್ತದೆ. ಚರಂಡಿ ನಿರ್ಮಿಸುವಂತೆ ಹಲವು ವರ್ಷಗಳಿಂದ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿದ್ದೇವೆ. ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಅವರು ಸ್ಥಳಕ್ಕೆ ಭೇಟಿ ನೀಡಿ, ಚರಂಡಿ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೂ, ಕಾಮಗಾರಿಯನ್ನು ಅಧಿಕಾರಿಗಳು ಕೈಗೆತ್ತಿಕೊಂಡಿಲ್ಲ. ಕಾಲೊನಿ ನಿವಾಸಿಗಳ ಆರೋಗ್ಯ ದೃಷ್ಟಿಯಿಂದಾದರೂ ಶೀಘ್ರವಾಗಿ ಚರಂಡಿ ಕಾಮಗಾರಿ ಆರಂಭಿಸಿ.

ಚಂದ್ರಶೇಖರ್, ತಿರುಮೇನಹಳ್ಳಿ

ರಸ್ತೆಯೇ ಕಸದ ತೊಟ್ಟಿ

ಜಲಭವನದ ಸಮೀಪ ಬನ್ನೇರುಘಟ್ಟ ಮುಖ್ಯರಸ್ತೆ ಹಾಗೂ ಈಸ್ಟ್ ಎಂಡ್ ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ಅಕ್ಷರಶಃ ಕಸದ ತೊಟ್ಟಿಯಂತಾಗಿದೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಸತ್ತ ಪ್ರಾಣಿಗಳನ್ನೂ ಇಲ್ಲೇ ತಂದು ಬಿಸಾಡಿ ಹೋಗುತ್ತಾರೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ಪಾಲಿಕೆಯ ವಾಹನಗಳೂ ರಸ್ತೆಯಲ್ಲೇ ಕಸ ವಿಲೇವಾರಿ ಮಾಡುತ್ತವೆ. ಈ ಪ್ರದೇಶದ ಸಮೀಪದಲ್ಲೇ ವಿವಿಧ ಸರ್ಕಾರಿ ಸಂಸ್ಥೆಗಳ ಕಚೇರಿಗಳಿವೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಹಾಗೂ ರಸ್ತೆಯಲ್ಲಿ ಅನಗತ್ಯವಾಗಿ ವಾಹನಗಳನ್ನು ನಿಲ್ಲಿಸುವವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು.

ವಿ.ಎಸ್.ಕುಮಾರ್, ಬಿ.ಟಿ.ಎಂ. ಬಡಾವಣೆ



ಪೈಪ್‌ಲೈನ್ ರಸ್ತೆಯ ಮಧ್ಯದಲ್ಲೇ ಇರುವ ವಿದ್ಯುತ್ ಕಂಬ

ಕೊಳಚೆ ನೀರು ಹರಿವಿಗೆ ಕ್ರಮ

ರಾಜಾಜಿನಗರ ವ್ಯಾಪ್ತಿಯ ಗಾಯತ್ರಿದೇವಿ ಉದ್ಯಾನದಲ್ಲಿ ವಾಯುವಿಹಾರ ಪಥಕ್ಕೆ ಹೊಂದಿಕೊಂಡಿರುವ ಚರಂಡಿ ಮಾರ್ಗದಲ್ಲಿ ಕೊಳಚೆ ನೀರು ಸಮರ್ಪಕವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲಾಗಿದೆ.

ಚರಂಡಿ ನೀರು ಸಮರ್ಪಕವಾಗಿ ಹರಿಯದೆಯೇ, ಉದ್ಯಾನದಲ್ಲಿ ನಿಂತು ದುರ್ವಾಸನೆ ಬರುತ್ತಿತ್ತು. ಸೊಳ್ಳೆಗಳ ಕಾಟವೂ ಹೆಚ್ಚಾಗಿ ಉದ್ಯಾನಕ್ಕೆ ಬರುವವರಿಗೆ ಸಮಸ್ಯೆಯಾಗಿತ್ತು. ಈ ಬಗ್ಗೆ ಕಳೆದ ವಾರ ಕುಂದು ಕೊರತೆ ಅಂಕಣದಲ್ಲಿ ವರದಿ ಪ್ರಕಟಗೊಂಡಿತ್ತು.

‘ರಾಜಾಜಿನಗರದ ಗಾಯತ್ರಿ ದೇವಿ ಉದ್ಯಾನದಲ್ಲಿ ಅವ್ಯವಸ್ಥೆ ಕುರಿತು ಕುಂದು ಕೊರತೆ ವಿಭಾಗದಲ್ಲಿ ಬಂದ ವರದಿ ಆಧರಿಸಿ ಉದ್ಯಾನದ ಸ್ಥಳಕ್ಕೆ ಭೇಟಿ ನೀಡಿದೆ. ಪಾಲಿಕೆ ಅಧಿಕಾರಿಗಳನ್ನೂ ಕರೆಸಿ, ಸ್ಥಳ ಪರಿಶೀಲಿಸಿದ್ದೇನೆ. ಹೆಚ್ಚು ಮಳೆಯ ಕಾರಣದಿಂದ ಸಮಸ್ಯೆ ಉಂಟಾಗಿದ್ದು, ಅದರ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಶಾಸಕ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.



ಗಾಯತ್ರಿದೇವಿ ಉದ್ಯಾನಕ್ಕೆ ಭೇಟಿ ನೀಡಿ ಸಮಸ್ಯೆ ಪರಿಶೀಲಿಸಿದ ಶಾಸಕ ಎಸ್‌.ಸುರೇಶ್ ಕುಮಾರ್

ವರದಿ ಪರಿಣಾಮ

ಬಸ್ ಸೇವೆ ಕಲ್ಪಿಸಿದ ಬಿಎಂಟಿಸಿ

‘ಕೆಂಪೇಗೌಡ ಬಸ್ ನಿಲ್ದಾಣದಿಂದ ಯಶವಂತಪುರ, ಜಾಲಹಳ್ಳಿ ಕ್ರಾಸ್, ಬಾಗಲಗುಂಟೆ ಕ್ರಾಸ್, ರಾಘವೇಂದ್ರ ಬಡಾವಣೆ, ಗಣಪತಿ ನಗರ, ಆಚಾರ್ಯ ಇನ್‌ಸ್ಟಿಟ್ಯೂಟ್ ಮಾರ್ಗವಾಗಿ ಬಸ್ ಸೇವೆ ಕಲ್ಪಿಸಲಾಗಿದೆ’ ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

‘ಗಣಪತಿ ನಗರ ಹಾಗೂ ಆಚಾರ್ಯ ಕಾಲೇಜಿಗೆ ಬರುವವರಿಗೆ ಸೂಕ್ತ ಬಸ್ ವ್ಯವಸ್ಥೆಯಿಲ್ಲ. ಈ ಸ್ಥಳಗಳಿಗೆ ಬಿಎಂಟಿಸಿ ಬಸ್‌ಗಳನ್ನು ನಿಯೋಜಿಸಬೇಕು ಅಥವಾ ಇರುವ ಬಸ್‌ಗಳನ್ನೇ ಈ ಮಾರ್ಗಗಳಿಗೂ ವಿಸ್ತರಿಸಬೇಕು’ ಎಂದು ಗಣಪತಿನಗರದ ನಿವಾಸಿಗಳು ಮನವಿ ಮಾಡಿಕೊಂಡಿದ್ದರು.

ಈ ಬಗ್ಗೆ ಕಳೆದ ಸೋಮವಾರ ಕುಂದು ಕೊರತೆ ಅಂಕಣದಲ್ಲಿ ‘ಬಿಎಂಟಿಸಿ ಬಸ್ ಸೇವೆ ಕಲ್ಪಿಸಿ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಈ ಸಂಬಂಧ ಕ್ರಮ ಕೈಗೊಂಡಿರುವ ಬಿಎಂಟಿಸಿ ಗಣಪತಿ ನಗರ ಹಾಗೂ ಆಚಾರ್ಯ ಕಾಲೇಜು ಮಾರ್ಗಗಳಿಗೆ ಬಸ್ ಸೇವೆ ಕಲ್ಪಿಸಿರುವುದಾಗಿ ತಿಳಿಸಿದೆ.

ವಿದ್ಯುತ್ ಕಂಬ ರಸ್ತೆಯಲ್ಲೇ ಬಿಟ್ಟರು

ಕುಮಾರಸ್ವಾಮಿ ಬಡಾವಣೆಯಿಂದ ಗುಬ್ಬಲಾಳ ಕಡೆಗೆ ಹೋಗುವ ಪೈಪ್‌ಲೈನ್ ರಸ್ತೆಯಲ್ಲಿ ಬೃಹದಾಕಾರದ ವಿದ್ಯುತ್ ಕಂಬವನ್ನು ರಸ್ತೆಯಲ್ಲೇ ಬಿಟ್ಟಿದ್ದಾರೆ. ರಸ್ತೆ ನಿರ್ಮಿಸಿದವರೂ ಕಂಬವನ್ನು ಪಕ್ಕಕ್ಕೆ ಸ್ಥಳಾಂತರಿಸಿಲ್ಲ. ವಾಹನಗಳು ರಾತ್ರಿ ವೇಳೆ ಈ ಕಂಬಕ್ಕೆ ಗುದ್ದಿ ಅನಾಹುತಗಳಾಗುವ ಸಾಧ್ಯತೆಗಳಿವೆ. ಈ ರಸ್ತೆಯಿಂದ ಕಂಬವನ್ನು ಬೇರೆ ಕಡೆಗೆ ಸ್ಥಳಾಂತರಿಸಿ, ರಸ್ತೆಯನ್ನು ಅಪಾಯಮುಕ್ತಗೊಳಿಸಿ.

ಆರ್.ದೀಪಕ್, ತ್ಯಾಗರಾಜನಗರ

ಹಣ ಸಂಗ್ರಹದ ಹಿಂದೆ ಅಕ್ರಮ: ಪಿ.ಆರ್‌.ರಮೇಶ್ ಆರೋಪ

ಜಲಮಂಡಳಿ ಬದಲು ಬಿಬಿಎಂಪಿಯಿಂದ ಒಳಚರಂಡಿ ಕಾಮಗಾರಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಪಾರ್ವತಿಪುರದಲ್ಲಿ ಒಳಚರಂಡಿ ಕಾಮಗಾರಿಯನ್ನು ಜಲಮಂಡಳಿಯ ಬದಲಿಗೆ ಬಿಬಿಎಂಪಿ ನಡೆಸುತ್ತಿದೆ. ಒಳಚರಂಡಿ ಸಂಪರ್ಕ ಕಲ್ಪಿಸಲು ಪ್ರತಿ ಮನೆಯಿಂದ ಸಾವಿರಾರು ರೂಪಾಯಿ ಹಣ ಸಂಗ್ರಹಿಸಲಾಗುತ್ತಿದ್ದು, ಸ್ಥಳೀಯ ರಾಜಕೀಯ ನಾಯಕರಿಗೂ ಇದರಲ್ಲಿ ಪಾಲು ಹೋಗುತ್ತಿದೆ’ ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಆರೋಪಿಸಿದರು.





ಪಾರ್ವತಿಪುರದಲ್ಲಿ ನಡೆಯುತ್ತಿರುವ ಒಳಚರಂಡಿ ಕಾಮಗಾರಿ


‘ಒಳಚರಂಡಿ ಸಂಪರ್ಕ ಕಲ್ಪಿಸಲೆಂದೇ ಜಲಮಂಡಳಿ ಇದೆ. ಆದರೆ, ಪಾಲಿಕೆ ಮುಂದಾಳತ್ವ ವಹಿಸಿ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದು ಅರ್ಥಹೀನ. 15ನೇ ಹಣಕಾಸು ಆಯೋಗದ ಅನುದಾನ ಖರ್ಚು ಮಾಡುವ ಒಂದೇ ಉದ್ದೇಶದಿಂದ, ರಾಜಕೀಯ ಒತ್ತಡಕ್ಕೆ ಮಣಿದು ಪಾಲಿಕೆಯೇ ಈ ಕಾಮಗಾರಿ ನಡೆಸುತ್ತಿದೆ. 8 ತಿಂಗಳುಗಳು ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ’ ಎಂದು ದೂರಿದರು.

‘ಈ ಪ್ರದೇಶದಲ್ಲಿ ಈಗಾಗಲೇ ಒಳಚರಂಡಿ ಸಂಪರ್ಕ ಇದೆ. ಜಲಮಂಡಳಿ ಬದಲಾಗಿ ಬಿಬಿಎಂಪಿ ಕಾಮಗಾರಿ ನಡೆಸುತ್ತಿರುವುದು ಸೂಕ್ತವಲ್ಲ. ಪಾಲಿಕೆಗೆ ಒಳಚರಂಡಿ ಕಾಮಗಾರಿ ನಿರ್ವಹಿಸುವ ತಾಂತ್ರಿಕ ಜ್ಞಾನ ಇರುವುದಿಲ್ಲ. ಅಪೂರ್ಣ ಕಾಮಗಾರಿಯಿಂದ ಕೆಲವೆಡೆ ಈಗಾಗಲೇ ತೊಂದರೆಗಳು ಉದ್ಭವಿಸಿವೆ’ ಎಂದರು.

‘ಕಾಮಗಾರಿ ಯಾರು ನಡೆಸಿದ್ದಾರೆ ಎನ್ನುವ ಮಾಹಿತಿ ಸ್ಥಳೀಯ ನಿವಾಸಿಗಳಿಗೆ ತಿಳಿದಿರುವುದಿಲ್ಲ. ಅಪೂರ್ಣ ಕಾಮಗಾರಿಯಿಂದ ಮುಂದೆ ತೊಂದರೆಯಾದರೆ, ಜಲಮಂಡಳಿಯವರನ್ನು ಸುಮ್ಮನೆ ದೂಷಿಸುತ್ತಾರೆ. ಪಾಲಿಕೆ ವತಿಯಿಂದ ಕಾಮಗಾರಿ ಸೂಕ್ತವಾಗಿ ನಡೆದಿದೆಯೇ ಹಾಗೂ ಅನುದಾನದ ಬಳಕೆ ಸಮರ್ಪಕವಾಗಿ ಆಗಿದೆಯೇ ಎಂಬ ಬಗ್ಗೆ ನಗರಾಭಿವೃದ್ಧಿ ಇಲಾಖೆಯು ಪರಿಶೀಲನೆ ನಡೆಸಬೇಕು’ ಎಂದೂ ಒತ್ತಾಯಿಸಿದರು.







‘16ರಂದು ಸುವರ್ಣಸೌಧಕ್ಕೆ ಮುತ್ತಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಳಗಾವಿಯ ಸುವರ್ಣ ಸೌಧಕ್ಕೆ ಇದೇ 16ರಂದು ಮುತ್ತಿಗೆ ಹಾಕಲಾಗುವುದು’ ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಪ್ರತಿಭಟನೆಯಲ್ಲಿ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಪದಾಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ ರಾಜ್ಯದ ವಿವಿಧೆಡೆಯಿಂದ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ. ನಮ್ಮ ಪ್ರತಿಭಟನೆಗೆ ಸರ್ಕಾರ ಮಣಿಯದಿದ್ದರೆ ಜನವರಿ ತಿಂಗಳಲ್ಲಿ ರಾಜ್ಯದಾದ್ಯಂತ ಶಾಲೆಗಳನ್ನು ಬಂದ್ ಮಾಡುತ್ತೇವೆ’ ಎಂದರು.

‘ಓಮೈಕ್ರಾನ್ ಭೀತಿಯ ಹಿನ್ನೆಲೆಯಲ್ಲಿ, ಶಾಲೆಗಳಲ್ಲಿ ಸುರಕ್ಷತಾ ಕ್ರಮ ತೆಗೆದುಕೊಳ್ಳುವ ಕುರಿತು ಸಂಘದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಚರ್ಚೆ ನಡೆಸಿದ್ದೇವೆ’ ಎಂದರು. ‘ಪ್ರಸಕ್ತ ಸಾಲಿನಲ್ಲಿ 10 ಸಾವಿರ ಶಾಲೆಗಳ ಮಾನ್ಯತೆ ನವೀಕರಣ ಆಗಬೇಕಿದೆ. ಆದರೆ, ತಾಂತ್ರಿಕ ಸಮಸ್ಯೆಗಳಿಂದಾಗಿ ಈವರೆಗೂ ನವೀಕರಣ ಸಾಧ್ಯವಾಗಿಲ್ಲ. ಶಾಲೆಗಳ ನವೀಕರಣಕ್ಕೆ ಇಲಾಖೆ 61 ದಾಖಲೆಗಳನ್ನು ಆರು ದಿನಗಳಲ್ಲಿ ಸಲ್ಲಿಸಲು ಕೇಳಿದೆ. ಆದರೆ ಅದು ಸಾಧ್ಯವಿಲ್ಲ. ದಾಖಲೆಗಳ ಕ್ರೋಡೀಕರಣ ಸಂದರ್ಭದಲ್ಲಿ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದು ದೂರಿದರು.

ಪರಿಹಾರ ಸಿಕ್ಕಿಲ್ಲ: ‘ಸರ್ಕಾರ ಘೋಷಿಸಿದ್ದ ಕೋವಿಡ್ ಆರ್ಥಿಕ ಪ್ಯಾಕೇಜ್ ಕೇವಲ 1,000 ಶಿಕ್ಷಕರಿಗೆ ಮಾತ್ರ ಸಿಕ್ಕಿದೆ. ಉಳಿದ 4 ಲಕ್ಷ ಮಂದಿಗೆ ಸಿಕ್ಕಿಲ್ಲ. ಆರ್‌ಟಿಇ ಬಾಕಿ ಹಣವನ್ನೂ ಸರ್ಕಾರ ಬಿಡುಗಡೆ ಮಾಡಿಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು’ ಎಂದೂ ಆಗ್ರಹಿಸಿದರು.

ಪರಿಶಿಷ್ಟ ನೌಕರರಿಗೆ ಅನ್ಯಾಯ: ನ್ಯಾಯಕ್ಕೆ ಮನವಿ

ಬೆಂಗಳೂರು: ‘ಬಡ್ತಿಯಲ್ಲಿ ಮೀಸಲಾತಿ ಮತ್ತು ತತ್ಪರಿಣಾಮದ ಜೇಷ್ಠತೆ ಸಂರಕ್ಷಣೆ ವಿಚಾರದಲ್ಲಿ ರಾಜ್ಯ ಸರ್ಕಾರ ಕಾಯ್ದೆ ರೂಪಿಸಿದ್ದರೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಗಳು ಮೀಸಲಾತಿ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ’ ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಆರೋಪಿಸಿದ್ದಾರೆ.

‘ಮೀಸಲಾತಿ ವಿರೋಧಿ ಅಧಿಕಾರಿಗಳಿಂದಾಗಿ ರಾಜ್ಯ ಸರ್ಕಾರ 2018ರಲ್ಲಿ ರೂಪಿಸಿದ ಕಾಯ್ದೆಯ ಪ್ರತಿಫಲ ಎಸ್‌ಸಿ, ಎಸ್‌ಟಿ ಸಮುದಾಯದ ನೌಕರರಿಗೆ ಸಿಗುತ್ತಿಲ್ಲ. ತತ್ಪರಿಣಾಮದ ಜೇಷ್ಠತೆ ಕಾಯ್ದೆ ಮತ್ತು 1978ರ ಬಡ್ತಿ ಮೀಸಲಾತಿ ಆದೇಶದಂತೆ ಎಸ್‌ಸಿ ನೌಕರರಿಗೆ ಶೇ 15, ಎಸ್‌ಟಿ ನೌಕರರಿಗೆ 3 ರಷ್ಟು ಪ್ರಾತಿನಿಧ್ಯ ದೊರಕದ ರೀತಿಯಲ್ಲಿ 2019ರ ಜೂನ್ 24ರಂದು ಸುತ್ತೋಲೆ ಹೊರಡಿಸಿ ಅನ್ಯಾಯ ಮಾಡಲಾಗಿದೆ. ಈ ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಮೂರು ಬಾರಿ ಅಡ್ವೋಕೇಟ್ ಜನರಲ್ ತಿಳಿಸಿದ್ದರೂ ಡಿಪಿಎಆರ್ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಪರಿಶಿಷ್ಟ ಸಮುದಾಯದ ಅಧಿಕಾರಿಗಳು ಮತ್ತು ನೌಕರರಿಗೆ ಅನ್ಯಾಯ ಆಗಿದೆ’ ಎಂದು ಅವರು ದೂರಿದ್ದಾರೆ.

‘33 ಸಾವಿರ ಠೇವಣಿದಾರರಿಗೆ ₹ 753.61 ಕೋಟಿ ವಾಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನ ಸುಮಾರು 33 ಸಾವಿರ ಠೇವಣಿದಾರರ ಕ್ಲೇಮುಗಳಿಗೆ ಠೇವಣಿ ವಿಮಾ ರಕ್ಷಣೆ ಕಾಯ್ದೆ (ಡಿಐಸಿಜಿಸಿ) ಅಡಿ ಒಟ್ಟು ₹753.61 ಕೋಟಿ ಮೊತ್ತವನ್ನು ಮರು ಜಮಾ ಮಾಡಲಾಗಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

‘ಠೇವಣಿದಾರರು ಮೊದಲು: ಕಾಲ ಮಿತಿಯಲ್ಲಿ ₹5 ಲಕ್ಷವರೆಗೆ ಠೇವಣಿ ವಿಮೆ ಪಾವತಿ’ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜತೆ ವೆಬ್ ಕಾಸ್ಟ್ ಮೂಲಕ ನಡೆದ ಕಾರ್ಯಕ್ರಮದ ಬಳಿಕ ಈ ವಿಷಯ ತಿಳಿಸಿದರು.

‘ದೇಶದ ವಿವಿಧ ಬ್ಯಾಂಕ್‌ಗಳಲ್ಲಿ ₹1ರಿಂದ ₹5 ಲಕ್ಷದವರೆಗಿನ ಮೊತ್ತದ ಠೇವಣಿ ಇರಿಸಿದವರಲ್ಲಿ ಶೇ 98.1ರಷ್ಟು ಮಂದಿ ಸಣ್ಣ ಮತ್ತು ಮಧ್ಯಮ ವರ್ಗದವರಾಗಿದ್ದಾರೆ’ ಎಂದು ತಿಳಿಸಿದರು.

‘ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಜತೆಗೆ ಬಾಗಲಕೋಟೆಯ ಮುಧೋಳ ಕೋ- ಆಪರೇಟಿವ್ ಬ್ಯಾಂಕ್, ವಿಜಯಪುರದ ಡೆಕ್ಕನ್ ಅರ್ಬನ್ ಕೋ- ಆಪರೇಟೀವ್ ಬ್ಯಾಂಕ್, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಿಲ್ಲಾತ್ ಕೋ-ಆಪರೇಟಿವ್ ಬ್ಯಾಂಕ್‌ಗಳ ಒಟ್ಟು 77,819 ಠೇವಣಿದಾರರ ಕ್ಲೇಮುಗಳಿಗೆ ಹಣ ಶೀಘ್ರವೇ ಮರು ಪಾವತಿ ಆಗಲಿದೆ’ ಎಂದು ಭರವಸೆ ನೀಡಿದರು.

‘ನಗರದ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಮತ್ತು ಕರ್ನಾಟಕದ ಐದು ಕೇಂದ್ರಗಳಲ್ಲಿರುವ ಇತರ ನಾಲ್ಕು ಅರ್ಬನ್ ಕೋ–ಆಪರೇಟಿವ್‌ಗಳು ವಿವಿಧ ಕಾರಣಗಳಿಗೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ನಂತರ ಕೇಂದ್ರ ಸರ್ಕಾರವು ಅವುಗಳ ಗ್ರಾಹಕರಿಗೆ ಗರಿಷ್ಠ ₹5 ಲಕ್ಷವರೆಗೆ ಡಿಐಸಿಜಿಸಿ ಕ್ಲೈಮ್ ಮೊತ್ತವನ್ನು ಬಿಡುಗಡೆ ಮಾಡಿದೆ. ಮಧ್ಯಂತರ ಹಣ ಪಾವತಿಯ ಮೊದಲ ಕಂತನ್ನು ನ.29ರಂದು ಬಿಡುಗಡೆ ಮಾಡಲಾಗಿದೆ’ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನ ಕೆಲವು ಠೇವಣಿದಾರರಿಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಚೆಕ್ ವಿತರಿಸಿದರು.

ಸಂಸದ ಪಿ. ಸಿ ಮೋಹನ್, ಜಿಲ್ಲಾ ಪಂಚಾಯಿತಿ ಆಡಳಿತಾಧಿಕಾರಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಂಜುಳಾ ಮತ್ತಿಬ್ಬರು ಇದ್ದರು.

ವರ್ಷದಲ್ಲಿ ಸಂಗೀತ ವಿ.ವಿ ಪುನಃಶ್ಚೇತನ

ಬೆಂಗಳೂರು: ‘ಒಂದೇ ವರ್ಷದಲ್ಲಿ ಗಂಗೂಬಾಯಿ ಸಂಗೀತ ವಿಶ್ವವಿದ್ಯಾಲಯವನ್ನು ಪುನಃಶ್ಚೇತನಗೊಳಿಸಲಾಗುವುದು. ಜಾಗತಿಕ ಮಟ್ಟದ ಶಿಕ್ಷಣ ಸಂಸ್ಥೆಯಾಗಿ ಇದನ್ನು ರೂಪಿಸಲಾಗುವುದು’ ಎಂದು ವಿಜ್ಞಾನ, ತಂತ್ರಜ್ಞಾನ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಸಿ ಎನ್ ಅಶ್ವತ್ಥನಾರಾಯಣ ಹೇಳಿದರು.

ಬೆಂಗಳೂರು ಗಾಯನ ಸಮಾಜವು ನಗರದಲ್ಲಿ ಆಯೋಜಿಸಿದ್ದ 51ನೇ ಸಂಗೀತ ಸಮ್ಮೇಳನದ ಸಮಾರೋಪದಲ್ಲಿ ಅವರು ಭಾನುವಾರ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷ ಎಂ. ಸೂರ್ಯ ಪ್ರಸಾದ್ ಅವರಿಗೆ ‘ಸಂಗೀತ ಕಲಾರತ್ನ’ ಬಿರುದು ಹಾಗೂ ‘ವಿ.ಟಿ. ಶ್ರೀನಿವಾಸನ್ ಪ್ರಶಸ್ತಿ’ ಪ್ರದಾನ ಮಾಡಿದ ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ‘ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳೇ ನಮ್ಮ ಸಂಸ್ಕೃತಿಯನ್ನು ಉನ್ನತವಾಗಿಸುತ್ತವೆ. ಎಂತಹ ಕಠಿಣವನ್ನೂ ಮೃದುಗೊಳಿಸುವ ಶಕ್ತಿಯನ್ನು ಸಂಗೀತ ಹೊಂದಿದೆ’ ಎಂದರು.

ಸನ್ಮಾನ ಸ್ವೀಕರಿಸಿದ ಎಂ. ಸೂರ್ಯ ಪ್ರಕಾಶ್,‘ಸ್ಥಳೀಯ ಕಲಾವಿದರಿಗೆ ಹೆಚ್ಚು ಅವಕಾಶ ಕಲ್ಪಿಸಿದ್ದು ಈ ಸಮ್ಮೇಳನದ ವಿಶೇಷತೆ’ ಎಂದು ಅವರು ಹೇಳಿದರು.

ಶ್ರೀ ಕಲಾ ಜ್ಯೋತಿ ಪ್ರಶಸ್ತಿ ಪ್ರದಾನ

ಕಲಾ ವಿಮರ್ಶಕ ಕೆ.ರಾಮ ಮೂರ್ತಿ ರಾವ್, ಗಾಯಕ ಬಿ.ಎಸ್. ನಾರಾಯಣ ಅಯ್ಯಂಗಾರ್, ನಾಗಸ್ವರ ಕಲಾವಿದ ವೇಣುಗೋಪಾಲ್, ಮೃದಂಗ ಕಲಾವಿದ ಭವಾನಿ ಶಂಕರ್, ಬಹುಮುಖಿ ಕಲಾವಿದ ಪ್ರವೀಣ್ ಡಿ. ರಾವ್‌ಗೆ ‘ಶ್ರೀ ಕಲಾ ಜ್ಯೋತಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು.



ವ್ಯಂಗ್ಯಚಿತ್ರಕಾರ ಎಂ.ವಿ. ಶಿವರಾಮ್ ಹಾಗೂ ಗೀತಾ ಅವರನ್ನು ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ವತಿಯಿಂದ ಶನಿವಾರ ಸನ್ಮಾನಿಸಲಾಯಿತು. (ಎಡದಿಂದ) ಸಂಘದ ಜಂಟಿ ಕಾರ್ಯದರ್ಶಿ ವೈ.ಎಸ್‌. ನಂಜುಂಡ ಸ್ವಾಮಿ, ಅಧ್ಯಕ್ಷ ವಿ.ಆರ್‌.ಸಿ. ಶೇಖರ್, ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ಮುಖ್ಯಸ್ಥ ವಿ.ಜಿ. ನರೇಂದ್ರ, ಸಂಘದ ಪೋಷಕರಾದ ಗುಜ್ಜಾರಪ್ಪ ಎಚ್‌.ಬಿ. ಮಂಜುನಾಥ್ ಇದ್ದಾರೆ

‘ಸ್ಪೇಸ್ ಆ್ಯಂಡ್ ಬಿಯಾಂಡ್’ 17ರಂದು ಬಿಡುಗಡೆ

ಬೆಂಗಳೂರು: ಬಾಹ್ಯಾಕಾಶ ವಿಜ್ಞಾನ, ಉಪಗ್ರಹಗಳಿಂದ ದೇಶಕ್ಕೆ ಆಗಿರುವ ಪ್ರಯೋಜನಗಳು, ರಾಕೆಟ್‌ಗಳ ನಿರ್ಮಾಣದಲ್ಲಿ ಎದುರಾದ ಸವಾಲುಗಳೂ ಸೇರಿ ಸಂಕೀರ್ಣ ಮತ್ತು ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿರುವ ಬಾಹ್ಯಾಕಾಶ ವಿಜ್ಞಾನಿ ಡಾ.ಕೆ. ಕಸ್ತೂರಿರಂಗನ್ ಅವರ ವೃತ್ತಿ ಜೀವನ ಕುರಿತ ಕೃತಿ ‘ಸ್ಪೇಸ್ ಆ್ಯಂಡ್ ಬಿಯಾಂಡ್’ ಇದೇ 17 ರಂದು ಬಿಡುಗಡೆಗೊಳ್ಳಲಿದೆ.

ಅಂತರಿಕ್ಷ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಶಸ್ಸುಗಳ ಸರಣಿಯನ್ನೇ ನೀಡಿರುವ ಕಸ್ತೂರಿರಂಗನ್ ಅವರ ಕಾರ್ಯನಿರ್ವಹಣೆಯನ್ನು ‘ಕಸ್ತೂರಿ ರಂಗನ್ಸ್ ಮ್ಯಾಜಿಕ್’ ಎಂದೇ ಕರೆಯಲಾಗುತ್ತದೆ. ಪುಸ್ತಕದ ಮೊದಲ ಭಾಗದಲ್ಲಿ ಕಸ್ತೂರಿರಂಗನ್ ಅವರ ಹಿನ್ನೆಲೆ, ಶಿಕ್ಷಣ ಮತ್ತು ವೃತ್ತಿ ಜೀವನವನ್ನು ವಿವರಿಸಲಾಗಿದೆ. ಈ ಕೃತಿಯನ್ನು ಭಾರತೀಯ ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಮಂದಿರದ (ಐಐಎಸ್‌ಟಿ) ನಿವೃತ್ತ ನಿರ್ದೇಶಕ, ಕನ್ನಡಿಗ ಡಾ.ಬಿ.ಎನ್. ಸುರೇಶ್ ಸಂಪಾದಿಸಿದ್ದಾರೆ. ಅಂತರರಾಷ್ಟ್ರೀಯ ಪ್ರಕಾಶನ ಸಂಸ್ಥೆ ‘ಸ್ಪ್ರಿಂಗರ್’ ಈ ಕೃತಿಯನ್ನು ಪ್ರಕಟಿಸಿದೆ.

ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ರಾಷ್ಟ್ರದ ಅಭಿವೃದ್ಧಿ, ಅವುಗಳ ಮೂಲಕ ದೇಶವು ಮುನ್ನಡೆ ಈ ಬಗ್ಗೆ ಕೃತಿಯಲ್ಲಿ ತಿಳಿಸಲಾಗಿದೆ.

ನಕಲಿ ವರದಿ ಕೊಟ್ಟಿದ್ದ ನಾಲ್ವರು ವಶಕ್ಕೆ

ಬೆಂಗಳೂರು: ನಗರದ ಹೋಟೆಲ್‌ನಲ್ಲಿದ್ದ ದಕ್ಷಿಣ ಆಫ್ರಿಕಾ ಪ್ರಜೆಗೆ ಕೋವಿಡ್ ಪರೀಕ್ಷೆ ನಕಲಿ ವರದಿ ನೀಡಿ, ಅವರು ಪರಾರಿಯಾಗಲು ಸಹಾಯ ಮಾಡಿದ್ದ ಆರೋಪದಡಿ ನಾಲ್ವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದಕ್ಷಿಣ ಆಫ್ರಿಕಾದ ಪ್ರಜೆ ಇತ್ತೀಚೆಗೆ ನಗರಕ್ಕೆ ವಿಮಾನದಲ್ಲಿ ಬಂದಿದ್ದರು. ನಿಲ್ದಾಣದಲ್ಲಿ ಪರೀಕ್ಷೆ ನಡೆಸಿದಾಗ, ಆತನಿಗೆ ಓಮೈಕ್ರಾನ್ ಸೋಂಕು ಇರುವುದು ದೃಢಪಟ್ಟಿತ್ತು. ಮುಂಜಾಗ್ರತಾ ಕ್ರಮವಾಗಿ ಪ್ರಜೆಯನ್ನು ನಗರದ ಹೋಟೆಲೊಂದರ ಕೊಠಡಿಯಲ್ಲಿ ಇರಿಸಲಾಗಿತ್ತು. 14 ದಿನ ಕೊಠಡಿ ಬಿಟ್ಟು ಹೋಗದಂತೆ ಬಿಬಿಎಂಪಿ ಅಧಿಕಾರಿಗಳನ್ನು ತಾಕೀತು ಮಾಡಿದ್ದರು.

ಆದರೆ, ಹೋಟೆಲ್ ಸಿಬ್ಬಂದಿಗೆ ನಕಲಿ ವರದಿ ತೋರಿಸಿ ದಕ್ಷಿಣ ಆಫ್ರಿಕಾ ಪ್ರಜೆ ನಗರದಿಂದ ಪರಾರಿಯಾಗಿದ್ದಾರೆ. ಅವರು ಹಾಗೂ ಅವರನ್ನು ಬಿಟ್ಟು ಕಳುಹಿಸಿದ್ದ ಹೋಟೆಲ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ತನಿಖೆ ಕೈಗೊಂಡಿದ್ದ ಪೊಲೀಸರು, ನಕಲಿ ವರದಿ ನೀಡಿದ್ದ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ.

‘ಹಣ ಪಡೆದು ನಕಲಿ ವರದಿ ನೀಡಲಾಗಿತ್ತು. ನಾಲ್ವರನ್ನು ವಿಚಾರಣೆ ಮಾಡುತ್ತಿದ್ದೇವೆ’ ಎಂದು ಪೊಲೀಸರು ಹೇಳಿದರು.

ಸೂಕ್ಷ್ಮರೋಗಾಣು ತಜ್ಞರ ಅಭಿಮತ • ಮಕ್ಕಳಿಗೂ ಲಸಿಕೆ ಅಗತ್ಯ ಎಂದು ಪ್ರತಿಪಾದನೆ

‘ಬೂಸ್ಟರ್‌ಡೋಸ್: ರೋಗನಿರೋಧಕ ಶಕ್ತಿ ವೃದ್ಧಿ’

ನವದೆಹಲಿ (ಪಿಟಿಐ): ‘ಕೋವಿಡ್–19 ವಿರುದ್ಧದ ಲಸಿಕೆಯ ಬೂಸ್ಟರ್ ಡೋಸ್ ದೇಹದಲ್ಲಿ ರೋಗನಿರೋಧಕಶಕ್ತಿ ಹೆಚ್ಚಿಸಲಿದ್ದು, ಓಮೈಕ್ರಾನ್ ಸೋಂಕು ಪರಿಣಾಮದ ವಿರುದ್ಧವೂ ರಕ್ಷಣೆ ನೀಡಲಿದೆ’ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಕೋವಿಡ್ ರೂಪಾಂತರ ಸೋಂಕಿನ ಪರಿಣಾಮ ತಡೆಗೆ ಬೂಸ್ಟರ್ ಸರಳವಾದ ಮಾರ್ಗ ಎಂದು ಪ್ರತಿಪಾದಿಸಿದ್ದಾರೆ.

ಬ್ರಿಟನ್‌ನ ಆರೋಗ್ಯ ಭದ್ರತಾ ಸಂಸ್ಥೆಯು (ಯುಕೆಎಚ್‌ಎಸ್‌ಎ), ‘ಕೋವಿಶೀಲ್ಡ್ ಲಸಿಕೆಯ ಬೂಸ್ಟರ್ ಡೋಸ್ ಓಮೈಕ್ರಾನ್ ಸೋಂಕಿನ ವಿರುದ್ಧ ಪರಿಣಾಮಕಾರಿ. ಇದು, ಓಮೈಕ್ರಾನ್‌ನಿಂದ ಶೇ 70 ರಿಂದ 75ರಷ್ಟು ರಕ್ಷಣೆ ನೀಡಲಿದೆ. ಕೋವಿಡ್‌ನ ಯಾವುದೇ ಲಸಿಕೆಯ ಬೂಸ್ಟರ್ ಡೋಸ್‌ನಿಂದ ನಿರೋಧಕ ಶಕ್ತಿ ವೃದ್ಧಿಸಲಿದೆ’ ಎಂದು ಹೇಳಿತ್ತು.

ಇದಕ್ಕೆ ಸೂಕ್ಷ್ಮರೋಗಾಣು ತಜ್ಞ ಡಾ.ಶಾಹಿದ್ ಜಮೀಲ್ ಅವರು, ‘ಬೂಸ್ಟರ್ ಡೋಸ್ ಅಗತ್ಯ. ಗಂಭೀರ ರೋಗದ ವಿರುದ್ಧ ಎರಡು ಡೋಸ್ ಲಸಿಕೆಯು ಎಷ್ಟರ ಮಟ್ಟಿಗೆ ರಕ್ಷಣೆ ನೀಡುವುದೋ ತಿಳಿದಿಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

ಕೋವಿಡ್‌ಗೆ ಸಂಬಂಧಿಸಿ ದೇಶದ ಸಲಹಾ ಸಮಿತಿಯ ಮಾಜಿ ಮುಖ್ಯಸ್ಥರೂ ಆದ ಅವರು, ಭಾರತದಲ್ಲಿ ಹೆಚ್ಚಿನವರು ಕೋವಿಶೀಲ್ಡ್ ಲಸಿಕೆ ಪಡೆದಿದ್ದಾರೆ. ಈಗ ಒಂದು ಡೋಸ್ ಪಡೆದಿರುವವರು ಎರಡನೇ ಡೋಸ್ ಲಸಿಕೆಯನ್ನು 8–12 ವಾರಗಳ ಬದಲು, 12–16 ವಾರದ ಅಂತರದಲ್ಲಿ ಪಡೆಯಬೇಕು ಎಂದು ಸಲಹೆ ಮಾಡಿದ್ದಾರೆ.

ಓಮೈಕ್ರಾನ್ ಸೋಂಕನ್ನು ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಯು ಎಷ್ಟರಮಟ್ಟಿಗೆ ನಿಸ್ತೇಜಗೊಳಿಸಲಿದೆ ಎಂಬ ಬಗ್ಗೆ ಅಧ್ಯಯನ ನಡೆಯಬೇಕು. ಬೂಸ್ಟರ್ ಲಸಿಕೆ ನೀಡುವ ಕುರಿತು ನೀತಿ ರೂಪಿಸಬೇಕು. ಯಾವ ಲಸಿಕೆ ಪಡೆಯಬೇಕು, ಯಾರು ಪಡೆಯಬೇಕು, ಯಾವಾಗ ಪಡೆಯಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಬೇಕು. ಹದಿಹರೆಯದವರೂ ಒಳಗೊಂಡಂತೆ ಮಕ್ಕಳಿಗೆ ಲಸಿಕೆ ನೀಡಲು ಆದಷ್ಟು ಶೀಘ್ರ ಚಾಲನೆ ನೀಡಬೇಕು ಎಂದು ಹೇಳಿದರು.

ಬೂಸ್ಟರ್‌ಡೋಸ್ ಆಗಿ ಕೋವ್ಯಾಕ್ಸಿನ್, ಕೋವಿಶೀಲ್ಡ್, ಡಿಎನ್‌ಎ ಸಂಸ್ಥೆಯ ಝೈಕೋವ್ ಡಿ, ಎಸ್‌ಐಐ ಸಂಸ್ಥೆಯ ಕೊವೊವ್ಯಾಕ್ಸ್, ಬಯೊಲಾಜಿಕಲ್ ಇ ಸಂಸ್ಥೆಯ ಕೋರ್ಬೆವ್ ಎಎಕ್ಸ್–ಇ ಲಸಿಕೆಗಳನ್ನು ಪರಿಗಣಿಸಬಹುದು ಎಂದಿದ್ದಾರೆ.

ಕೋವಿಡ್ ಲಸಿಕೆ ಕುರಿತ ರಾಷ್ಟ್ರೀಯ ತಜ್ಞರ ಸಮಿತಿ ಹಾಗೂ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿಯು, ಬೂಸ್ಟರ್ ಡೋಸ್ ನೀಡುವುದರ ಸಂಬಂಧ ವೈಜ್ಞಾನಿಕ ಅಧ್ಯಯನ ದಾಖಲೆಗಳನ್ನು ಪರಿಶೀಲಿಸುತ್ತಿದೆ ಎಂದು ಆರೋಗ್ಯ ಸಚಿವಾಲಯವು ಕಳೆದ ವಾರ ಲೋಕಸಭೆಗೆ ಮಾಹಿತಿ ನೀಡಿತ್ತು.

ಸೂಕ್ಷ್ಮರೋಗಾಣು ತಜ್ಞ ಡಾ.ಟಿ. ಜಾಕೊಬ್ ಜಾನ್ ಅವರು, ಯಾವುದೇ ಲಸಿಕೆಯ ಬೂಸ್ಟರ್ ಡೋಸ್ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲಿದೆ ಎಂದು ತಿಳಿಸಿದ್ದಾರೆ.

ಓಮೈಕ್ರಾನ್ ಸೋಂಕು ಮಕ್ಕಳಿಗೆ ಹೆಚ್ಚಾಗಿ ಬಾಧಿಸುವ ಸಂಭವ ಇರುವುದರಿಂದಮಕ್ಕಳಿಗೂ ಲಸಿಕೆಯನ್ನು ನೀಡುವ ಅಗತ್ಯವಿದೆ ಎಂದು ಐಸಿಎಂಆರ್ ಸೂಕ್ಷ್ಮರೋಗಾಣು ಅತ್ಯಾಧುನಿಕ ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರೂ ಆಗಿರುವ ಅವರು ಅಭಿಪ್ರಾಯಪಟ್ಟಿದ್ದಾರೆ.

ಮತ್ತೆ ಐದು ಓಮೈಕ್ರಾನ್ ಪ್ರಕರಣಗಳು ಪತ್ತೆ



ಅಮರಾವತಿ/ಚಂಡೀಗಡ/ನಾಗಪುರ/ತಿರುವನಂತಪುರ (ಪಿಟಿಐ): ದೇಶದಲ್ಲಿ ಹೊಸದಾಗಿ ಐದು ಓಮೈಕ್ರಾನ್ ಪ್ರಕರಣಗಳು ಭಾನುವಾರ ಪತ್ತೆಯಾಗಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 38ಕ್ಕೆ ಏರಿದೆ.

ಐರ್ಲೆಂಡ್‌ನಿಂದ ಆಂಧ್ರ ಪ್ರದೇಶಕ್ಕೆ ಬಂದಿದ್ದ 34 ವರ್ಷದ ವಿದೇಶಿ ಪ್ರವಾಸಿಗರೊಬ್ಬರಿಗೆ, ಇಟಲಿಯಿಂದ ಚಂಡೀಗಡಕ್ಕೆ ಬಂದಿದ್ದ 20 ವರ್ಷದ ವ್ಯಕ್ತಿಗೆ ಹಾಗೂ ಪಶ್ಚಿಮ ಆಫ್ರಿಕಾದಿಂದ ಮಹಾರಾಷ್ಟ್ರದ ನಾಗಪುರಕ್ಕೆ ಬಂದಿದ್ದ 40 ವರ್ಷದ ವ್ಯಕ್ತಿಗೆ ಓಮೈಕ್ರಾನ್ ದೃಢಪಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟನ್‌ನಿಂದ ಕೇರಳದ ಕೊಚ್ಚಿಗೆ ಬಂದಿದ್ದ ವ್ಯಕ್ತಿಯೊಬ್ಬರಿಗೂ ಓಮೈಕ್ರಾನ್ ದೃಢಪಟ್ಟಿದೆ ಎಂದು ಅಲ್ಲಿನ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ಕರ್ನಾಟಕದಲ್ಲಿ 34 ವರ್ಷದ ವ್ಯಕ್ತಿಗೂ ಓಮೈಕ್ರಾನ್ ದೃಢಪಟ್ಟಿದೆ. ಕೇರಳ, ಆಂಧ್ರಪ್ರದೇಶ, ಚಂಡೀಗಡ ಮತ್ತು ನಾಗಪುರದಲ್ಲಿ ಮೊದಲ ಬಾರಿಗೆ ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ.

ಓಮೈಕ್ರಾನ್: ರಾಜ್ಯದಲ್ಲಿ 3ನೇ ಪ್ರಕರಣ ಪತ್ತೆ

ಬೆಂಗಳೂರು: ಕೊರೊನಾ ವೈರಾಣುವಿನ ರೂಪಾಂತರಿ ಓಮೈಕ್ರಾನ್ ಸೋಂಕು ಬೆಂಗಳೂರಿನ 34 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಲ್ಲಿ ಭಾನುವಾರ ಪತ್ತೆಯಾಗಿದೆ. ಇದರಿಂದಾಗಿ ರಾಜ್ಯದಲ್ಲಿ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ದಕ್ಷಿಣ ಆಫ್ರಿಕಾಕ್ಕೆ ತೆರಳಿ ಅಲ್ಲಿಂದ ಡಿ.1ರಂದು ಮರಳಿದ್ದ ಅವರಿಗೆ, ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಲಾಗಿತ್ತು. ಸೋಂಕಿತರಾಗಿಲ್ಲ ಎಂಬ ವರದಿ ಬಂದಿದ್ದರಿಂದ ವಿಮಾನ ನಿಲ್ದಾಣದ ಅಧಿಕಾರಿಗಳು ಮನೆಯಲ್ಲಿಯೇ ಪ್ರತ್ಯೇಕ ವಾಸಕ್ಕೆ ಸೂಚಿಸಿದ್ದರು. ಡಿ.2ರಂದು ಅವರಿಗೆ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿದ್ದರಿಂದ ಮತ್ತೊಮ್ಮೆ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಆಗ ಸೋಂಕು ದೃಢಪಟ್ಟಿದ್ದರಿಂದ ಅವರ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿತ್ತು. ಆ ಪರೀಕ್ಷಾ ವರದಿಯಲ್ಲಿ ಹೊಸ ತಳಿಯ ಸೋಂಕು ದೃಢಪಟ್ಟಿದೆ.

‘ಸೋಂಕಿತ ವ್ಯಕ್ತಿ ಬೌರಿಂಗ್ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈಗ ಅವರಿಗೆ ಸೋಂಕಿನ ಲಕ್ಷಣಗಳು ಗೋಚರಿಸಿಲ್ಲ. ಅವರ ನೇರ ಸಂಪರ್ಕಕ್ಕೆ ಬಂದಿದ್ದ ಐವರನ್ನು ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದ 14 ಮಂದಿಯನ್ನು ಪತ್ತೆ ಮಾಡಿ, ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಲಾಗಿದೆ. ಇವರಲ್ಲಿ ಯಾರೂ ಸೋಂಕಿತರಾಗಿಲ್ಲ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ. ತ್ರಿಲೋಕ ಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಡಿ.2ರಂದು ರಾಜ್ಯದಲ್ಲಿ ಎರಡು ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿದ್ದವು. ದಕ್ಷಿಣ ಆಫ್ರಿಕಾದ ಪ್ರಜೆ ಮತ್ತು ನಗರದ ವೈದ್ಯರೊಬ್ಬರಲ್ಲಿ ಸೋಂಕು ದೃಢಪಟ್ಟಿತ್ತು. ಅವರಿಬ್ಬರ ಸಂಪರ್ಕಕ್ಕೆ ಬಂದಿದ್ದ ಯಾರಲ್ಲೂ ಓಮೈಕ್ರಾನ್ ಸೋಂಕು ಕಂಡು ಬಂದಿರಲಿಲ್ಲ.

ಸುದ್ದಿ 2 ನಿಮಿಷ

ಕೋವಿಡ್: ಸಕ್ರಿಯ ಪ್ರಕರಣ 7,328ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ 330 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 7,328ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.18 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 21 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ಸೋಂಕು ದೃಢ ಪ್ರಮಾಣ ಶೇ 0.27ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ ಸೇರಿದಂತೆ 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 205 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೊಡಗಿನಲ್ಲಿ 40, ದಕ್ಷಿಣ ಕನ್ನಡದಲ್ಲಿ 15, ಮೈಸೂರಿನಲ್ಲಿ 13, ಶಿವಮೊಗ್ಗದಲ್ಲಿ 11 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30 ಲಕ್ಷದ ಗಡಿ ದಾಟಿದೆ.

ಸೋಂಕಿತರಲ್ಲಿ 304 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 29.54 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ 5,602 ಸೋಂಕಿತರಿದ್ದಾರೆ. ಯಾದಗಿರಿ, ಗದಗ ಹಾಗೂ ರಾಯಚೂರಿನಲ್ಲಿ ಸಕ್ರಿಯ ಪ್ರಕರಣಗಳಿಲ್ಲ. ಬೀದರ್, ಹಾವೇರಿ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಬೀದರ್‌ನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ. ಮರಣ ಪ್ರಮಾಣ ದರವು ಶೇ 1.21 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,261ಕ್ಕೆ ಏರಿಕೆಯಾಗಿದೆ.

51 ವಿದ್ಯಾರ್ಥಿಗಳಿಗೆ ಕೋವಿಡ್ ದೃಢ



ಬೆಂಗಳೂರು: ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಗ್ರಾಮದಲ್ಲಿರುವ ಜವಾಹರ ನವೋದಯ ವಿದ್ಯಾಲಯದ ನಾಲ್ವರು ವಿದ್ಯಾರ್ಥಿಗಳಿಗೆ ಹಾಗೂ ಕೊಡಗು ಜಿಲ್ಲೆಯಲ್ಲಿ 47 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರದ ಮೊರಾರ್ಜಿ ದೇಸಾಯಿ ಶಾಲೆಯ 38 ವಿದ್ಯಾರ್ಥಿಗಳಿಗೆ ಕೋವಿಡ್ ದೃಢವಾಗಿದೆ. ಶಾಲೆಯ 8, 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿದೆ. 210 ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಇನ್ನು 110 ವಿದ್ಯಾರ್ಥಿಗಳ ವರದಿ ಬರಬೇಕಿದೆ.

‘ಶಾಲೆಗೆ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದು, ಒಂದು ವಾರ ಶಾಲೆ ಬಂದ್ ಮಾಡಲು ಸೂಚಿಸಿದ್ದಾರೆ’ ಎಂದು ಮೊರಾರ್ಜಿ ದೇಸಾಯಿ ಶಾಲೆ ಶಿಕ್ಷಕರು ಮಾಹಿತಿ ನೀಡಿದರು.

ಮಡಿಕೇರಿಯಲ್ಲಿರುವ ಕೊಡಗು ವಿದ್ಯಾಲಯದ 9 ವಿದ್ಯಾರ್ಥಿಗಳಿಗೆ ಮತ್ತೆ ಕೋವಿಡ್ ದೃಢಪಟ್ಟಿದೆ. ಕಳೆದ ವಾರ ಇದೇ ಶಾಲೆಯ 11 ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಉಳಿದಂತೆ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಒಂದೇ ದಿನ 15 ಪ್ರಕರಣಗಳು ಪತ್ತೆಯಾಗಿವೆ.

‘ಮೊರಾರ್ಜಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ವಿದ್ಯಾರ್ಥಿಗಳನ್ನು ಸೋಮವಾರಪೇಟೆ, ಮಡಿಕೇರಿ ಕೋವಿಡ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆತಂಕಪಡುವ ಅಗತ್ಯ ಇಲ್ಲ’ ಎಂದು ಡಿಎಚ್‌ಒ ಡಾ.ವೆಂಕಟೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

30 ಲಕ್ಷ ಮಂದಿಗೆ 3ನೇ ಡೋಸ್?

ಒಂದನೇ ಪುಟದಿಂದ

ಈ ವರ್ಷಾಂತ್ಯಕ್ಕೆ ಬೂಸ್ಟರ್ ಡೋಸ್ ವಿತರಣೆಗೆ ಅನುಮತಿ ದೊರೆತಲ್ಲಿ ಮೂರನೇ ಡೋಸ್ ಪಡೆಯಲು 37.30 ಲಕ್ಷ ಮಂದಿ ಅರ್ಹರಾಗಲಿದ್ದಾರೆ.

‘ಬೂಸ್ಟರ್ ಡೋಸ್ ಬಗ್ಗೆ ಈಗಾಗಲೇ ವಿವಿಧ ದೇಶಗಳಲ್ಲಿ ಅಧ್ಯಯನಗಳು ನಡೆದಿವೆ. ಲಸಿಕೆ ಪಡೆದ ಆರು ತಿಂಗಳವರೆಗೆ ದೇಹದಲ್ಲಿ ಪ್ರತಿಕಾಯ ಇರಲಿದೆ. ಆರೋಗ್ಯ ಕಾರ್ಯಕರ್ತರು, ಕೋವಿಡ್ ಮುಂಚೂಣಿ ಯೋಧರು ಹಾಗೂ ವಿವಿಧ ಕೋವಿಡೇತರ ಕಾಯಿಲೆ ಇರುವವರಿಗೆ ಆದ್ಯತೆಯ ಅನುಸಾರ ಬೂಸ್ಟರ್ ಡೋಸ್ ನೀಡಬೇಕು’ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಹಾಗೂ ಕ್ಲಿನಿಕಲ್ ತಜ್ಞರ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.



ಲಸಿಕೆಯ ಎರಡೂ ಡೋಸ್ ಪಡೆದ ಆರು ತಿಂಗಳ ಬಳಿಕ ಪ್ರತಿಕಾಯಗಳು ಕಡಿಮೆ ಆಗುತ್ತಾ ಬರುತ್ತವೆ. ಆದ್ದರಿಂದ ಆರು ತಿಂಗಳಾದವರಿಗೆ ಮತ್ತೊಂದು ಡೋಸ್ ಲಸಿಕೆ ನೀಡುವುದು ಉತ್ತಮ.

ಡಾ.ಸಿ. ನಾಗರಾಜ್, ಕ್ಲಿನಿಕಲ್ ತಜ್ಞರ ಸಮಿತಿ ಸದಸ್ಯ



ಕೋವಿಡ್ ಲಸಿಕೆಯ ವಿವರ

8.02 ಕೋಟಿ — ಈವರೆಗೆ ರಾಜ್ಯದಲ್ಲಿ ವಿತರಿಸಲಾದ ಕೋವಿಡ್ ಲಸಿಕೆಯ ಡೋಸ್‌ಗಳು

4.65 ಕೋಟಿ — ಮೊದಲ ಡೋಸ್ ಲಸಿಕೆ ಪಡೆದವರು

3.37 ಕೋಟಿ — ಎರಡನೇ ಡೋಸ್ ಲಸಿಕೆ ಪಡೆದವರು

7.09 ಕೋಟಿ — ವಿತರಿಸಲಾದ ‘ಕೋವಿಶೀಲ್ಡ್’ ಲಸಿಕೆಯ ಡೋಸ್‌ಗಳು

92.41 ಲಕ್ಷ — ವಿತರಿಸಲಾದ ‘ಕೋವ್ಯಾಕ್ಸಿನ್’ ಲಸಿಕೆಯ ಡೋಸ್‌ಗಳು

ಆದ್ಯತೆ ಅನುಸಾರ ವಿತರಣೆ

ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದವರನ್ನು ಆರು ತಿಂಗಳ ಬಳಿಕ ಜಯದೇವ ಹೃದ್ರೋಗ ಆಸ್ಪತ್ರೆಯು ಪ್ರತಿಕಾಯ (ಆ್ಯಂಟಿಬಾಡಿ) ಪರೀಕ್ಷೆಗೆ ಒಳಪಡಿಸಿತ್ತು. ಶೇ 99 ರಷ್ಟು ಮಂದಿಯಲ್ಲಿ ಉತ್ತಮವಾಗಿ ಪ್ರತಿಕಾಯಗಳು (ಆ್ಯಂಟಿಬಾಡಿ) ವೃದ್ಧಿಯಾಗಿರುವುದು ದೃಢಪಟ್ಟಿತ್ತು. ಬೂಸ್ಟರ್ ಡೋಸ್ ವಿತರಣೆಗೆ ಸಂಬಂಧಿಸಿದಂತೆ ಕೆಲ ತಜ್ಞರು ಒಂಬತ್ತು ತಿಂಗಳ ಬಳಿಕ ವಿತರಿಸಿದರೆ ಉತ್ತಮ ಎಂಬ ಅಭಿಮತ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಸರ್ಕಾರವು ಈ ಮೊದಲಿನಂತೆ ಆದ್ಯತೆಯ ಅನುಸಾರ ಬೂಸ್ಟರ್ ಡೋಸ್ ವಿತರಣೆಗೆ ಚಿಂತನೆ ನಡೆಸಿದೆ.

ಆರೋಗ್ಯ ಕಾರ್ಯಕರ್ತರಲ್ಲಿ 2.86 ಲಕ್ಷ ಮಂದಿ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 16 ಸಾವಿರಕ್ಕೂ ಅಧಿಕ ಮಂದಿ ಎರಡೂ ಡೋಸ್‌ಗಳನ್ನು ಪಡೆದು ಒಂಬತ್ತು ತಿಂಗಳುಗಳು ಕಳೆದಿವೆ.

‘ರಂಗಾಯಣ ಘನತೆಗೆ ಧಕ್ಕೆ ತರಬೇಡಿ’

ಬೆಂಗಳೂರು: ‘ರಂಗಾಯಣ ಮತ್ತು ಬಹುರೂಪಿಯನ್ನು ಹಗುರವಾಗಿ ನೋಡಬಾರದು ಹಾಗೂ ಗೌರವ ಹಾಳು ಮಾಡಬಾರದು’ ಎಂದು ಕಲಾವಿದರು, ಕವಿಗಳು, ಸಂಗೀತಗಾರರು, ಲೇಖಕರು, ವರ್ಣಚಿತ್ರಕಾರರು ಸೇರಿದಂತೆ 44 ಮಂದಿ ಆಗ್ರಹಿಸಿದ್ದಾರೆ.

ಮೈಸೂರಿನ ರಂಗಾಯಣದಲ್ಲಿನ ವಿದ್ಯಮಾನಗಳ ಕುರಿತಂತೆ ಅವರು ಈ ಬಗ್ಗೆ ವಿವರವಾದ ಹೇಳಿಕೆ ನೀಡಿದ್ದಾರೆ. ರಂಗಾಯಣದಲ್ಲಿ ದಶಕಗಳ ಕಾಲ ಕಾರ್ಯನಿರ್ವಹಿಸಿದ ನಟರು, ಅಧ್ಯಾಪಕರು ಮತ್ತು ಕೆಲವು ನಿರ್ದೇಶಕರು ಸಹ ಈ ಹೇಳಿಕೆಗೆ ಸಹಿ ಮಾಡಿದ್ದಾರೆ.

‘ಈ ಬಾರಿಯ ಬಹುರೂಪಿ ನಾಟಕೋತ್ಸವ ತನ್ನ ಬಣ್ಣ ಬದಲಾಯಿಸುತ್ತಿರುವುದಕ್ಕೆ ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರು ಕೆಲವು ಕಾರಣಗಳನ್ನು ನೀಡಿದ್ದಾರೆ. ಬಹುರೂಪಿಯ ಸಮಾರಂಭಕ್ಕೆ ರಂಗಾಯಣ ಆಯ್ಕೆ ಮಾಡಿರುವ ಇಬ್ಬರು ಅತಿಥಿಗಳ ಬಗ್ಗೆ ರಂಗಭೂಮಿ ಕಲಾವಿದರು, ಲೇಖಕರು ಆಕ್ಷೇಪ ವ್ಯಕ್ತಪಡಿಸಿದಾಗ ಕಾರ್ಯಪ್ಪ ಅವರು ಇದು ಎಡಚರ ಅಡ್ಡಗಾಲು, ಕಿರುಕುಳ ಎಂದು ಟೀಕಿಸಿದ್ದಾರೆ. ಆದರೆ, ರಂಗಾಯಣವನ್ನು ಕಟ್ಟಿ ಬೆಳೆಸಿದ ಈವರೆಗಿನ ಅಧ್ಯಾಪಕರು, ನಿರ್ದೇಶಕರು, ರಂಗಾಸಕ್ತರು ಎಂದೂ ಈ ಸಂಸ್ಥೆಯನ್ನು ಎಡಚ, ಬಲಚ ಎಂದು ಭಾವಿಸಲೇ ಇಲ್ಲ’ ಎಂದು ಹೇಳಿದ್ದಾರೆ.

‘ಎರಡು ದಶಕಗಳಿಂದ ನಡೆಯುತ್ತಿರುವ ಬಹುರೂಪಿ ಉತ್ಸವಕ್ಕೆ ಸರ್ಕಾರ, ಖಾಸಗಿ ಸಂಸ್ಥೆಗಳು ಮತ್ತು ಸಾರ್ವಜನಿಕರು ಆರ್ಥಿಕ ಬಲ ನೀಡಿದ್ದಾರೆ. ಆದರೆ, ಕಾರ್ಯಪ್ಪ ಅವರು ತಾವೇ ಸರ್ಕಾರದಿಂದ ಹಣ ತಂದಿರುವುದಾಗಿ ಹೇಳಿದ್ದಾರೆ. ಕಾರ್ಯಪ್ಪ ಅವರು ಆರ್‌ಎಸ್‌ಎಸ್‌ನಿಂದ ಬಂದವರು. ಆರ್‌ಎಸ್‌ಎಸ್‌ನ ಬಿಗಿ ಹಿಡಿತದಲ್ಲಿರುವ ಸರ್ಕಾರ, ಕಾರ್ಯಪ್ಪ ಅವರು ಕೇಳಿದಷ್ಟು ಹಣ ಕೊಟ್ಟಿರಬಹುದು. ಆದರೆ, ಈ ಹಣ ಯಾವುದೇ ಪಕ್ಷದ ಅಥವಾ ಸಂಸ್ಥೆಯ ಹಣವಲ್ಲ. ಇದು ಜನರ ಹಣ’ ಎಂದು ವಿವರಿಸಿದ್ದಾರೆ.

ಸರೋದ್ ವಾದಕ ಪಂಡಿತ ರಾಜೀವ ತಾರಾನಾಥ್, ರಂಗ ನಿರ್ದೇಶಕ ಸಿ.ಬಸವಲಿಂಗಯ್ಯ, ಕವಿ ಮತ್ತು ರಂಗನಿರ್ದೇಶಕ ರಘುನಂದನ, ನಟ ಎಂ.ಸಿ. ಕೃಷ್ಣಪ್ರಸಾದ್, ನಟ ಎಸ್. ರಾಮು, ರಂಗನಿರ್ದೇಶಕಿ ಭಾಗೀರಥಿ ಬಾಯಿ ಕದಂ, ರಂಗ ನಿರ್ದೇಶಕ ವೆಂಕಟರಮಣ ಐತಾಳ, ರಂಗಕರ್ಮಿ ಮತ್ತು ನಿರ್ದೇಶಕ ಬಿ. ಸುರೇಶ, ವಿಮರ್ಶಕರಾದ ಎಚ್. ಎಸ್. ರಾಘವೇಂದ್ರ ರಾವ್ ಮತ್ತು ಓ.ಎಲ್.ನಾಗಭೂಷಣಸ್ವಾಮಿ, ಲೇಖಕ ರಾಜೇಂದ್ರ ಚೆನ್ನಿ, ವ್ಯಂಗ್ಯಚಿತ್ರಕಾರ ಪಿ.ಮಹಮ್ಮದ್ ಸೇರಿದಂತೆ 44 ಮಂದಿ ಈ ಹೇಳಿಕೆ ನೀಡಿದ್ದಾರೆ.

30 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್

ಲಂಡನ್ (ಪಿಟಿಐ): 30 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಲಾಗುವುದು ಎಂದು ಬ್ರಿಟನ್ ಸರ್ಕಾರ ಹೇಳಿದೆ.

‘ಬೂಸ್ಟರ್ ಲಸಿಕೆಗೆ ಸಂಬಂಧಿಸಿ ಸೋಮವಾರದಿಂದ ಬುಕಿಂಗ್ ಆರಂಭಿಸಲಾಗುವುದು. ದೇಶದಲ್ಲಿ ಕೊರೊನಾ ವೈರಸ್‌ನ ಓಮೈಕ್ರಾನ್ ತಳಿ ಸೋಂಕು ವೇಗವಾಗಿ ಪ್ರಸರಣವಾಗುತ್ತಿರುವ ಕಾರಣ ಬೂಸ್ಟರ್ ನೀಡಲು ನಿರ್ಧರಿಸಲಾಗಿದೆ’ ಎಂದು ಬ್ರಿಟನ್‌ನ ಆರೋಗ್ಯ ಇಲಾಖೆ ತಿಳಿಸಿದೆ.

‘ಲಸಿಕೆಯ ಬೂಸ್ಟರ್ ಡೋಸ್ ಓಮೈಕ್ರಾನ್ ತಳಿ ಸೋಂಕಿನಿಂದ ರಕ್ಷಣೆ ನೀಡುತ್ತದೆ ಎಂಬುದು ಇತ್ತೀಚಿನ ಅಂಕಿ–ಅಂಶಗಳಿಂದ ತಿಳಿದುಬಂದಿದೆ’ ಎಂದು ಆರೋಗ್ಯ ಕಾರ್ಯದರ್ಶಿ ಸಾಜಿದ್ ಜಾವಿದ್ ಹೇಳಿದ್ದಾರೆ.

ಒಳನೋಟ

‘ಲಂಚಾವತಾರ ವಿಸ್ತಾರ’

ಬೆಂಗಳೂರು: ‘ಲಂಚಾವತಾರ ವಿಸ್ತಾರ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಡಿ.12) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಭ್ರಷ್ಟಾಚಾರ ಬಯಲಿಗೆಳೆದ ವರದಿ



ಪ್ರಸ್ತುತ ರಾಜ್ಯದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಚಿತ್ರಣವನ್ನು ‘ಪ್ರಜಾವಾಣಿ’ಯ ಒಳನೋಟ ವರದಿ ಕಣ್ಣಿಗೆ ಕಟ್ಟಿಕೊಟ್ಟಿದೆ. ಬೆಂಗಳೂರಿನ ರಸ್ತೆಗಳೆಲ್ಲ ಗುಂಡಿಗಳಿಂದ ತುಂಬಿ ಹೋಗಿವೆ. ಭ್ರಷ್ಟಾಚಾರ ಯಾವ ಮಟ್ಟಿಗಿದೆ ಎಂಬುದಕ್ಕೆ ಆಗಾಗ ನಡೆಯುವ ಡಾಂಬರು ಕಾಮಗಾರಿಗಳೇ ನಿದರ್ಶನ. ದುರಸ್ತಿಯಾಗುವ ರಸ್ತೆಗಳು ವಾರದೊಳಗೆ ಕಿತ್ತು ಹೋಗಿರುತ್ತವೆ. ಲಂಚದಿಂದ ನಡೆಯುವ ಕಾಮಗಾರಿಗಳು ಸಾರ್ವಜನಿಕರಿಗೆ ಯೋಗ್ಯವಾದ ಸ್ಥಿತಿಯಲ್ಲಿ ಇರುವುದಿಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರ ನಿಯಂತ್ರಿಸಬೇಕು.

ಅಜಯ್ ರಾಜ್, ಬೆಂಗಳೂರು

ಪ್ರಾಧಿಕಾರ ಬರಲಿ



ಟೆಂಡರ್ ಪ್ರಕ್ರಿಯೆಯಲ್ಲಿ ಲೋಪವಾದಾಗ ಆಕ್ಷೇಪಣೆ ಸಲ್ಲಿಸಿದರೆ, ಅಧಿಕಾರಿಗಳು ಉತ್ತರಿಸುವುದಿಲ್ಲ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದರೆ ಟೆಂಡರ್ ಕರೆದ ಅಧಿಕಾರಿಯಿಂದಲೇ ಸ್ಪಷ್ಟನೆ ಪಡೆದು ದೂರು ವಿಲೇವಾರಿ ಮಾಡುತ್ತಾರೆ. ದೂರುದಾರ ಕೋರ್ಟ್‌ಗೆ ಹೋದರೂ ವಿಳಂಬ ನೀತಿಗೆ ಹೆದರಿ ಸುಮ್ಮನಾಗುತ್ತಾನೆ. ಇದರಿಂದಲೇ ಟೆಂಡರ್ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಅವ್ಯಾಹತವಾಗಿದೆ. ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸುವ ಪ್ರಾಧಿಕಾರ ಇರಬೇಕು. ಟೆಂಡರ್ ಆಕ್ಷೇಪಣೆಗಳನ್ನು ಶೀಘ್ರವಾಗಿ ಬಗೆಹರಿಸಿ, ತಪ್ಪಿತಸ್ಥ ಅಧಿಕಾರಿಯನ್ನು ಶಿಕ್ಷಿಸುವ ಅಧಿಕಾರವನ್ನೂ ಪ್ರಾಧಿಕಾರಕ್ಕೆ ನೀಡಬೇಕು.

ಬಿ.ಎಂ.ಸತೀಶ್, ದಾವಣಗೆರೆ

ಅಭಿವೃದ್ಧಿಗೆ ಮಾರಕ



ಭ್ರಷ್ಟಾಚಾರ ಇಷ್ಟು ವ್ಯಾಪಕವಾಗಿ ಹರಡುತ್ತಿದ್ದರೆ, ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಲು ಸಾಧ್ಯವಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಭಾರತ ಭ್ರಷ್ಟಾಚಾರ ಮುಕ್ತವಾದರೆ ಮಾತ್ರ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸುತ್ತದೆ.

ಸುರೇಶ ಚೌಗಲಾ, ಬೆಳಗಾವಿ

ವ್ಯವಸ್ಥೆ ಸರಿಯಾಗಬೇಕು



ಯಾವ ಸರ್ಕಾರ ಬಂದರೂ ಲಂಚ ಎಂಬ ಮಾಯಾಜಾಲದಿಂದ ಹೊರಗಿರಲು ಸಾಧ್ಯವಿಲ್ಲ. ಭ್ರಷ್ಟಾಚಾರ ನಿಯಂತ್ರಣಕ್ಕೆ ತನಿಖಾ ಸಂಸ್ಥೆಗಳು ಸರ್ಕಾರದಿಂದಲೇ ರೂಪುಗೊಳ್ಳುತ್ತಿವೆ. ಈಗಿನ ವ್ಯವಸ್ಥೆ ‘ಕಳ್ಳನಿಗೆ ಚಿನ್ನದ ಗಣಿಯ ಉಸ್ತುವಾರಿ’ ನೀಡಿರುವ ಸ್ಥಿತಿಯಲ್ಲಿದೆ. ಟೆಂಡರ್‌ಗಳಲ್ಲೂ ಕಮಿಷನ್ ಪಡೆದು, ಕೊನೆಗೆ ಕಾಮಗಾರಿಯೂ ಕಳಪೆಯಾಗುತ್ತಿದೆ. ಈ ವ್ಯವಸ್ಥೆ ಸರಿಯಾದಾಗ ಮಾತ್ರ ಅಧಿಕಾರಿಗಳ ಖಜಾನೆ ಕಿರಿದಾಗಿ, ದೇಶದ ಪ್ರಗತಿ ಹಿರಿದಾಗಲು ಸಾಧ್ಯ.

ದೇವರಾಜ್, ಬೆಂಗಳೂರು

ಬೇರೂರಿದೆ ಭ್ರಷ್ಟಾಚಾರ



ಬೇಲಿಯೇ ಎದ್ದು ಹೊಲ ಮೇಯುವಂತೆ ಅಧಿಕಾರ ವರ್ಗವೇ ಲಂಚದಲ್ಲಿ ಮುಳುಗಿರುವುದು ದುರಂತವೇ ಸರಿ. ಟೆಂಡರ್‌ನಲ್ಲಿ ಲಂಚದ ಪಾಲು ನೀಡದ ಪ್ರಾಮಾಣಿಕ ಗುತ್ತಿಗೆದಾರರನ್ನು ಮೂಲೆಗುಂಪು ಮಾಡುತ್ತಾರೆ. ಮಾನವೀಯ ಮೌಲ್ಯಗಳು ಮರೆಯಾಗಿ ಭ್ರಷ್ಟಾಚಾರದ ಬೇರುಗಳು ಆಳಕ್ಕೆ ಇಳಿಯುತ್ತಿವೆ.

ಜಿ.ಪಿ.ಬಿರಾದಾರ, ವಿಜಯಪುರ

ಮಠದಲ್ಲೇ ಮೊಟ್ಟೆ, ಬಾಳೆಹಣ್ಣು ತಿನ್ನುತ್ತೇವೆ: ವಿದ್ಯಾರ್ಥಿನಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ನಗರದಲ್ಲಿ ಶನಿವಾರ ಭಾರತ ವಿದ್ಯಾರ್ಥಿ ಒಕ್ಕೂಟದ (ಎಸ್‌ಎಫ್‌ಐ) ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಎಂಎನ್‌ಎಂ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಅಂಜಲಿ ಮೊಟ್ಟೆ ವಿರೋಧಿಸುವ ಮಠಾಧೀಶರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದಳು.

‘ಶಾಲೆಗಳಲ್ಲಿ ಮೊಟ್ಟೆ ವಿತರಿಸುವುದನ್ನು ಮಠಾಧೀಶರು ವಿರೋಧಿಸುವುದು ಮುಂದುವರಿಸಿದಲ್ಲಿ, ಮಕ್ಕಳೆಲ್ಲ ಸೇರಿ ಮಠದಲ್ಲೇ ಮೊಟ್ಟೆ ಮತ್ತು ಬಾಳೆಹಣ್ಣು ಸೇವಿಸುತ್ತೇವೆ’ ಎಂದು ಆಕೆ ಹೇಳಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

‘ನಾವು ಮೊಟ್ಟೆ ತಿಂದ್ರೇನೆ ಬದುಕುತ್ತೇವೆ. ಇಲ್ಲದಿದ್ದರೆ, ಸತ್ತು ಹೋಗುತ್ತೇವೆ. ನಾವು ಮೊಟ್ಟೆ ಸೇವಿಸುವುದು ಬೇಕಾ ಇಲ್ಲವೇ, ಮೊಟ್ಟೆ ವಿತರಣೆ ಮಾಡದಿರುವುದು ಬೇಕಾ. ನಮ್ಮ ಬೆನ್ನಿಗೆ ಯಾರೂ ಇಲ್ಲ ಅಂತ ತಿಳಿದಿರಾ ಹೇಗೆ. ಶಾಲೆ, ಪೋಷಕರು, ಶಿಕ್ಷಕರು, ಎಸ್‌ಎಫ್‌ಐ ಸಂಘಟನೆಯವರು ಇದ್ದಾರೆ. ಮೊಟ್ಟೆ ವಿತರಿಸಲು ಮಠಾಧೀಶರು ವಿರೋಧ ವ್ಯಕ್ತಪಡಿಸಿದರೆ, ಮಕ್ಕಳೆಲ್ಲ ಸೇರಿ ಮಠದಲ್ಲೇ ಮೊಟ್ಟೆ, ಬಾಳೆ ಹಣ್ಣು ಸೇವಿಸುತ್ತೇವೆ’ ಎಂದು ಅಂಜಲಿ ಹೇಳಿದಳು.

15ರಂದು ರೈಲ್ವೆ ಪಿಂಚಣಿ ಅದಾಲತ್

ಬೆಂಗಳೂರು: ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗವು ನಗರದಲ್ಲಿರುವ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ಡಿ. 15ರಂದು ಪಿಂಚಣಿದಾರರ ಅದಾಲತ್ ಏರ್ಪಡಿಸಿದೆ.

ರೈಲ್ವೆ ಪಿಂಚಣಿದಾರರು, ಕುಟುಂಬ ಪಿಂಚಣಿದಾರರು ಮತ್ತು ಅವರ ಅವಲಂಬಿತ ಕುಟುಂಬದ ಸದಸ್ಯರು ಬೆಳಿಗ್ಗೆ 11 ಗಂಟೆಗೆ ಆರಂಭವಾಗಲಿರುವ ಅದಾಲತ್‌ನಲ್ಲಿ ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ನೈಋತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕಲಾಪದಲ್ಲಿ ಚರ್ಚೆಗೆ ಕಾರ್ಯಸೂಚಿ ಮಂಡಿಸಿದ 'ರೈತ ಅಧಿವೇಶನ'

ಕೃಷಿ ಕಾಯ್ದೆಗಳ ವಾಪಸ್‌ಗೆ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ



ಬೆಳಗಾವಿಯ ಕಣಬರ್ಗಿಯ ಸಂಕಲ್ಪ ಗಾರ್ಡನ್‌ನಲ್ಲಿ ಸಂಯುಕ್ತ ಹೋರಾಟ–ಕರ್ನಾಟಕ ವತಿಯಿಂದ ಭಾನುವಾರ ಆಯೋಜಿಸಿದ್ದ 'ರೈತ ಅಧಿವೇಶನ'ವನ್ನು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ಅಶೋಕ ಧವಳೆ ಉದ್ಘಾಟಿಸಿದರು. ವಿವಿಧ ಸಂಘಟನೆಗಳ ಮುಖಂಡರಾದ ಸಿದಗೌಡ ಮೋದಗಿ, ಕೋಡಿಹಳ್ಳಿ ಚಂದ್ರಶೇಖರ್, ಬಡಗಲಪುರ ನಾಗೇಂದ್ರ, ಅಲ್ಲಮಪ್ರಭು ಬೆಟ್ಟದೂರು, ದೇವಿ, ಪ್ರಕಾಶ್ ಕಮ್ಮರಡಿ ಹಾಗೂ ಚಾಮರಸ ಮಾಲಿಪಾಟೀಲ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಳಗಾವಿ: 'ಭೂ ಸುಧಾರಣೆ, ಎಪಿಎಂಸಿ ಮತ್ತು ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಗಳಿಗೆ ರಾಜ್ಯ ಸರ್ಕಾರವು 2020ರಲ್ಲಿ ತಂದಿರುವ ರೈತ ವಿರೋಧಿ ತಿದ್ದುಪಡಿಗಳನ್ನು ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಡಿ.13ರಿಂದ ನಡೆಯಲಿರುವ ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲೇ ರದ್ದುಗೊಳಿಸಬೇಕು' ಎಂದು 'ರೈತ ಅಧಿವೇಶನ' ಹಕ್ಕೊತ್ತಾಯ ಮಂಡಿಸಿತು.

ಸಂಯುಕ್ತ ಹೋರಾಟ-ಕರ್ನಾಟಕ ವತಿಯಿಂದ ಹೊರವಲಯದ ಗೋಕಾಕ ರಸ್ತೆಯ ಸಂಕಲ್ಪ ಗಾರ್ಡನ್‌ನಲ್ಲಿ 'ಪರ್ಯಾಯ ಕೃಷಿ ಧೋರಣೆಗಾಗಿ' ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಅಧಿವೇಶನ ನಡೆಸಲಾಯಿತು.

ಕೇಂದ್ರ ಸರ್ಕಾರವು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿರುವುದನ್ನು ಸ್ವಾಗತಿಸಿ ಸಂಭ್ರಮಿಸಲಾಯಿತು. ನೆರೆದವರಿಗೆ ಕುಂದಾ ಹಂಚಲಾಯಿತು. ಕೇಂದ್ರದಂತೆ ರಾಜ್ಯ ಸರ್ಕಾರವೂ ಕಾಯ್ದೆಗಳನ್ನು ಕೂಡಲೇ ವಾಪಸ್ ಪಡೆಯದಿದ್ದರೆ, ದೆಹಲಿಯ ಗಡಿಗಳಲ್ಲಿ ನಡೆದ ಮಾದರಿಯಲ್ಲೇ ರಾಜ್ಯದಲ್ಲೂ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದು ಎಂದು ರೈತರು ಎಚ್ಚರಿಸಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಸಂಘರ್ಷ ಮಾಡುವುದರಲ್ಲಿ ನಾವು ಪ್ರವೀಣರು. ಸಮಾಜದ ಒಳಿತಿಗಾಗಿ ಅಗ್ನಿ ಆಹುತಿಗೂ ಸಿದ್ಧರಿದ್ದೇವೆ. ಪ್ರಧಾನಿ-ಮುಖ್ಯಮಂತ್ರಿ ಕಾರುಗಳಿಗೆ ಮುತ್ತಿಗೆಯನ್ನೂ ಹಾಕುತ್ತೇವೆ. ನಮ್ಮ ಇನ್ನೊಂದು ಆಯಾಮದ ಹೋರಾಟವೇ ಈ ರೈತ ಅಧಿವೇಶನ' ಎಂದು ಹೇಳಿದರು.

'ದೇಶದಲ್ಲಿ ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವಗಳ ನಡುವೆ ಹೋರಾಟ ನಡೆಯುತ್ತಿದೆ. ಸರ್ವಾಧಿಕಾರಿಯ ನಡೆ ವಿರುದ್ಧ ದಿಟ್ಟ ಹೆಜ್ಜೆಗಳನ್ನು ಇಟ್ಟಿರುವುದರಿಂದಲೇ ದೇಶದಲ್ಲಿನ್ನೂ ಪ್ರಜಾಪ್ರಭುತ್ವ ಉಳಿದಿದೆ; ಉಳಿಸಿಕೊಳ್ಳುತ್ತೇವೆ ಎಂಬ ಸಂದೇಶವನ್ನು ರವಾನಿಸಿದೆ. ನಾವಿಲ್ಲಿ ಮಂಡಿಸಿರುವ ಹಕ್ಕೊತ್ತಾಯಗಳ ಬಗ್ಗೆ ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಬೇಕು' ಎಂದು ಒತ್ತಾಯಿಸಿದರು.

'ನಮ್ಮ ಅಧಿವೇಶನದ ನಿರ್ಣಯಗಳನ್ನು ವಿಧಾನಸಭಾಧ್ಯಕ್ಷರು, ಮುಖ್ಯಮಂತ್ರಿ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕರಿಗೆ ಸಲ್ಲಿಸಲಾಗುವುದು. ಆ ಕಾರ್ಯಸೂಚಿ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಬೇಕು. ಸರ್ಕಾರದ ನಡೆಯು ನಮಗೆ ಪೂರಕವಾಗಿಲ್ಲದಿದ್ದರೆ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ. ಸರ್ಕಾರ ಕಿತ್ತೊಗೆಯಲು ಹೋರಾಟ ನಡೆಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ರೈತರ ನಂಬಿಕೆ ಕಳೆದುಕೊಂಡ ಸರ್ಕಾರ: ಸಭಾಧ್ಯಕ್ಷ ಸ್ಥಾನದಿಂದ ಮಾತನಾಡಿದ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರೈತ ಸಮುದಾಯದ ನಂಬಿಕೆ ಕಳೆದುಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ' ಎಂದು ದೂರಿದರು.

'ನಾವು ಬದುಕಿನ ಪ್ರಶ್ನೆಗಳ ಬಗ್ಗೆ ಚರ್ಚಿಸಿದರೆ, ಸರ್ಕಾರಕ್ಕೆ ಅದು ಆದ್ಯತೆಯ ವಿಷಯವಲ್ಲ. ಅಧಿವೇಶನದಲ್ಲಿ ಮತಾಂತರ ನಿಷೇಧ ಕಾಯ್ದೆ ಮಂಡಿಸಲು ಮುಂದಾಗಿದೆ. ಭಾವನಾವಾದಿಗಳನ್ನು ಮೆಚ್ಚಿಸಿ ತಮ್ಮ ಮತ ಬ್ಯಾಂಕ್ ಗಟ್ಟಿ ಮಾಡಿಕೊಳ್ಳಲು ಆದ್ಯತೆ ಕೊಟ್ಟಿದೆ' ಎಂದು ಟೀಕಿಸಿದರು.

ಮುಖ್ಯಾಂಶಗಳು

- ರೈತ ಹೋರಾಟಕ್ಕೆ ಯಶಸ್ಸು: ಕುಂದಾ ಹಂಚಿಕೆ
- ಈ ಅಧಿವೇಶನದಲ್ಲೆ ಕ್ರಮಕ್ಕೆ ಆಗ್ರಹ
- ಸರ್ಕಾರ ಕಿತ್ತೊಗೆಯಲು ಹೋರಾಟಕ್ಕೂ ಸಿದ್ಧ

ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ದೆಹಲಿಯ ಗಡಿಗಳಲ್ಲಿ ಸೇರಿದಂತೆ ಹಲವೆಡೆ ನಡೆದ ಹೋರಾಟಕ್ಕೆ ಮಾಧ್ಯಮ ಸಮರ್ಪಕ ಬೆಂಬಲ ನೀಡಲಿಲ್ಲ

ಅಲ್ಲಮಪ್ರಭು ಬೆಟ್ಟದೂರು, ಸಾಹಿತಿ

ಪೊಲೀಸ್ ಇಲಾಖೆಯಿಂದ ಭದ್ರತೆ

ಅಧಿವೇಶನಕ್ಕೆ ಪರ್ಯಾಯವಾಗಿ ಎಂಇಎಸ್‌ನಿಂದ 'ಮಹಾಮೇಳಾವ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗಡಿಯಲ್ಲಿ ಒಂದಿಲ್ಲೊಂದು ನಾಡವಿರೋಧಿ ಚಟುವಟಿಕೆ ಕೈಗೊಳ್ಳುತ್ತಾ ಬಂದಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮುಖಂಡರು, ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಪರ್ಯಾಯವಾಗಿ ಡಿ.13ರಂದು ಬೆಳಿಗ್ಗೆ 11ಕ್ಕೆ ಇಲ್ಲಿನ ತಿಲಕವಾಡಿಯ ವ್ಯಾಕ್ಸಿನ್ ಡಿಪೊ ಮೈದಾನದಲ್ಲಿ 'ಮಹಾಮೇಳಾವ' ಆಯೋಜಿಸಿದ್ದಾರೆ.


ಗಡಿ ವಿವಾದಕ್ಕೆ ಇಂಬು ಕೊಡುವಂತೆ, ಮಹಾಮೇಳಾವದಲ್ಲಿ ಪಾಲ್ಗೊಳ್ಳಲು ಮಹಾರಾಷ್ಟ್ರದ ಸಚಿವರಾದ ಏಕನಾಥ ಶಿಂಧೆ, ಹಸನ್ ಮುಶ್ರಿಫ್, ಛಗನ್ ಭುಜಬಲ್ ಮತ್ತು ಆ ರಾಜ್ಯದ ಮುಖಂಡರಿಗೆ ಆಹ್ವಾನ ನೀಡಿದ್ದಾರೆ.

'ಮರಾಠಿ ಭಾಷಿಗರ ವಿರೋಧದ ಮಧ್ಯೆಯೂ ರಾಜ್ಯ ಸರ್ಕಾರ ಇಲ್ಲಿ ಅಧಿವೇಶನ ನಡೆಸುತ್ತಿದೆ. ಹಾಗಾಗಿ ಅದಕ್ಕೆ ಪರ್ಯಾಯವಾಗಿ ಮಹಾಮೇಳಾವ ಸಂಘಟಿಸುತ್ತಿದ್ದೇವೆ. ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುವುದರಲ್ಲಿ ತಪ್ಪೇನಿಲ್ಲ. ಮರಾಠಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಲಿದ್ದಾರೆ' ಎಂದು ಎಂಇಎಸ್ ಅಧ್ಯಕ್ಷ ದೀಪಕ ದಳವಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮಹಾಮೇಳಾವಕ್ಕೆ ಅನುಮತಿ ನೀಡಿಲ್ಲ. ಆದರೂ, ಕಾರ್ಯಕ್ರಮಕ್ಕೆ ವೇದಿಕೆ ನಿರ್ಮಿಸಿದ್ದಾರೆ. ಮುನ್ನೆಚ್ಚರಿಕೆ ದೃಷ್ಟಿಯಿಂದ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಟ್ಟೆಚ್ಚರ ವಹಿಸಿದ್ದೇವೆ. ವ್ಯಾಕ್ಸಿನ್ ಡಿಪೊಗೆ ಸಂಪರ್ಕ ಕಲ್ಪಿಸುವ ಮಾರ್ಗದ ರಸ್ತೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿದ್ದೇವೆ. ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿದ್ದೇವೆ. ನಿಯಮ ಉಲ್ಲಂಘಿಸಿ ಕಾರ್ಯಕ್ರಮ ಆಯೋಜಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸುತ್ತೇವೆ' ಎಂದು ತಿಲಕವಾಡಿ ಠಾಣೆ ಇನ್‌ಸ್ಪೆಕ್ಟರ್ ರಾಘವೇಂದ್ರ ಹವಾಲ್ದಾರ ತಿಳಿಸಿದರು.

ದೇವೇಗೌಡರ ಜೀವನ ಚರಿತ್ರೆ: ಇಂದು ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಜೀವನ ಚರಿತ್ರೆ ಕುರಿತ ಕೃತಿ ನವದೆಹಲಿಯಲ್ಲಿ ಡಿ.13ರಂದು ಬಿಡುಗಡೆಯಾಗಲಿದೆ. 'ಫರೋಸ್ ಇನ್ ಎ ಫೀಲ್ಡ್: ದ ಅನ್‌ಎಕ್ಸ್‌ಪ್ಲೋರ್ಡ್ ಲೈಫ್ ಆಫ್ ಎಚ್.ಡಿ. ದೇವೇಗೌಡ' ಶೀರ್ಷಿಕೆ ಅಡಿಯಲ್ಲಿ ಕೃತಿ ಪ್ರಕಟಿಸಲಾಗಿದೆ. ಪತ್ರಕರ್ತ ಸುಗತ ಶ್ರೀನಿವಾಸರಾಜು ಅವರು ಈ ಕೃತಿ ರಚಿಸಿದ್ದಾರೆ. ಖ್ಯಾತ ವಕೀಲ ಫಾಲಿ ಎಸ್.ನರಿಮನ್ ಅವರು ಈ ಪುಸ್ತಕವನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

ಬೆಳಗಾವಿ: ಕಲಾಪವೋ ಕದನವೋ

ಒಂದನೇ ಪುಟದಿಂದ

ಈ ಬಾರಿಯ ಮತ್ತೊಂದು ವಿಶೇಷವೆಂದರೆ ಎಂಟು ವರ್ಷಗಳ ಬಳಿ ಉತ್ತರ ಕರ್ನಾಟಕವನ್ನು ಪ್ರತಿನಿಧಿಸುವರೊಬ್ಬರು ಮುಖ್ಯಮಂತ್ರಿಯಾಗಿದ್ದು, ಈ ಭಾಗದ ಆಶೋತ್ತರವನ್ನು ಅವರ ಮುಂದೆ ಮಂಡಿಸಿ, ತಮ್ಮ ಬೇಡಿಕೆ ಈಡೇರಿಸಿಕೊಳ್ಳಬೇಕೆಂಬ ತವಕ ಜನಪ್ರತಿನಿಧಿಗಳು ಹಾಗೂ ಜನರಲ್ಲಿ ಮೂಡಿದೆ. ಏಕೆಂದರೆ 2012ರಲ್ಲಿ ಮುಖ್ಯಮಂತ್ರಿಯಾಗಿದ್ದ ಜಗದೀಶ್ ಶೆಟ್ಟರ್ ಅವರ ಬಳಿಕ ಅದೇ ಧಾರವಾಡ ಸೀಮೆಯಲ್ಲಿ ಬೆಳೆದ ಬಸವರಾಜ ಬೊಮ್ಮಾಯಿ ಆಡಳಿತ ಚುಕ್ಕಾಣಿ ಹಿಡಿದಿದ್ದಾರೆ. ಅವರು ಮುಖ್ಯಮಂತ್ರಿಯಾದ ಬಳಿಕ ಇಲ್ಲಿ ನಡೆಯುತ್ತಿರುವ ಮೊದಲ ಅಧಿವೇಶನ ಇದಾಗಿದೆ. ಈ ಭಾಗದ ಪ್ರತಿನಿಧಿಯಾಗಿ ಇತ್ತಲಿನ ಸೀಮೆಯ ಕೂಗಿಗೆ ಕಿವಿಗೊಟ್ಟು, ಸ್ಪಂದಿಸುವ ಸವಾಲು ಬೊಮ್ಮಾಯಿ ಎದುರು ಇದೆ.



ಬೆಳಗಾವಿ ಸುವರ್ಣಸೌಧದ ವಿಧಾನಸಭಾ ಸಭಾಂಗಣಕ್ಕೆ ಭಾನುವಾರ ಭೇಟಿ ಕೊಟ್ಟ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಂತಿಮ ಹಂತದ ಸಿದ್ಧತೆಯನ್ನು ಪರಿಶೀಲಿಸಿದರು ಪ್ರಜಾವಾಣಿ ಚಿತ್ರ/ ರಂಜು ಪಿ

ಉ–ಕ ವಿಷಯ ಚರ್ಚೆಗೆ ಎರಡು ದಿನ: ಪರಿಶೀಲನೆ

ಬೆಳಗಾವಿ: ಸೋಮವಾರದಿಂದ ಆರಂಭವಾಗಲಿರುವ ವಿಧಾನ ಸಭಾ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ವಿಷಯಗಳ ಕುರಿತ ಚರ್ಚೆಗೆ 2 ದಿನ ಮೀಸಲಿಡಬೇಕು ಎಂಬ ಮನವಿಯನ್ನು ಪರಿಶೀಲಿಸುವುದಾಗಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಸುದ್ದಿಗಾರರ ಜತೆಗೆ ಭಾನುವಾರ ಮಾತನಾಡಿದ ಅವರು, 'ಈ ಕುರಿತು ಹಲವು ಸದಸ್ಯರು ಮನವಿ ಮಾಡಿದ್ದಾರೆ. ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸುತ್ತೇನೆ. ಇದಕ್ಕೆ ಅವಕಾಶ ಮಾಡಿಕೊಡುವ ಸಾಧ್ಯತೆಗಳ ಬಗ್ಗೆಯೂ ಪರಿಶೀಲಿಸುತ್ತೇನೆ' ಎಂದರು.

ಕಾಂಗ್ರೆಸ್ ಕೈಯಲ್ಲಿ ಪ್ರಬಲಾಸ್ತ್ರ

2023ರಲ್ಲಿ ಮುಖಾಮುಖಿಯಾಗಲಿರುವ ವಿಧಾನಸಭೆ ಚುನಾವಣೆಯ ಕಾವು ಈಗಿನಿಂದಲೇ ಶುರುವಾಗಿದ್ದು, ಸರ್ಕಾರದ ತಪ್ಪು ಹೆಜ್ಜೆಗಳನ್ನು ಮುಂದಿಟ್ಟು ಜನರ ವಿಶ್ವಾಸ ಗಳಿಸುವ ತಯಾರಿಯನ್ನು ಕಾಂಗ್ರೆಸ್ ನಡೆಸಲಾರಂಭಿಸಿದೆ.

ಕಲಾಪದ ಅವಧಿಯನ್ನು ಅದಕ್ಕೆ ಮೀಸಲಿಟ್ಟು ಸರ್ಕಾರದ ಲೋಪದೋಷಗಳನ್ನು ಜನರ ಮುಂದೆ ತೆರೆದಿಡಲು ಈ ಬಾರಿ ಅನೇಕ ಹತಾರಗಳು ಕಾಂಗ್ರೆಸ್ ಕೈಗೆ ಸಿಕ್ಕಿವೆ. ಸರ್ಕಾರದ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎಂದು ಪ್ರಧಾನಿ ಕಚೇರಿಗೆ ತಲುಪಿರುವ ಗುತ್ತಿಗೆದಾರರ ಸಂಘದ ದೂರನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಅಡಕತ್ತರಿಗೆ ದೂಡಲು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಣಿಯಾಗಿದ್ದಾರೆ. ಬಹುಕೋಟಿ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ ಎನ್ನಲಾಗುತ್ತಿರುವ ಬಿಟ್ ಕಾಯಿನ್ ಹಗರಣದ ದೂರು ಪ್ರಧಾನಿ ಕಚೇರಿಗೆ ತಲುಪಿದ್ದು, ಈ ವಿಷಯವನ್ನು ಸರ್ಕಾರವನ್ನು ಹಣಿಯುವ ಅಸ್ತ್ರವಾಗಿ ಬಳಸಲು ಕಾಂಗ್ರೆಸ್ ಸಜ್ಜುಗೊಂಡಿದೆ.

ಇದರ ಜತೆಗೆ ಕೋವಿಡ್ ಅವಧಿಯಲ್ಲಿನ ಖರೀದಿ ಅಕ್ರಮ ಕುರಿತು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ವರದಿಯು ಸದನದಲ್ಲಿ ಮಂಡನೆಯಾಗುವ ಸಂಭವ ಇದೆ. ಅದನ್ನು ಕೂಡ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧನವಾಗಿ ಬಳಸಲು ಪ್ರತಿಪಕ್ಷ ಸಿದ್ಧತೆ ನಡೆಸಿದೆ. ಮಳೆಹಾನಿಗೆ ಸ್ಪಂದಿಸದೇ ಇರುವುದು, ಕೋವಿಡ್ ಕಾಲದ ಸಾವು ನೋವುಗಳು ಚರ್ಚೆಯ ಮುನ್ನೆಲೆಗೆ ಬರಲಿವೆ. ಕೇಂದ್ರ ಸರ್ಕಾರವು ಕೃಷಿ ಕಾಯ್ದೆಯನ್ನು ವಾಪಸ್ ಪಡೆದಂತೆ ರಾಜ್ಯದಲ್ಲೂ ಪಡೆಯಬೇಕು ಎಂಬ ಬೇಡಿಕೆಯೂ ಅಧಿವೇಶನದ ಪ್ರಮುಖ ವಿಷಯವಾಗುವ ಸಾಧ್ಯತೆ ಇದೆ.

ಆಡಳಿತ ಪಕ್ಷದ ಪ್ರತ್ಯಸ್ತ್ರ

ಮಳೆಹಾನಿಯಿಂದ ನಷ್ಟಕ್ಕೆ ಒಳಗಾದವರಿಗೆ ತಕ್ಷಣದಲ್ಲೇ ಪರಿಹಾರ ಒದಗಿಸಿರುವ ಸರ್ಕಾರ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆರು ತಿಂಗಳು, ವರ್ಷ ಕಳೆದರೂ ಪರಿಹಾರ ಸಿಕ್ಕುತ್ತಿರಲಿಲ್ಲ ಎಂಬ ವಾದ ಮುಂದಿಟ್ಟು ವಿರೋಧ ಪಕ್ಷವನ್ನು ಮಣಿಸುವ ಅಸ್ತ್ರವನ್ನೂ ಇಟ್ಟುಕೊಂಡಿದೆ.

'ಶೇ 40ರಷ್ಟು ಲಂಚದ ಆರೋಪಕ್ಕೆ ಯಾವುದೇ ಸಾಕ್ಷ್ಯವಿಲ್ಲ; ಅದು ರಾಜಕೀಯ ಪ್ರೇರಿತ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಈಗಾಗಲೇ ಪ್ರತಿಪಾದಿಸಿದ್ದಾರೆ. ಇದನ್ನೇ ಪ್ರತ್ಯುತ್ತರವಾಗಿ ಬಳಸಲು ಆಡಳಿತ ಪಕ್ಷ ಆಲೋಚಿಸಿದ್ದು, ಕಾಂಗ್ರೆಸ್ ಸರ್ಕಾರದ ಅವಧಿಯ ಹಗರಣಗಳನ್ನು ಮುಂದೆ ಮಾಡಿ ಎದುರಾಳಿಗಳ ದಾಳಿಯನ್ನು ಬದಿಗಟ್ಟುವ ಯತ್ನ ನಡೆಸಲಾಗುವುದು. ಕಾಂಗ್ರೆಸ್ ಅವಧಿಯಲ್ಲೇ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣನನ್ನು ವಶಕ್ಕೆ ಪಡೆಯಲಾಗಿತ್ತು. ಬಿಟ್ ಕಾಯಿನ್ ಹಗರಣ ಕೂಡಾ ಆಗಲೇ ನಡೆದಿದ್ದು, ಆ ಪಕ್ಷದ ನಾಯಕರ ಮಕ್ಕಳೇ ಭಾಗಿಯಾಗಿದ್ದಾರೆ ಎಂಬ ದಾಖಲೆಯನ್ನು ಮುಂದಿಟ್ಟು ವಿರೋಧ ಪಕ್ಷದ ವಾದವನ್ನು ಮಣಿಸಲಾಗುವುದು' ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು.

ಸಿಡಿಎಸ್ ಸಾವಿನ ಬಗ್ಗೆ ಆಕ್ಷೇಪಾರ್ಹ ಬರಹ: ಆರೋಪಿ ಸೆರೆ

ಬೆಂಗಳೂರು: ಭಾರತೀಯ ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್ ಮತ್ತು ಇತರರ ವಿರುದ್ಧ ಆಕ್ಷೇಪಾರ್ಹ ಬರಹ ಪ್ರಕಟಿಸಿದ್ದ ಆರೋಪದಡಿ ಟಿ.ಕೆ. ವಸಂತ್ ಕುಮಾರ್ (40) ಎಂಬಾತನನ್ನು ನಗರದ ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೈಸೂರಿನ ವಸಂತ್ ಕುಮಾರ್, ನಗರದ ಆಸ್ಪತ್ರೆಯೊಂದರ ಲ್ಯಾಬ್‌ನಲ್ಲಿ ತಂತ್ರಜ್ಞನಾಗಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ. ತಮಿಳುನಾಡಿನ ಕೂನೂರಿನಲ್ಲಿ ನಡೆದಿದ್ದ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿರುವ ಬಿಪಿನ್ ರಾವತ್ ಹಾಗೂ ಇತರರ ಬಗ್ಗೆ ತನ್ನ ಫೇಸ್‌ಬುಕ್ ಖಾತೆಯಲ್ಲಿ ಆಕ್ಷೇಪಾರ್ಹ ಬರಹ ಪ್ರಕಟಿಸಿದ್ದ. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಪಿನ್ ರಾವತ್, ಮೋದಿ ಗುಲಾಮತನದ ಒಂದು ತಲೆಮಾರು. ಚೀನಾ ದೇಶ, ಭಾರತ ಗಡಿಯಲ್ಲಿ ಬಂದು ಹಳ್ಳಿಗಳನ್ನು ನಿರ್ಮಿಸಿದಾಗ ಮೋದಿಯಂತೆ ಬುಡಬುಡಿಕೆ ಹೇಳಿಕೆ ಕೊಟ್ಟ ವ್ಯಕ್ತಿ. ರಾವತ್ ಸಾವಿನಿಂದ ದೇಶವಂತೂ ಪಾರಾಗಿದೆ. ಅವರ ಜಾಗಕ್ಕೆ ನಿಜವಾದ ಒಬ್ಬ ಗಂಡು ಮಗ ಬರುತ್ತಾನೆಂಬ ನಂಬಿಕೆಯೊಂದಿಗೆ ನಾನು ಸಮಾಧಾನವಾಗಿದ್ದೇನೆ' ಎಂಬುದಾಗಿ ಆರೋಪಿ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದ.

'ಭಾರತೀಯ ಸೇನೆ ಬಗ್ಗೆ ದುರುದ್ದೇಶದಿಂದ ಕೂಡಿದ ಪದಗಳನ್ನು ಬಳಸಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರಲು ಉದ್ದೇಶ ಆರೋಪಿಯದ್ದಾಗಿದೆ. ವಸಂತ್ ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಬೆಂಗಳೂರು ಪೊಲೀಸ್ ಕಮಾಂಡ್ ಕೇಂದ್ರದ ಪಿಎಸ್‌ಐ ದೂರು ನೀಡಿದ್ದರು.

ಪಿಡಬ್ಲ್ಯುಡಿ 930 ಎಂಜಿನಿಯರ್‌ಗಳ ನೇಮಕಾತಿ: 130 ಕೇಂದ್ರಗಳಲ್ಲಿ ಪರೀಕ್ಷೆ

‘ಅಕ್ರಮ ತಡೆಗೆ ಕಟ್ಟುನಿಟ್ಟಿನ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿ (ಪಿಡಬ್ಲ್ಯುಡಿ) ಖಾಲಿ ಇರುವ ಸಹಾಯಕ ಎಂಜಿನಿಯರ್ (ಎಇ) 660 ಮತ್ತು ಕಿರಿಯ ಎಂಜಿನಿಯರ್ (ಜೆಇ) 330 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ರಾಜ್ಯದ 130 ಕೇಂದ್ರಗಳಲ್ಲಿ ಸೋಮವಾರ (ಡಿ. 13) ಮತ್ತು ಮಂಗಳವಾರ (ಡಿ. 14) ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ.

‘ಎಇ ಹುದ್ದೆಗೆ 55 ಸಾವಿರ ಅಭ್ಯರ್ಥಿಗಳು, ಜೆಇ ಹುದ್ದೆಗೆ 22 ಸಾವಿರ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಕೆಲವು ಅಭ್ಯರ್ಥಿಗಳು ಎರಡೂ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದಾರೆ. ಇದೇ 15 ರಂದು ನಡೆಯಲಿರುವ ಕಡ್ಡಾಯ ಕನ್ನಡ ಪರೀಕ್ಷೆಯನ್ನು ಸುಮಾರು 9 ಸಾವಿರ ಅಭ್ಯರ್ಥಿಗಳು ಬರೆಯಲಿದ್ದಾರೆ.



ಜಿ.ಸತ್ಯವತಿ

ಬಹುತೇಕ ಮಂದಿ ಈಗಾಗಲೇ ಪ್ರವೇಶಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಯಾವುದೇ ಕಾರಣಕ್ಕೂ ಪರೀಕ್ಷೆಯಲ್ಲಿ ಅಕ್ರಮ ನಡೆಯಬಾರದು ಎಂಬ ಕಾರಣಕ್ಕೆ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ.ಸತ್ಯವತಿ ತಿಳಿಸಿದರು.

‘ಬೆಂಗಳೂರಿನ 52, ಮೈಸೂರಿನ 36, ಧಾರವಾಡದ 7, ಕಲಬುರಗಿಯ 35 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಅತ್ಯಾಧುನಿಕ ಬ್ಲೂ ಟೂತ್ ಸಾಧನದ ಮೂಲಕ ಪರೀಕ್ಷಾ ಅಕ್ರಮ ನಡೆಸುವ ಸಾಧ್ಯತೆಯ ಬಗ್ಗೆ ದೂರುಗಳು ಬಂದಿರುವುದರಿಂದ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಲಾಗಿದೆ. ಅಭ್ಯರ್ಥಿಗಳಿಗೆ ಅವರ ಸ್ವಂತ ಊರಿನಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಿಲ್ಲ’ ಎಂದರು.

‘ದೂರದ ಊರುಗಳಲ್ಲಿ ಪರೀಕ್ಷಾ ಕೇಂದ್ರ ನೀಡಿದ ಬಗ್ಗೆ ಕೆಲವು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆದರೆ, ಪಾರದರ್ಶಕ ಮತ್ತು ಕಟ್ಟುನಿಟ್ಟಿನಿಂದ ಪರೀಕ್ಷೆ ನಡೆಸಲು ಇಂಥ ಕ್ರಮ ಅನಿವಾರ್ಯ. ಅಭ್ಯರ್ಥಿಗಳ ಪ್ರಯಾಣಕ್ಕೆ ಸಮಸ್ಯೆ ಆಗಬಾರದೆಂಬ ಕಾರಣಕ್ಕೆ ಹೆಚ್ಚಿನ ಬಸ್ ಸೌಲಭ್ಯ ಒದಗಿಸಲು ಸಾರಿಗೆ ಸಂಸ್ಥೆ ತಿಳಿಸಲಾಗಿದೆ. ರೈಲು ಸೇವೆಯನ್ನೂ ಒದಗಿಸುವಂತೆ ನೈರುತ್ಯ ರೈಲ್ವೆಗೂ ಮನವಿ ಮಾಡಲಾಗಿದೆ’ ಎಂದರು.

‘ಪ್ರಶ್ನೆಪತ್ರಿಕೆ ವಿಚಾರದಲ್ಲೂ ಪರೀಕ್ಷಾ ನಿಯಂತ್ರಕರು ಹೊಸ ಕ್ರಮವನ್ನು ಅಳವಡಿಸಿಕೊಂಡಿದ್ದಾರೆ. ಅಭ್ಯರ್ಥಿಗಳು ಫಿಲ್ಟರ್ ಮಾಸ್ಕ್ ಬಳಸಲು ಅವಕಾಶ ಇಲ್ಲ. ಪರೀಕ್ಷಾ ಕೊಠಡಿಗಳಿಗೆ ‘ಡಿ’ ದರ್ಜೆಯ ನೌಕರರಿಗೆ ಪ್ರವೇಶ ನಿಷೇಧಿಸಲಾಗಿದೆ. ಪರೀಕ್ಷೆ ನಡೆಯುತ್ತಿರುವ ಮಧ್ಯೆ ಶೌಚಾಲಯಕ್ಕೆ ಹೋಗುವವರ ಮೇಲೆ ನಿಗಾ ವಹಿಸಲು ಪ್ರತ್ಯೇಕ ತಂಡ ರಚಿಸಲಾಗಿದೆ. ಈ ಹಿಂದೆ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದವರ ಮೇಲೆ ಹದ್ದಿನ ಕಣ್ಣಿಡುವಂತೆ ಪೊಲೀಸ್ ಇಲಾಖೆಗೂ ಕೋರಲಾಗಿದೆ’ ಎಂದು ವಿವರಿಸಿದರು.

ಕುತೂಹಲ ಮೂಡಿಸಿದ ಸಿದ್ದರಾಮಯ್ಯ– ಇಬ್ರಾಹಿಂ ಭೇಟಿ

ಬೆಂಗಳೂರು: ವಿಧಾನಪರಿಷತ್‌ನ 25 ಸ್ಥಾನಗಳಿಗೆ ಚುನಾವಣೆ ಮುಗಿಯುತ್ತಿದ್ದಂತೆಯೇ, ಪರಿಷತ್‌ನ ವಿರೋಧ ಪಕ್ಷದ ನಾಯಕನ ಸ್ಥಾನದ ಬಗ್ಗೆ ಕಾಂಗ್ರೆಸ್‌ನಲ್ಲಿ ಚರ್ಚೆ ಆರಂಭವಾಗಿದೆ. ಆ ಸ್ಥಾನವನ್ನು ತನಗೆ ನೀಡುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಳಿ ಸಿ.ಎಂ.ಇಬ್ರಾಹಿಂ ಮನವಿ ಮಾಡಿದ್ದಾರೆ.

ಎಸ್.ಆರ್.ಪಾಟೀಲ ಅವರಿಂದ ತೆರವಾಗುವ ಸ್ಥಾನಕ್ಕೆ ಹೊಸಬರನ್ನು ಕಾಂಗ್ರೆಸ್ ನೇಮಕ ಮಾಡಬೇಕಿದೆ. ಪಾಟೀಲ ಅವರಿಗೆ ಚುನಾವಣೆಯಲ್ಲಿ ಟಿಕೆಟ್ ಸಿಕ್ಕಿಲ್ಲ. ಅವರ ಅವಧಿ ಜ.5 ಕ್ಕೆ ಕೊನೆ ಆಗಲಿದೆ. ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಬಿ.ಕೆ. ಹರಿಪ್ರಸಾದ್, ಆರ್.ಬಿ. ತಿಮ್ಮಾಪೂರ, ನಜೀರ್ ಅಹ್ಮದ್, ಕೆ.ಸಿ.ಕೊಂಡಯ್ಯ, ಅಲ್ಲಂ ವೀರಭದ್ರಪ್ಪ ಹೀಗೆ ಹಲವು ಹೆಸರುಗಳು ಕೇಳಿಬರುತ್ತಿವೆ.

ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿ ಮಾಡಿದ ಇಬ್ರಾಹಿಂ, ಕೆಲಹೊತ್ತು ಮಾತುಕತೆ ನಡೆಸಿದರು. ತನಗೆ ವಿರೋಧ ಪಕ್ಷದ ನಾಯಕನ ಸ್ಥಾನ ನೀಡುವಂತೆ ಅವರು ಈ ಹಿಂದೆಯೂ ಬೇಡಿಕೆ ಇಟ್ಟಿದ್ದರು. ಈ ಮಧ್ಯೆ ಅವರು, ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರಲಿದ್ದಾರೆ ಎಂಬ ವದಂತಿಯೂ ಹರಡಿತ್ತು.

ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಇಬ್ರಾಹಿಂ, ‘ಯೌವನ ತುಂಬಿದಾಗ ಮದುವೆ ಯಾರು ಯಾಕೆ ಬೇಡ ಅಂತಾರೆ? ವಿಧಾನ ಪರಿಷತ್‌ನಲ್ಲಿ ಈಗ ನನಗೆ ಯೌವನ ತುಂಬಿದೆ. ಹೈಕಮಾಂಡ್ ಏನು ಮಾಡುತ್ತದೊ ನೋಡೋಣ’ ಎಂದರು.

‘ಕುಮಾರಸ್ವಾಮಿ, ದೇವೇಗೌಡ ಅವರ ಮೇಲೆ ನನಗೆ ಈಗಲೂ ವಿಶ್ವಾಸವಿದೆ. ಅಡ್ವಾಣಿ ಅವರ ಮೇಲೆಯೂ ವಿಶ್ವಾಸವಿದೆ. ಈಗಲೂ ಅವರ ಮನೆಗೆ ಹೋಗುತ್ತೇನೆ. ದೇಶ ಉಳಿಸಿ ಎಂದು ಬಿಜೆಪಿಯಲ್ಲಿರುವ ಸಮಾನ ಮನಸ್ಕರಿಗೂ ನಾನು ಮನವಿ ಮಾಡುತ್ತೇನೆ’ ಎಂದರು.

‘ವಿಧಾನಪರಿಷತ್ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಕೆಲವರು ಮನವಿ ಮಾಡಿದ್ದಾರೆ. ಈ ಬಗ್ಗೆ ಹೈಕಮಾಂಡ್ ಜತೆಗೆ ಮಾತುಕತೆ ನಡೆಸಿ ಅಂತಿಮಗೊಳಿಸಲಾಗುವುದು’ ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ ಅವರನ್ನು ಇಬ್ರಾಹಿಂ ಭೇಟಿ ಬೆನ್ನಲ್ಲೇ ಕೆಪಿಸಿಸಿ ಕಾರ್ಯಾಧ್ಯಕ್ಷ ಅಧ್ಯಕ್ಷ ಸಲೀಂ ಅಹ್ಮದ್ ಮತ್ತು ಅಲ್ಲಂ ವೀರಭದ್ರಪ್ಪ ಕೂಡ ಭೇಟಿ ಮಾಡಿದರು.

ಮತ್ತೊಂದು ಕಾಯ್ದೆ ಏಕೆ: ಇಬ್ರಾಹಿಂ

ಬೆಂಗಳೂರು: ‘ಮತಾಂತರ ಮಾಡಬಾರದು ಎಂದು ಸಂವಿಧಾನದಲ್ಲೇ ಇದೆ. ಹೀಗಿರುವಾಗ ಮತ್ತೊಂದು ಕಾಯ್ದೆ ಏಕೆ? ಬಲವಂತವಾಗಿ ಯಾರೂ ಮತಾಂತರ ಮಾಡಬಾರದು. ಸ್ವ ಇಚ್ಛೆಯಿಂದ ಹೋಗುವವರು ಹೋಗುತ್ತಾರೆ’ ಎಂದು ವಿಧಾನಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹೇಳಿದರು.

‘ಯಾವುದು ಲವ್, ಯಾವುದು ಜಿಹಾದ್. ಮದುವೆಯಾಗುವುದೇ ಲವ್‌ನಿಂದ. ನಾನು ಮದುವೆಯಾಗಿರುವುದು ಲವ್‌ನಿಂದ. ನೀವು ಮದುವೆಯಾಗಿರುವುದೂ ಲವ್‌ನಿಂದ. ಇನ್ನೆಲ್ಲಿ ಜಿಹಾದ್’ ಎಂದು ಪ್ರಶ್ನಿಸಿದರು.

‘ಶಾಸಕ ಗೂಳಿಹಟ್ಟಿ ಶೇಖರ್ ಅವರ ತಾಯಿಯನ್ನು ಮತಾಂತರ ಮಾಡಿದ್ದರೆ ಕ್ರಮ ತೆಗೆದುಕೊಳ್ಳಲಿ. ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ತಿನ್ನಲು ಅನ್ನ ಇಲ್ಲ, ಉದ್ಯೋಗ ಇಲ್ಲದೆ ಜನ ಸಾಯುತ್ತಿದ್ದು ಆ ಬಗ್ಗೆ ಮಾತನಾಡಲಿ’ ಎಂದರು.

ಲಾಭದಲ್ಲಿರುವ ಎಪಿಎಂಸಿ ಮುಚ್ಚುವುದಿಲ್ಲ: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಲಾಭದಲ್ಲಿರುವ ಎಪಿಎಂಸಿಗಳನ್ನು ಯಾವ ಕಾರಣಕ್ಕೂ ಮುಚ್ಚುವುದಿಲ್ಲ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸ್ಪಷ್ಟಪಡಿಸಿದರು.

ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, ‘ಕೃಷಿ ಉತ್ಪನ್ನಗಳನ್ನು ಎಪಿಎಂಸಿ ಆವರಣದಲ್ಲೇ ಮಾರಬೇಕು ಎಂಬ ಉದ್ದೇಶದಿಂದ ರಾಜ್ಯದಲ್ಲಿ ಎಪಿಎಂಸಿ ಕಾಯ್ದೆ ಜಾರಿಗೆ ತರಲಾಗಿತ್ತು. ರೈತರು ಎಲ್ಲಿ ಬೇಕಾದರೂ ತಮ್ಮ ಬೆಳೆಗಳನ್ನು ಮಾರಬಹುದು ಎಂಬ ಉದ್ದೇಶದಿಂದ ಕಾಯ್ದೆಗೆ ತಿದ್ದುಪಡಿ ತಂದಿದ್ದೇವೆ’ ಎಂದರು.

‘ಎಪಿಎಂಸಿ ಹೊರಗೆ ಮಾರಾಟ ಮಾಡಿದರೆ ದಂಡ ವಿಧಿಸಲಾಗುತ್ತಿತ್ತು ಮತ್ತು ನೋಟಿಸ್ ಕೊಡಲಾಗುತ್ತಿತ್ತು. ಈ ಎರಡನ್ನೂ ತೆಗೆದು ಹಾಕಿದ್ದೇವೆ. ರಾಜ್ಯದ ಯಾವ ಮಾರುಕಟ್ಟೆಯಲ್ಲಿ ಬೇಕಾದರೂ ರೈತರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಬಹುದು. ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ’ ಎಂದು ಸಮರ್ಥಿಸಿಕೊಂಡರು.

‘ವಿರೋಧ ಪಕ್ಷದವರು, ಅಧಿವೇಶನದಲ್ಲಿ ಕೇವಲ ವಿರೋಧ ಮಾಡುವುದನ್ನು ಬಿಟ್ಟು ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸರ್ಕಾರದ ಗಮನಸೆಳೆಯಬೇಕು’ ಎಂದು ಸಲಹೆ ನೀಡಿದರು.

‘ಟೆಂಡರ್ ನೀಡಲು ಶೇ 40ರಷ್ಟು ಲಂಚ ಪಡೆಯಲಾಗುತ್ತಿದೆ ಎನ್ನುವುದು ಆರೋಪವಷ್ಟೆ. ಯಾರು ಸಾಬೀತು ಮಾಡಿದ್ದಾರೆ? ಸುಮ್ಮನೆ ಏನಾದರೂ ಹೇಳುತ್ತಾರೆ’ ಎಂದು ಕಾಂಗ್ರೆಸ್ ನಾಯಕರಿಗೆ ತಿರುಗೇಟು ನೀಡಿದರು. ‘ಅಧಿವೇಶನದಲ್ಲಿ ಪ್ರಸ್ತಾಪಿಸಿದರೆ ಉತ್ತರಿಸಲು ಸಿದ್ಧರಿದ್ದೇವೆ’ ಎಂದರು.

ಒಕ್ಕಲಿಗರ ಸಂಘದ ಚುನಾವಣೆ: ಶೇ 71ರಷ್ಟು ಮತದಾನ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ 35 ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಶೇ 71ರಷ್ಟು ಮತದಾನ ಆಗಿದೆ.

ಮೂರು ವರ್ಷಗಳಿಂದ ಅಧ್ಯಕ್ಷರಿಲ್ಲದೆಯೇ ಆಡಳಿತಾಧಿಕಾರಿ ನೇತೃತ್ವದಲ್ಲಿ ಮುಂದುವರೆದಿದ್ದ ಸಂಘಕ್ಕೆ ಇದೀಗ ಹೈಕೋರ್ಟ್ ಆದೇಶದ ಮೇರೆಗೆ ಚುನಾವಣೆ ನಡೆದಿದೆ. ರಾಜ್ಯದಾದ್ಯಂತ ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ, ಸಂಜೆ 5ರವರೆಗೆ ನಡೆಯಿತು.

ರಾಜ್ಯದಾದ್ಯಂತ ಒಟ್ಟು 221 ಅಭ್ಯರ್ಥಿಗಳು ಕಣದಲ್ಲಿದ್ದು, 1,049 ಮತ ಕೇಂದ್ರಗಳಲ್ಲಿ ಮತದಾನ ನಡೆಯಿತು. ಸಂಘದಲ್ಲಿ ಒಟ್ಟು 5,20,721 ಲಕ್ಷ ಮತದಾರರಿದ್ದು, 3,67,971 ಸದಸ್ಯರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯನ್ನು ಒಳಗೊಂಡ ಜಿಲ್ಲಾ ಕ್ಷೇತ್ರದಲ್ಲಿ ಶೇ 71, ಮೈಸೂರು–ಶೇ 70, ಮಂಡ್ಯ – ಶೇ 56, ಹಾಸನ –ಶೇ 83, ತುಮಕೂರು– ಶೇ 78 , ಚಿತ್ರದುರ್ಗ– ಶೇ 84, ಕೋಲಾರ ಮತ್ತು ಚಿಕ್ಕಬಳ್ಳಾಪುರ ಶೇ –74, ದಕ್ಷಿಣ ಕನ್ನಡ ಮತ್ತು ಉಡುಪಿ – ಶೇ 83, ಕೊಡಗು ಶೇ – 82, ಶಿವಮೊಗ್ಗ ಮತ್ತು ಉತ್ತರ ಕನ್ನಡ ಶೇ 84, ಚಿಕ್ಕಮಗಳೂರು ಶೇ 69ರಷ್ಟು ಮತದಾನ ಆಗಿದೆ.

ಕಾರ್ಯಕಾರಿ ಸಮಿತಿಯ ಸ್ಥಾನಗಳನ್ನು ಗೆಲ್ಲಲು ಸಮುದಾಯ ಪ್ರಮುಖರು ‘ಸಿಂಡಿಕೇಟ್’ ಮಾಡಿಕೊಂಡು ಕಣಕ್ಕಿಳಿದಿದ್ದು, ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟಿದೆ. ಇದೇ 15ರಂದು ಮತ ಎಣಿಕೆ ನಡೆಯಲಿದೆ.

ತುಳಸಿ ಗೌಡರಿಗೆ ‘ಮದರ್ ತೆರೆಸಾ ಸ್ಮಾರಕ ಪ್ರಶಸ್ತಿ’ ಪ್ರದಾನ ಇಂದು

ಅಂಕೋಲಾ: ‘ವೃಕ್ಷ ಮಾತೆ’ಯೆಂದು ಗುರುತಿಸಿಕೊಂಡಿರುವ ತುಳಸಿ ಗೌಡ ಅವರ ಸಮಾಜ ಸೇವೆ ಮತ್ತು ಸುಸ್ಥಿರ ಪರಿಸರದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ‘ಮದರ್ ತೆರೇಸಾ ಸ್ಮಾರಕ ಪ್ರಶಸ್ತಿ 2021’ಗೆ ಅವರನ್ನು ಆಯ್ಕೆ ಮಾಡಲಾಗಿದೆ.

ಸಾಮಾಜಿಕ ಸೇವೆ ಮತ್ತು ಪರಿಸರದ ಜಾಗೃತಿ ಮೂಡಿಸುವ ಮುಂಬೈ ಮೂಲದ ಹಾರ್ಮನಿ ಫೌಂಡೇಷನ್, ಡಿ. 13ರಂದು ಅಲ್ಲಿಯೇ ಪ್ರಶಸ್ತಿ ಪ್ರದಾನ ಮಾಡಲಿದೆ.

‘ಔಪಚಾರಿಕ ಶಿಕ್ಷಣ ಪಡೆಯದೆ ಸಸ್ಯಗಳ ಪಾಲನೆ-ಪೋಷಣೆಯಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲ ಅವರು ತೊಡಗಿಸಿಕೊಂಡಿದ್ದಾರೆ. ಗಿಡ–ಮರಗಳ ಕುರಿತಾದ ಅವರ ಜ್ಞಾನವು ಜೀವನಾನುಭವದಿಂದ ದೊರೆತಿದೆ. ಈ ಹಿನ್ನೆಲೆಯಲ್ಲಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ಹಾರ್ಮನಿ ಫೌಂಡೇಷನ್ ಅಧ್ಯಕ್ಷ ಡಾ.ಅಬ್ರಹಾಂ ಮಥೈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಡಾ.ಭೋಜರಾಜ ಪಾಟೀಲ

ಹಂಸಭಾವಿ (ಹಾವೇರಿ ಜಿಲ್ಲೆ): ಸಂಶೋಧಕ, ಸಾಹಿತಿ ಡಾ.ಭೋಜರಾಜ ಬಸವಯ್ಯ ಪಾಟೀಲ (81) ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಲೇಖಕಿ ಲೀಲಾವತಿ ಪಾಟೀಲ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಹಂಸಭಾವಿಯ ಮಹಾಂತಸ್ವಾಮಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಅಧ್ಯಾಪಕ, ಪ್ರಾಚಾರ್ಯರಾಗಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ್ದರು.



ಹಾವೇರಿ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ‘ನಾಗರಖಂಡ ಎಪ್ಪತ್ತು’ ಎಂಬ ಸಂಶೋಧನಾ ಗ್ರಂಥ ಸೇರಿದಂತೆ ಅವರು 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ಹಾವೇರಿಯಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂಜಿನಿಯರ್‌ಗಳ ನೇಮಕಾತಿಗೆ ಲಂಚ: ಬಿಜೆಪಿ ಶಾಸಕ ಆರೋಪ

ಪಣಜಿ(ಪಿಟಿಐ): ರಾಜ್ಯ ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್‌ಗಳ ನೇಮಕಾತಿ ವೇಳೆ ಗೋವಾದ ಬಿಜೆಪಿ ಸರ್ಕಾರದ ಸಚಿವರೊಬ್ಬರು ಪ್ರತಿ ಅಭ್ಯರ್ಥಿಯಿಂದ ₹25–30 ಲಕ್ಷ ಹಣ ಪಡೆದಿದ್ದಾರೆ ಎಂದು ಅದೇ ಪಕ್ಷದ ಶಾಸಕರೊಬ್ಬರು ಭಾನುವಾರ ಆರೋಪ ಮಾಡಿದ್ದಾರೆ.

ಶಾಸಕ ಆಂಟನಾಸಿಯೊ ಮೊನ್‌ಸರೇಟ್ ಅವರು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರನ್ನು ಭೇಟಿಯಾಗಿ ಈ ಬಗ್ಗೆ ತಿಳಿಸಿದ್ದಾರೆ. ಪಿಡಬ್ಲ್ಯುಡಿ ಎಂಜಿನಿಯರಿಂಗ್ ನೇಮಕಾತಿ ಅಧಿಸೂಚನೆಯನ್ನು ರದ್ದುಗೊಳಿಸಿ ಮತ್ತೊಮ್ಮೆ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಿದರು.

ರಾಜ್ಯ ಲೋಕೋಪಯೋಗಿ ಇಲಾಖೆಯ 150 ಕಿರಿಯ ಎಂಜಿನಿಯರಿಂಗ್ ಹುದ್ದೆಗಳ ಭರ್ತಿಗೆ ಕಳೆದ ತಿಂಗಳು ಪರೀಕ್ಷೆ ನಡೆಸಲಾಗಿತ್ತು. ಶನಿವಾರ ಫಲಿತಾಂಶ ಪ್ರಕಟವಾಗಿತ್ತು.


‘ಎಂಜಿನಿಯರಿಂಗ್ ಹುದ್ದೆಗಳ ನೇಮಕಾತಿ ವೇಳೆ ಲೋಕೋಪಯೋಗಿ ಸಚಿವ ದೀಪಕ್ ಪೌಸ್ಕರ್ ಅವರು ಪ್ರತಿ ಅಭ್ಯರ್ಥಿಯಿಂದ ₹25–30 ಲಕ್ಷ ಹಣವನ್ನು ಲಂಚವಾಗಿ ಪಡೆದಿದ್ದಾರೆ. ಮುಖ್ಯಮಂತ್ರಿಗಳು ತಕ್ಷಣ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯಲ್ಲಿನ ಅಭ್ಯರ್ಥಿಗಳ ಪಟ್ಟಿಯನ್ನು ಹಿಂಪಡೆದು ಮತ್ತೊಮ್ಮೆ ಪಣಜಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪರಿಣತರ ನೇತೃತ್ವದಲ್ಲಿ ಪರೀಕ್ಷೆ ನಡೆಸಬೇಕು’ ಎಂದು ಮಾನ್‌ಸರೇಟ್ ಸುದ್ದಿಗಾರರಿಗೆ ತಿಳಿಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	6,245	6,034
ಹಾರಂಗಿ	2,859	2,854.57	75	581
ಕಬಿನಿ	2,284	2,283.63	820	700
ಹೇಮಾವತಿ	2,922	2,913.16	1,391	2,840
ಲಿಂಗನಮಕ್ಕಿ	1,819	1,810.95	-	-
ಸೂಪಾ (ಮೀ)	564	554.11	-	3,577
ಮಾಣಿ	594.36	586.26	-	-
ತುಂಗಭದ್ರಾ	1,633	1,632.99	8,216	7,976
ಮಲಪ್ರಭಾ	2,079.50	2,077.20	243	1,019
ಘಟಪ್ರಭಾ	2,175	2,166.16	172	172
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.35	5,477	1,577
ನಾರಾಯಣಪುರ (ಮೀ)	492.25	491.68	714	7,294

* ನೆಲಮಟ್ಟದಿಂದ

ಬಡ್ತಿ: ಮೂಲಭೂತ ಹಕ್ಕಾಗಿ ರೂಪುಗೊಂಡಿದೆ ‘ಸುಪ್ರೀಂ’



ನವದೆಹಲಿ: ಬಡ್ತಿಯನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗದು. ಆದರೆ, ಬಡ್ತಿಗೆ ಪರಿಗಣಿಸಬೇಕು ಎಂಬುದು ಮೂಲಭೂತ ಹಕ್ಕಾಗಿ ರೂಪುಗೊಂಡಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ವಿಕ್ರಂ ನಾಥ್, ಬಿ.ವಿ.ನಾಗರತ್ನ ಅವರಿದ್ದ ಪೀಠವು, ಸುಪ್ರೀಂ ಕೋರ್ಟ್ ಆಗಿಂದಾಗ್ಗೆ ಬಡ್ತಿ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಬೇಕು ಎಂದು ಒತ್ತಿ ಹೇಳಿದೆ ಎಂದಿದೆ.

‘ಈ ಹಿಂದೆಯೂ ಅಜಿತ್ ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ವ್ಯಕ್ತಿಯು ಬಡ್ತಿಗೆ ಅರ್ಹನಾಗಿ, ಅಗತ್ಯ ಮಾನದಂಡಗಳನ್ನು ಪೂರೈಸಿದ್ದಾಗಿಯೂ ಬಡ್ತಿಗೆ ಪರಿಗಣಿಸದೇ ಇದ್ದರೆ, ಅದು ಆತನ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಲಿದೆ ಎಂದು ಸ್ಪಷ್ಟವಾಗಿ ಹೇಳಿತ್ತು’ ಎಂದು ಪೀಠ ಉಲ್ಲೇಖಿಸಿದೆ.

ಸಣ್ಣ ನೀರಾವರಿ ಇಲಾಖೆಯಲ್ಲಿ ಕೆಲ ಕಿರಿಯ ಎಂಜಿನಿಯರ್‌ಗಳಿಗೆ ರಾಜ್ಯ ಸರ್ಕಾರ ಬಡ್ತಿ ನಿರಾಕರಿಸಿದೆ ಎಂದು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾ ಮಾಡಿ ಅಲಹಾಬಾದ್ ಹೈಕೋರ್ಟ್ ಡಿಸೆಂಬರ್ 4, 2019ರಲ್ಲಿ ನೀಡಿದ್ದ ಆದೇಶವನ್ನು ಅನೂರ್ಜಿತಗೊಳಿಸಿತು.

ಸೋಲೆಂಬ ರೋಗಕ್ಕೆ ಆತ್ಮವಿಶ್ವಾಸವೇ ಮದ್ದು



ಬದಲಾಗಿರುವ ಮಾಧ್ಯಮರಂಗದಲ್ಲಿ ಉದ್ಯೋಗಾವಕಾಶ ಮತ್ತು ನಿರೀಕ್ಷೆಗಳು

ಮಾಧ್ಯಮ ಕ್ಷೇತ್ರ ಬದಲಾಗಿದೆ. ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ. ಹಾಗೆಯೇ, ಈ ಕ್ಷೇತ್ರ ಬರವಣಿಗೆ, ಮಾತುಗಾರಿಕೆಯಂತಹ ಕೌಶಲಗಳ ಜೊತೆಗೆ ತಾಂತ್ರಿಕ ನೈಪುಣ್ಯತೆಯನ್ನೂ ನಿರೀಕ್ಷಿಸುತ್ತದೆ.

ಸಿಬಂತಿ ಪದ್ಮನಾಭ ಕೆ. ವಿ.



ಮಾಧ್ಯಮರಂಗ ಯುವತಲೆಮಾರಿನ ಕನಸಿನ ಲೋಕ. ಸಾಮಾಜಿಕ ಮನ್ನಣೆ, ಒಳ್ಳೆಯ ಸಂಪಾದನೆ- ಎರಡನ್ನೂ ಒಂದೇ ಹೆಜ್ಜೆಯಲ್ಲಿ ಸಾಧಿಸಿಕೊಳ್ಳುವ ತವಕ ಹಲವರದು. ಈ ಕನಸು ಅತಿರಂಜಿತವೂ ಅಲ್ಲ, ಅಸಾಧ್ಯವೂ ಅಲ್ಲ. ಆದರೆ ಮಾಧ್ಯಮ ಕ್ಷೇತ್ರದಲ್ಲಿ ಬದುಕು ಕಂಡುಕೊಳ್ಳುವ ಹಂಬಲ ಹೊಂದಿರುವವರು ಅಲ್ಲಿನ ವಾಸ್ತವಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅದರ ನಿರೀಕ್ಷೆಗಳಿಗೆ ಸರಿಹೊಂದುವ ಅರ್ಹತೆಗಳನ್ನು ರೂಢಿಸಿಕೊಳ್ಳುವುದು ಮುಖ್ಯ.

ಮಾಧ್ಯಮಲೋಕ ಕಳೆದ ಒಂದು ದಶಕದಲ್ಲಿ ಊಹೆಗೂ ಮೀರಿ ಬದಲಾಗಿದೆ. ಒಂದು ಕಾಲಕ್ಕೆ ಪತ್ರಿಕೆ, ಟಿವಿ, ರೇಡಿಯೊಗಳಿಗೆ ಸೀಮಿತವಾಗಿದ್ದ ಮಾಧ್ಯಮ ಕ್ಷೇತ್ರ ಈಗ ಹಲವು ಆಯಾಮಗಳನ್ನು ಮೈಗೂಡಿಸಿಕೊಂಡು ಬಹುಕೋಟಿ ಉದ್ಯಮವಾಗಿ ಬೆಳೆದಿದೆ. ಅದನ್ನು 'ಮಾಧ್ಯಮ ಮತ್ತು ಮನರಂಜನಾ ಉದ್ಯಮ' ಎಂದು ಕರೆಯುವವರೆಗೆ ಅದರ ಸ್ವರೂಪ ಬದಲಾಗಿದೆ.

ಭಾರತದಲ್ಲಿ ಇಂದು ಉಳಿದೆಲ್ಲ ಕ್ಷೇತ್ರಗಳಿಗಿಂತಲೂ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರ ಇದುವೇ. ಕೋವಿಡ್ ಉಳಿದೆಲ್ಲ ಕ್ಷೇತ್ರಗಳಂತೆ ಮಾಧ್ಯಮ ಕ್ಷೇತ್ರಕ್ಕೂ ಮಹಾಹೊಡೆತ ನೀಡಿದೆ ಎಂಬುದು ಮೇಲ್ನೋಟದ ತಿಳಿವಳಿಕೆ ಆದರೂ ಒಟ್ಟಾರೆ ರಂಗದ ಮೇಲೆ ಬೇರೆ ಕ್ಷೇತ್ರಗಳಿಗೆ ಆದಷ್ಟು ತೊಂದರೆ ಆಗಿಲ್ಲ ಅಥವಾ ಮಾಧ್ಯಮ ಮತ್ತು ಮನರಂಜನಾ ಉದ್ಯಮ ಬಹುಬೇಗನೆ ಚೇತರಿಸಿಕೊಂಡಿದೆ.

ಹಾಗೆ ನೋಡಿದರೆ ಕೋವಿಡ್ ಮಾಧ್ಯಮರಂಗದ ಸ್ವರೂಪದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಗಿದೆ. ಮಾಧ್ಯಮಗಳ ಡಿಜಿಟಲ್ ಆಯಾಮ ವಿಕಾಸವಾಗಿರುವುದರ ಹಿಂದೆ ಕೋವಿಡ್‌ನ ಕೊಡುಗೆಯೂ ಬಹಳ ಇದೆ. ಇನ್ನು ಎರಡು-ಮೂರು ವರ್ಷಗಳಲ್ಲಿ ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರದ ಶೇ 40 ಪಾಲನ್ನು ಟಿವಿ, ಶೇ 13 ಮುದ್ರಣ ಮಾಧ್ಯಮ, ಶೇ 12 ಜಾಹೀರಾತು, ಶೇ 9 ಸಿನಿಮಾ ಹಾಗೂ ಶೇ 8ರಷ್ಟನ್ನು ಒಟಿಟಿ ಮತ್ತು ಗೇಮಿಂಗ್ ಹೊಂದಲಿವೆ ಎಂದು ಅಧ್ಯಯನಗಳು ತಿಳಿಸಿವೆ.

ಬದಲಾಗಿರುವ ಸ್ವರೂಪ

ಕೆಲವು ವರ್ಷಗಳ ಹಿಂದೆ ಒಳ್ಳೆಯ ಬರವಣಿಗೆ, ಒಳ್ಳೆಯ ಮಾತುಗಾರಿಕೆ, ವಿವಿಧ ರಂಗಗಳ ಉತ್ತಮ ತಿಳಿವಳಿಕೆ ಇದ್ದರೆ ಮುದ್ರಣ-ವಿದ್ಯುನ್ಮಾನ ಮಾಧ್ಯಮಗಳಿಗೆ ಪ್ರವೇಶ ಸುಲಭವಾಗಿತ್ತು. ಈಗ ಮಾಧ್ಯಮರಂಗವೂ ಬದಲಾಗಿದೆ, ನಿರೀಕ್ಷೆಗಳೂ ಬದಲಾಗಿವೆ. ಇದನ್ನು ಆ ಕ್ಷೇತ್ರದಲ್ಲಿ ಉದ್ಯೋಗ ಪಡೆಯಬಯಸುವವರು ಅರ್ಥಮಾಡಿಕೊಳ್ಳಬೇಕು. ಬದಲಾಗಿರುವ ಕಾಲಕ್ಕೆ ತಕ್ಕಂತೆ ತಮ್ಮ ಕೌಶಲಗಳನ್ನು ಬೆಳೆಸಿಕೊಳ್ಳದೆ ಹೋದರೆ ಮಾಧ್ಯಮರಂಗಕ್ಕೆ ಪ್ರವೇಶ ಇಲ್ಲ, ಪ್ರವೇಶಿಸಿದರೂ ಯಶಸ್ಸು ಇಲ್ಲ, ಉಳಿಗಾಲವೂ ಇಲ್ಲ.

ಮಾಧ್ಯಮಗಳನ್ನು ಮುದ್ರಣ ಮತ್ತು ವಿದ್ಯುನ್ಮಾನವೆಂದು ವಿಂಗಡಿಸುವ ಪದ್ಧತಿಯೇ ಹಳತಾಯಿತು. ಅಂತಹ ಪ್ರತ್ಯೇಕತೆ ಈಗ ಉಳಿದುಕೊಂಡಿಲ್ಲ. ಮುದ್ರಣ ಮಾಧ್ಯಮ, ಟಿವಿ ಚಾನೆಲ್‌ಗಳು ಇಂಟರ್ನೆಟ್‌ನಲ್ಲಿವೆ, ಫೇಸ್‌ಬುಕ್‌ನಂತಹ ಸಾಮಾಜಿಕ ತಾಣಗಳಲ್ಲಿವೆ, ಯೂಟ್ಯೂಬ್ ಚಾನೆಲ್‌ಗಳನ್ನು ಹೊಂದಿವೆ. ಪತ್ರಿಕೆಗಳು ಸಾಮಾಜಿಕ ತಾಣಗಳಲ್ಲಿ ಲೈವ್ ಕಾರ್ಯಕ್ರಮಗಳನ್ನು ನೀಡುತ್ತಿವೆ, ಪಾಡ್‌ಕಾಸ್ಟ್, ಕ್ಲಬ್‌ಹೌಸ್ ಚರ್ಚೆಗಳನ್ನು ನಡೆಸುತ್ತಿವೆ, ದೃಶ್ಯ-ಶ್ರವ್ಯ ಸಾಮಗ್ರಿಗಳನ್ನು ಹೆಚ್ಚುಹೆಚ್ಚಾಗಿ ಒದಗಿಸುತ್ತಿವೆ. ಹೆಚ್ಚೆಂದರೆ ಎಲ್ಲವನ್ನೂ ಒಟ್ಟಾಗಿ ಡಿಜಿಟಲ್ ಮಾಧ್ಯಮಗಳು ಎಂದು ಕರೆಯಬಹುದೇನೋ? ಡಿಜಿಟಲ್ ಎಂಬುದು ಮಾಧ್ಯಮರಂಗದ ಭವಿಷ್ಯ ಎಂದು ದಶಕದ ಹಿಂದೆಯೇ ಘೋಷಿಸಿಯಾಗಿದೆ; ಕೋವಿಡ್ ಅದನ್ನು ಬೇಗನೇ ನಿಜವಾಗಿಸಿದೆ.

ಅಗತ್ಯ ಕೌಶಲಗಳು

ಮಾಧ್ಯಮರಂಗದಲ್ಲಾಗಿರುವ ಬದಲಾವಣೆ ತಂತ್ರಜ್ಞಾನದ ಕೊಡುಗೆ ಎಂದ ಮೇಲೆ ಅದರ ಜ್ಞಾನ ಇಂದು ನಿರ್ಣಾಯಕ. ಮಾಧ್ಯಮ ಕೌಶಲಗಳ ಜೊತೆಗೆ ತಾಂತ್ರಿಕ ನೈಪುಣ್ಯವುಳ್ಳವರಿಗೆ ಇಂದು ಮೀಡಿಯಾದಲ್ಲಿ ತೆರೆದ ತೋಳಿನ ಸ್ವಾಗತ. ತಪ್ಪಿಲ್ಲದ ಬರವಣಿಗೆ, ತಡವರಿಸದ ಮಾತು, ಪ್ರಚಲಿತ ವಿದ್ಯಮಾನಗಳ ಉತ್ತಮ ಮಾಹಿತಿ, ಇತಿಹಾಸ, ಸಾಹಿತ್ಯ, ಆರ್ಥಿಕತೆ, ರಾಜಕೀಯ ಮತ್ತಿತರ ಕ್ಷೇತ್ರಗಳ ವಿಸ್ತೃತ ತಿಳಿವಳಿಕೆ, ಕಂಪ್ಯೂಟರ್ ಜ್ಞಾನ- ಇವೆಲ್ಲವುಗಳ ಜೊತೆಗೆ ಮಾಧ್ಯಮರಂಗಕ್ಕೆ ಸೇರಬಯಸುವವರಿಗೆ ಇಂದು ಡಿಜಿಟಲ್ ಕೌಶಲಗಳು ಬಹಳ ಅಗತ್ಯ.

ಸೃಜನಶೀಲ ಚಿಂತನೆ, ಆಡಿಯೊ- ವಿಡಿಯೊ ಎಡಿಟಿಂಗ್, ಸಾಮಾಜಿಕ ಮಾಧ್ಯಮಗಳ ಕಾರ್ಯವೈಖರಿಯ ತಿಳಿವಳಿಕೆ, ಡಿಜಿಟಲ್ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಆಪ್ಟಿಮೈಸೇಶನ್ (ಎಸ್‌ಇಒ) ಕೌಶಲಗಳನ್ನೂ ಇಂದು ಕರಗತ ಮಾಡಿಕೊಳ್ಳುವುದು ಅಗತ್ಯ.

ಅನಿಮೇಶನ್, ವಿಶುವಲ್ ಎಫೆಕ್ಟ್, ಗೇಮಿಂಗ್, ಕಾಮಿಕ್ಸ್- ಇವನ್ನು 'ಛಾಂಪಿಯನ್ ಸೆಕ್ಟರ್ಸ್' ಎಂದು ಮಾರುಕಟ್ಟೆ ಹಾಗೂ ಸರ್ಕಾರ ಎರಡೂ ಗುರುತಿಸಿವೆ. ಮಾಧ್ಯಮರಂಗ ಈ ಆಯಾಮಗಳನ್ನು ತನ್ನೊಳಗೆ ಆವಾಹಿಸಿಕೊಳ್ಳುತ್ತಿದೆ. ಪತ್ರಿಕೆ-ಟಿವಿಗಳ ಆದಾಯ ಮೂಲದ ಲೆಕ್ಕಾಚಾರ ಬದಲಾಗಿದೆ. ಸರ್ಕ್ಯುಲೇಶನ್, ಟಿಆರ್‌ಪಿ ಜಾಗದಲ್ಲಿ ಕ್ಲಿಕ್ಸ್, ವ್ಯೂಸ್ ಪದಗಳು ಕೂಡ ಸೇರಿಕೊಂಡಿವೆ. ಕೃತಕ ಬುದ್ಧಿಮತ್ತೆ, ಮಶಿನ್ ಲರ್ನಿಂಗ್‌ಗಳು ಮಾಧ್ಯಮಗಳ ಕಾರ್ಯವೈಖರಿಯ ಮೇಲೂ ಪ್ರಭಾವ ಬೀರಿವೆ. ಮಾಧ್ಯಮಕ್ಷೇತ್ರದಲ್ಲಿ ಉದ್ಯೋಗ, ಭವಿಷ್ಯ ಬಯಸುವವರು ಈ ಬದಲಾವಣೆಗಳನ್ನೂ ಅರ್ಥಮಾಡಿಕೊಳ್ಳಬೇಕು.

ಮಾಧ್ಯಮ ಶಿಕ್ಷಣ-ತರಬೇತಿ ನೀಡುವ ಕಾಲೇಜು, ವಿಶ್ವವಿದ್ಯಾಲಯಗಳೂ ಇವನ್ನು ಗಮನಿಸದೆ ಹೋದರೆ ಅವರ ಕೋರ್ಸುಗಳೂ ಅಪ್ರಸ್ತುತವಾಗಿಬಿಡುತ್ತವೆ. ಅವುಗಳ ಪಠ್ಯಕ್ರಮ, ತರಬೇತಿಯ ವಿಧಾನ, ಅಧ್ಯಾಪಕರ ತಿಳಿವಳಿಕೆ- ಎಲ್ಲವೂ ಕಾಲಕ್ಕೆ ಅನುಗುಣವಾಗಿ 'ಅಪ್‌ಡೇಟ್' ಆಗುವುದು ಅನಿವಾರ್ಯ.

ಇಷ್ಟೆಲ್ಲ ಹೇಳಿದ ಮೇಲೂ ಮರೆಯದಿರಬೇಕಾದ ಒಂದು ಮಾತು: ತಂತ್ರಜ್ಞಾನದಲ್ಲಿ ಎಷ್ಟೇ ಪ್ರಗತಿ ಆದರೂ ಸಾಮಾಜಿಕ ಬದ್ಧತೆಯೇ ಮಾಧ್ಯಮರಂಗದ ಶಾಶ್ವತ ಅಂತರ್ಗತ ಮೌಲ್ಯ. ಅದಿಲ್ಲದೆ ಮಾಧ್ಯಮಗಳಿಗೆ ಅಸ್ತಿತ್ವ ಇಲ್ಲ. ಮಾಧ್ಯಮರಂಗದಲ್ಲಿ ಉದ್ಯೋಗ ಕಂಡುಕೊಳ್ಳ ಬಯಸುವವರಿಗೂ ಅಂತಿಮವಾಗಿ ಇದೇ ದಾರಿದೀಪ.

(ಲೇಖಕರು: ಸಹಾಯಕ ಪ್ರಾಧ್ಯಾಪಕರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ)

ಹೊಸ ಉದ್ಯೋಗಾವಕಾಶಗಳು

- **ವೆಬ್ ಕಂಟೆಂಟ್ ಮ್ಯಾನೇಜರ್:** ವಿವಿಧ ಉದ್ಯಮ, ಸಂಸ್ಥೆಗಳ ವೆಬ್‌ಸೈಟ್, ಆನ್‌ಲೈನ್ ಹೂರಣವನ್ನು ನಿರ್ವಹಿಸುವುದು.
- **ಸೋಶಿಯಲ್ ಮೀಡಿಯಾ ಮ್ಯಾನೇಜರ್:** ಉದ್ಯಮಗಳು ಹಾಗೂ ಗಣ್ಯರ ಸಾಮಾಜಿಕ ಜಾಲತಾಣ ಪುಟಗಳ ನಿರ್ವಹಣೆ.
- **ಮೀಡಿಯಾ ಪ್ಲಾನರ್:** ಯಾವ ಕಂಪನಿಗಳು ತಮ್ಮ ಜಾಹೀರಾತು, ಪ್ರಚಾರಕ್ಕಾಗಿ ಯಾವ ಮಾಧ್ಯಮಗಳನ್ನು ಹೇಗೆ ಬಳಸಿಕೊಳ್ಳಬೇಕೆಂದು ನಿರ್ಧರಿಸುವುದು.
- **ಪಿಆರ್‌ಒ(ಸಾರ್ವಜನಿಕ ಸಂಪರ್ಕ ಅಧಿಕಾರಿ):** ವಿವಿಧ ಉದ್ಯಮ, ವ್ಯಕ್ತಿ, ಸಂಸ್ಥೆಗಳ ವರ್ಚಸ್ಸು ವೃದ್ಧಿ, ಈವೆಂಟ್ ಮ್ಯಾನೇಜ್‌ಮೆಂಟ್ ಹಾಗೂ ಮಾಧ್ಯಮ ಸಂಬಂಧದ ಜವಾಬ್ದಾರಿ ನಿರ್ವಹಿಸುವುದು.
- **ಡಿಜಿಟಲ್ ಮಾರ್ಕೆಟರ್:** ಸೋಶಿಯಲ್ ಮೀಡಿಯಾ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಆಪ್ಟಿಮೈಸೇಶನ್, ಮೊಬೈಲ್ ಮಾರ್ಕೆಟಿಂಗ್ ಇತ್ಯಾದಿಗಳನ್ನು ನೋಡಿಕೊಳ್ಳುವುದು.
- **ಜಾಹೀರಾತು ಕ್ಷೇತ್ರ:** ಜಾಹೀರಾತು ಸ್ಕ್ರಿಪ್ಟ್(ಸಾಹಿತ್ಯ) ರಚನೆ, ವಿನ್ಯಾಸ ರಚನೆ, ಆಡಿಯೊ-ವಿಶುವಲ್ ಎಡಿಟಿಂಗ್ ಇತ್ಯಾದಿ.
- **ಟೆಕ್ನಿಕಲ್ ರೈಟರ್:** ತಾಂತ್ರಿಕ ಕ್ಷೇತ್ರಗಳಿಗೆ ವಿಶಿಷ್ಟವಾದ ಬರವಣಿಗೆ, ಪ್ರಚಾರ ಹಾಗೂ ತರಬೇತಿ ಸಾಮಗ್ರಿಗಳ ತಯಾರಿ, ಭಾಷಾಂತರ ಮುಂತಾದ ಜವಾಬ್ದಾರಿ.
- **ಅನಿಮೇಟರ್/ಮಲ್ಟಿಮೀಡಿಯಾ ಸ್ಪೆಷಲಿಸ್ಟ್:** ಜಾಹೀರಾತು, ಟಿವಿ, ಸಿನಿಮಾ, ಧಾರಾವಾಹಿ, ಡಿಜಿಟಲ್ ಮೀಡಿಯಾಗಳಲ್ಲಿ ಹೇರಳ ಅವಕಾಶ.



ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕಲಿಕೆಗೆ ಆನ್‌ಲೈನ್ ಕೋರ್ಸ್

ಗುರುರಾಜ್ ಎಸ್. ದಾವಣಗೆರೆ

ಈಗ ಎಲ್ಲೆಲ್ಲೂ ಕೃತಕ ಬುದ್ಧಿಮತ್ತೆ ಅಥವಾ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ನದ್ದೇ ಹವಾ. ನಾವೇ ತಯಾರಿಸಿದ ಸಾಫ್ಟ್‌ವೇರ್ ಅನ್ನೇ ಬಳಸಿಕೊಂಡು, ಬರೆದ ಅಲ್ಗಾರಿದಂ (ಕ್ರಮಾವಳಿ) ಗಳಿಂದ ಒಂದಿಂಚೂ ಆಚೀಚೆ ಸರಿಯದೆ ಕರಾರುವಾಕ್ಕಾಗಿ ಯೋಚಿಸಿ ಕೆಲಸ ಮಾಡುವ ಕಂಪ್ಯೂಟರ್ ಪ್ರೋಗ್ರಾಮಿಂಗ್ ಆಧಾರಿತ ಯಂತ್ರಗಳ ಚಮತ್ಕಾರವನ್ನು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಎನ್ನುತ್ತೇವೆ.

ನಾವೀಗ ಬಳಸುತ್ತಿರುವ ಶೇ 77 ಉಪಕರಣಗಳು 'ಎ.ಐನ ಮೂಲವಾದ ಮಷೀನ್ ಲರ್ನಿಂಗ್ ಆಧರಿಸಿ ಕೆಲಸ ಮಾಡುತ್ತಿವೆ. ಇವುಗಳಿಗಾಗಿ ಬಿಲಿಯನ್ ಡಾಲರ್ ಮಾರ್ಕೆಟ್ ತಲೆ ಎತ್ತಿದೆ. ಸ್ಕೂಲು, ಕಾಲೇಜು, ಉದ್ಯಮ, ಸಂಶೋಧನಾ ಕೇಂದ್ರ, ಮಿಲಿಟರಿ, ಆಸ್ಪತ್ರೆ, ಬಾಹ್ಯಾಕಾಶ, ಮನೆ, ಮಾರ್ಕೆಟಿಂಗ್, ಉನ್ನತ ತಂತ್ರಜ್ಞಾನ ಬಳಕೆಯ ಉದ್ಯಮಗಳಲ್ಲೆಲ್ಲಾ ಎ.ಐ ಕಾಲಿಟ್ಟಿದ್ದು ಓದಿಗೆ ಮತ್ತು ಕೆಲಸಕ್ಕೆ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಇದನ್ನು ಕಲಿಯಲು ಆನ್‌ಲೈನ್‌ನಲ್ಲಿಯೇ ಸಾಕಷ್ಟು ಅವಕಾಶಗಳಿವೆ. ಬಾಂಬೆ ಐಐಟಿ (ಬಾಂಬೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಇದೇ ತಿಂಗಳು 29 ರಿಂದ ಆನ್‌ಲೈನ್ ಸರ್ಟಿಫಿಕೇಶನ್ ಕೋರ್ಸ್ ಪ್ರಾರಂಭಿಸುತ್ತಿದೆ.

- **ಕೋರ್ಸ್‌ನ ಅವಧಿ:** 6 ತಿಂಗಳು
- **ವಿದ್ಯಾರ್ಹತೆ:** ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ಓದಿರುವ ಯಾವುದಾದರೂ ಪದವಿ ಅಥವಾ ಡಿಪ್ಲೊಮಾ ಪಾಸಾಗಿರಬೇಕು.

ಅನುಭವ: ಕಂಪ್ಯೂಟರ್ ಪ್ರೋಗ್ರಾಮಿಂಗ್ ಲ್ಯಾಂಗ್ವೇಜ್‌ಗಳಾದ ಸಿ + + ಮತ್ತು ಜಾವಾಗಳನ್ನೂ ಬಳಸಿ ಒಂದು ವರ್ಷ ಕೆಲಸ ಮಾಡಿರಬೇಕು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್, 2021

ತರಗತಿ ಸಮಯ: ಪ್ರತಿ ಶನಿವಾರ ಮಧ್ಯಾಹ್ನ 3.30 - 6.30 ರ ವರೆಗೆ

ಶುಲ್ಕ: ₹1.25 ಲಕ್ಷ + ಜಿಎಸ್‌ಟಿ (₹62,500 ಎರಡು ಕಂತುಗಳಲ್ಲಿ ಶುಲ್ಕ ಭರಿಸಬಹುದು.)

ಈ ಕೋರ್ಸ್‌ನಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮಶೀನ್ ಲರ್ನಿಂಗ್ ಮತ್ತು ಪೈಥಾನ್‌ಗಳನ್ನು ಒಟ್ಟಿಗೆ ಕಲಿಸುವುದರಿಂದ ಜಾವಾ, ಸಿ + +, ಸ್ಕೇಲಾ, ಪರ್ಲ್, ಹೈವ್, ಹಡೂಪ್, ಮ್ಯಾಪ್ ರೆಡ್ಯೂಸ್, ಪಿಗ್, ಸ್ಪಾರ್ಕ್ ಪ್ರೋಗ್ರಾಮಿಂಗ್ ಲಾಂಗ್ವೇಜ್, ಎಸ್‌ಕ್ಯುಎಲ್‌ಗಳ ಜೊತೆಗೆ, ಲೀನಿಯರ್ ಆಲ್‌ಜಿಬ್ರಾ, ಸ್ಟ್ಯಾಟಿಸ್ಟಿಕ್ಸ್ ಮತ್ತು ಕ್ಯಾಲ್ಕುಲಸ್ ಗೊತ್ತಿದ್ದರೆ ಪಾಠಗಳು ಬೇಗನೇ ಅರ್ಥವಾಗುತ್ತವೆ.

ಕೋರ್ಸ್ ಕಾರ್ನರ್

'ಕೋರ್ಸ್ ಕಾರ್ನರ್' – ಇದು ಶಿಕ್ಷಣ ಕ್ಷೇತ್ರದಲ್ಲಿರುವ ಹೊಸ ಕೋರ್ಸ್‌ಗಳನ್ನು ಪರಿಚಯಿಸುವ ಹಾಗೂ ಸದ್ಯ ಚಾಲ್ತಿಯಲ್ಲಿರುವ ಕೋರ್ಸ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಅಂಕಣ. ಆನ್‌ಲೈನ್, ಆಫ್‌ಲೈನ್, ದೇಶ, ವಿದೇಶಗಳಲ್ಲಿನ ಕೋರ್ಸ್‌ಗಳ ಕುರಿತು ಮಾಹಿತಿ ನೀಡಲಾಗುತ್ತದೆ.

ಯಾರು ಕಲಿಯಬಹುದು

ಹೈಯರ್ ಮ್ಯಾಥಮ್ಯಾಟಿಕ್ಸ್, ಅಪ್ಲೈಡ್ ಫಿಸಿಕ್ಸ್, ಬಯೋಸಿಯನ್ ನೆಟ್‌ವರ್ಕಿಂಗ್, ಕಾಗ್ನಿಟಿವ್ ಸೈನ್ಸ್ ಥಿಯರಿ, ಕಂಪ್ಯೂಟರ್ ಸೈನ್ಸ್, ರೊಬೊಟಿಕ್ಸ್, ಸೈಕಾಲಜಿ, ಫಿಸಿಯಾಲಜಿ ಆಫ್ ನರ್ವಸ್ ಸಿಸ್ಟಮ್ ಓದಿದವರು, ಡಿಪ್ಲೊಮಾ ಮಾಡಿ ವಿಎಲ್‌ಎಸ್‌ಐ ಪರಿಣತಿ ಹೊಂದಿವರು, ಮೆಕಟ್ರಾನಿಕ್ಸ್ ವಿದ್ಯಾರ್ಥಿಗಳು ಈ ಕೋರ್ಸ್ ಕಲಿಯಬಹುದು.


ಕಲಿಸುವ ಶಿಕ್ಷಕರು

ಬಾಂಬೆ ಐಐಟಿಯ ಪ್ರಾಧ್ಯಾಪಕರು, ಐಎ ಉದ್ಯಮ ನಡೆಸುವ ಪರಿಣತರು ಆನ್‌ಲೈನ್‌ನ ಒಟ್ಟು 15 ಮಾಡ್ಯೂಲ್‌ಗಳಲ್ಲಿ ಇಡೀ ಕೋರ್ಸ್ ಅನ್ನು ಹೇಳಿಕೊಡುತ್ತಾರೆ. ಕೋರ್ಸ್ ಮುಗಿಸಿದವರಿಗೆ ದೊಡ್ಡ ಸಂಬಳದ ಕೆಲಸ ದೊರೆಯುವ ಸಾಧ್ಯತೆ ಇರುವುದರಿಂದ, ಇದರ ಕಲಿಕೆಗೆ ಬೇಡಿಕೆ ಹೆಚ್ಚಾಗಿದೆ.

ಹೆಚ್ಚಿನ ಮಾಹಿತಿಗಾಗಿ: https://bit.ly/3EQPEuq

ಬಿಎಸ್‌ಸಿ ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

- **ನಾನು ಬಿಎಸ್‌ಸಿ 3ನೇ ವರ್ಷದಲ್ಲಿ ಓದುತ್ತಿದ್ದೇನೆ. ಪದವಿ ಮುಗಿದ ನಂತರ ಏನು ಮಾಡಬೇಕು?**

ಕಮ್ಮಾರ ಕಾಲೇಶ್ರೀ, ಹೊಸಪೇಟೆ.

- ನಿಮ್ಮ ವೃತ್ತಿಯೋಜನೆಯಂತೆ ಬಿಎಸ್‌ಸಿ ನಂತರ ಎಂಎಸ್‌ಸಿ, ಎಂಬಿಎ, ಎಂಸಿಎ, ಡೇಟಾ ಸೈನ್ಸ್, ಮಷೀನ್ ಲರ್ನಿಂಗ್, ಸಿಎ, ಎಸಿಎಸ್ ಇತ್ಯಾದಿ ಕೋರ್ಸ್‌ಗಳನ್ನು ಮಾಡಬಹುದು.
- ಸಂಶೋಧನೆ ಅಥವಾ ಅಧ್ಯಾಪನ ವೃತ್ತಿಯಲ್ಲಿ ಆಸಕ್ತಿಯಿದ್ದರೆ ಸ್ನಾತಕೋತ್ತರ ಪದವಿ ಮಾಡಿ ನಂತರ ಡಾಕ್ಟರೇಟ್ ಮಾಡಬಹುದು.
- ಪದವಿಯ ನಂತರ ವೃತ್ತಿಜೀವನವನ್ನು ಪ್ರಾರಂಭಿಸುವ ಇಚ್ಛೆಯಿದ್ದರೆ ಯುಪಿಎಸ್‌ಸಿ, ಕೆಪಿಎಸ್‌ಸಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಕೆಲಸಗಳಿಗೆ ಪ್ರಯತ್ನಿಸಬಹುದು.
- ಕ್ಷಿಪ್ರವಾಗಿ ಅಭಿವೃದ್ಧಿಯಾಗುತ್ತಿರುವ ಖಾಸಗಿ ಕ್ಷೇತ್ರದಲ್ಲಿ ಪದವೀಧರರಿಗೆ ಈಗ ಸಾಕಷ್ಟು ಬೇಡಿಕೆ ಇದೆ. ಆದ್ದರಿಂದ, ಈ ಕ್ಷೇತ್ರದ ಕೆಲಸಗಳಿಗೆ ಸೇರಿ, ದೂರ ಶಿಕ್ಷಣ ಅಥವಾ ಸಂಜೆ ಕಾಲೇಜುಗಳ ಮೂಲಕ ವೃತ್ತಿ ಸಂಬಂಧಿತ ಅಲ್ಪಾವಧಿ ಕೋರ್ಸ್ ಅಥವಾ ಉನ್ನತ ಶಿಕ್ಷಣವನ್ನು ಮುಂದುವರಿಸಿಕೊಂಡು ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು.

ಪ್ರಮುಖವಾಗಿ, ನಿಮ್ಮ ಆಸಕ್ತಿ, ಅಭಿರುಚಿಯಂತೆ ವೃತ್ತಿಯೋಜನೆಯನ್ನು ತಯಾರಿಸಿ, ಅದರಂತೆ ನಿರ್ಧರಿಸಿ.

- **ನಾನು ಬಿಎಸ್‌ಸಿ, ಬಿಇಡ್ (ಪಿಎಂಸಿಎಸ್) ಮುಗಿಸಿದ್ದೀನಿ. ಮೂರು ಬಾರಿ ಟಿಇಟಿ ಪರೀಕ್ಷೆಗೆ ಅರ್ಹತೆ ಗಳಿಸಿದ್ದು ಸಿಟಿಇಟಿಗಾಗಿ ಕಾಯುತ್ತಿದ್ದೇನೆ. ಆದರೆ ಕೆಲವು ಸರ್ಕಾರಿ ನಿಯಮಗಳ ಪ್ರಕಾರ ಪಿಎಂಸಿಎಸ್ ತೆಗೆದುಕೊಂಡವರಿಗೆ ಸಿಟಿಇಟಿ ಬರೆಯಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ನನಗೆ ಶಿಕ್ಷಕ ವೃತ್ತಿ ಆಯ್ಕೆ ಮಾಡಬೇಕೆಂಬ ಹಂಬಲವಿದೆ. ನನ್ನ ಕನಸು ಈಡೇರಲು ಏನು ಮಾಡಬೇಕು?**

ಅಂಜಲಿ ಮಹಾಂತೇಶ್, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ಸಿಟಿಇಟಿ ಪರೀಕ್ಷೆ ಬರೆಯಲು ಯಾವುದಾದರೂ ಪದವಿಯ ಜೊತೆಗೆ ಬಿಎಡ್ ಆಗಿರಬೇಕು. ಹಾಗಾಗಿ, ನಿಮಗೆ ಸಿಟಿಇಟಿ ಪರೀಕ್ಷೆ ಬರೆಯುವ ಅರ್ಹತೆ ಇದೆ ಎನ್ನುವುದು ನನ್ನ ಅಭಿಪ್ರಾಯ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://ctet.nic.in/WebInfo/Page/Page?PageId = 1&LangId = P

- **ನಾನು ಬಿಕಾಂ ಮುಗಿಸಿ ಎಂಬಿಎ ಮೊದಲ ವರ್ಷಕ್ಕೆ ನಿಲ್ಲಿಸಿ 1 ವರ್ಷ ಆಗಿದೆ. ಈಗ ಅದೇ ಕೋರ್ಸ್ ಅನ್ನು ಮುಂದುವರಿಸಲು ಸಾಧ್ಯವೇ?**

ಧನರಾಜ್ ಎಚ್. ಆರ್., ಊರು ತಿಳಿಸಿಲ್ಲ.

ಸಾಮಾನ್ಯವಾಗಿ 1 ವರ್ಷದ ಅಂತರಕ್ಕೆ ಸಕಾರಣಗಳಿದ್ದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಬಹುದು. ಹಾಗಾಗಿ, ನಿಮ್ಮ ವಿಶ್ವವಿದ್ಯಾಲಯವನ್ನು ಸಂಪರ್ಕಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.



ಮಕ್ಕಳ ಕಲಿಕಾ ಆಸಕ್ತಿ ಹೆಚ್ಚಿಸಲು ಸರಳ ಸೂತ್ರಗಳು

ವೆಂಕಟ ಸುಬ್ಬರಾವ್ ವಿ.

ಭಾಗ 2

ಕಳೆದ ವಾರ, ಮಕ್ಕಳಲ್ಲಿ ಕಲಿಕಾ ಆಸಕ್ತಿಯನ್ನು ಹೆಚ್ಚಿಸಲು ಪೋಷಕರು ಮನೆಯಲ್ಲಿ ಯಾವ ರೀತಿ ಪೂರಕ ಕಲಿಕಾ ವಾತಾವರಣವನ್ನು ನಿರ್ಮಿಸಬೇಕು, ಮಕ್ಕಳೊಂದಿಗೆ ಹೇಗೆ ಬೆರೆಯಬೇಕು ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಲಾಗಿತ್ತು. ಈ ಲೇಖನದಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯ ಗುರುತಿಸುವಿಕೆ, ಸಮಯದ ಉಳಿತಾಯ, ಶಿಸ್ತಿನ ಕಲಿಕೆ ಸೇರಿದಂತೆ ಮತ್ತಷ್ಟು ವಿಷಯಗಳನ್ನು ವಿವರಿಸಲಾಗಿದೆ.

5. ನಿಮ್ಮ ಮಕ್ಕಳನ್ನು ಯಾರೊಂದಿಗೂ ಹೋಲಿಸಬೇಡಿ.

ಹೀಗೆ ಹೇಳುವಾಗ, ಒಂದು ಝೆನ್ ಕಥೆ ನೆನಪಾಗುತ್ತದೆ. ಒಮ್ಮೆ ವೀರ ಯೋಧರೊಬ್ಬರು ಝೆನ್ ಗುರುಗಳ ಬಳಿ ಒಂದು ಪ್ರಶ್ನೆ ಕೇಳುತ್ತಾರೆ. 'ಗುರುಗಳೇ, ನಾನು ಯೋಧ. ದೇಶ ರಕ್ಷಣೆಗಾಗಿ ಹಗಲಿರುಳೂ ಶ್ರಮಿಸುತ್ತೇನೆ. ನೀವು ಸುಮ್ಮನೆ ಇಲ್ಲಿ ಕುಳಿತಿರುತ್ತೀರಿ ಆದರೂ ನಾವೆಲ್ಲಾ ನಿಮಗೆ ಗೌರವ ಕೊಡುತ್ತೇವೆ. ನಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು?'

ಪ್ರಶ್ನೆ ಕೇಳಿಸಿಕೊಂಡ ಝೆನ್ ಗುರುಗಳು ನಗುತ್ತಾ, ಆ ಯೋಧರನ್ನು ಹೊರಗೆ ಕರೆದುಕೊಂಡು ಹೋಗಿ, 'ಎರಡು ಮರಗಳನ್ನು ತೋರಿಸಿ, ಇವುಗಳಲ್ಲಿ ಯಾವುದು ಶ್ರೇಷ್ಠ?' ಎನ್ನುತ್ತಾರೆ. ಮರಗಳನ್ನು ಗಮನಿಸಿದ ಯೋಧರು, ವಿಚಲಿತಗೊಂಡು, 'ಅಲ್ಲಿ ಒಂದು ತೆಂಗಿನಮರ ಮತ್ತೊಂದು ಮಾವಿನ ಮರವಿದೆ. ಎರಡೂ ಮರಗಳಿಗೂ ಅವುಗಳದ್ದೇ ಆದ ವಿಶಿಷ್ಟ ಗುಣಗಳಿವೆ. ಮರಗಳನ್ನು ಹೇಗೆ ಹೋಲಿಸಲು ಸಾಧ್ಯ?' ಎಂದು ಉತ್ತರಿಸುತ್ತಾರೆ. ಅದಕ್ಕೆ ಗುರುಗಳು ನಕ್ಕು, 'ಈಗ ನಿಮ್ಮ ಪ್ರಶ್ನೆಗೆ ಉತ್ತರ ಸಿಕ್ಕಿತೇ?' ಎನ್ನುತ್ತಾರೆ.

ಎಷ್ಟು ಚೆಂದದ ಕಥೆ ಅಲ್ಲವಾ? ಮಕ್ಕಳ ವಿಷಯದಲ್ಲೂ ಅಷ್ಟೇ. ಪ್ರತಿ ಮಗುವಿಗೂ ಅದರದ್ದೇ ಆದ ಆಸಕ್ತಿ, ಶಕ್ತಿ, ನೈಪುಣ್ಯ ಇರುತ್ತದೆ. ಆದ್ದರಿಂದ ಎಂದಿಗೂ ಮಕ್ಕಳನ್ನು ಹೋಲಿಸಬಾರದು. ಹೀಗೆ ಹೋಲಿಸಿದರೆ, ಅವರ ಆತ್ಮವಿಶ್ವಾಸ ಕಡಿಮೆಯಾಗಬಹುದು. ಅದರ ಬದಲು ಅವರಲ್ಲಿರುವ ಒಳ್ಳೆಯ ಗುಣಗಳನ್ನು ಗುರುತಿಸಿ, ಅವರಿಗೆ ತಿಳಿಸಿ. ಆಗ ಮಕ್ಕಳಲ್ಲಿ ಆತ್ಮವಿಶ್ವಾಸವೂ ಹೆಚ್ಚುತ್ತದೆ.

6. ಕಲಿಕಾ ಸಾಮಗ್ರಿಗಳನ್ನು ಒಪ್ಪವಾಗಿಟ್ಟುಕೊಳ್ಳಲು ಮಕ್ಕಳಿಗೆ ಸಹಕರಿಸಿ.

ಸಾಮಾನ್ಯವಾಗಿ ಮಕ್ಕಳು ಶಾಲೆಯಿಂದ ಬಂದ ತಕ್ಷಣ, ಬ್ಯಾಗ್, ಪುಸ್ತಕ, ಪೆನ್ನು, ಪೆನ್ಸಿಲ್ ಮತ್ತಿತರ ವಸ್ತುಗಳನ್ನು ಎಲ್ಲೆಂದರಲ್ಲಿ ಇಡುತ್ತಾರೆ. ಓದುವ ಸಮಯದಲ್ಲಿ ಅವುಗಳನ್ನು ಹುಡುಕುತ್ತಾರೆ. ಈ ಹುಡುಕಾಡುವಿಕೆಯಲ್ಲಿ ಅವರ ಕಲಿಕಾ ಅವಧಿಯೂ ಕಡಿಮೆಯಾಗುತ್ತದೆ. ಇದೇ ವೇಳೆ ಪೋಷಕರು ಮಕ್ಕಳನ್ನು ಬೈಯುತ್ತಾರೆ, ಅಸಮಾಧಾನವನ್ನೂ ಹೊರಹಾಕಬಹುದು. ಇದರಿಂದ ಮಕ್ಕಳು ಬೇಸರಪಟ್ಟುಕೊಳ್ಳುತ್ತಾರೆ. ಇದೂ ಕೂಡ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುವ ಸಂಭವವೇ ಹೆಚ್ಚು. ಆದ್ದರಿಂದ ಪೋಷಕರು, ಕಲಿಕಾ ಸಾಮಗ್ರಿಗಳನ್ನು ಒಪ್ಪವಾಗಿಟ್ಟುಕೊಳ್ಳುವಂತೆ ಪದೇ ಪದೇ ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿರಬೇಕು. ಯಾವುದೇ ವಸ್ತುವನ್ನು ತೆಗೆದುಕೊಂಡು ಬಳಸಿದ ಮೇಲೆ, ಆ ವಸ್ತುವನ್ನು ಅದೇ ಜಾಗದಲ್ಲಿ ಇಡುವಂತೆ ಮಕ್ಕಳನ್ನು ಎಚ್ಚರಿಸುತ್ತಿರಬೇಕು.

ಪ್ರತಿದಿನ, ಒಂದು ನಿರ್ದಿಷ್ಟ ಸಮಯವನ್ನು ನಿಗದಿಪಡಿಸಿ (ಸುಮಾರು 10 ನಿಮಿಷಗಳು). ಆ ಸಮಯವನ್ನು, ಕಲಿಕಾ ಸಾಮಗ್ರಿಗಳನ್ನು ಸರಿಯಾಗಿ ಜೋಡಿಸಿಕೊಳ್ಳುವುದಕ್ಕೇ ಮೀಸಲಿಡಿ. ನೀವೂ ಮಕ್ಕಳಿಗೆ ಸಹಕರಿಸಿ. ಅವರ ಮೇಲೆ ಒತ್ತಡ ಹಾಕುವುದು ಬೇಡ. ಸಹನೆಯಿರಲಿ. ಕೆಲವು ದಿನಗಳ ನಂತರ ಮಕ್ಕಳಿಗೆ ಇದು ಅಭ್ಯಾಸವಾಗುತ್ತದೆ ಹಾಗೂ ಅವರು ತಮ್ಮಷ್ಟಕ್ಕೆ ತಾವೇ ಈ ಕೆಲಸವನ್ನು ಮಾಡುತ್ತಾರೆ.

7. ಶಾಲೆಯ ಘಟನೆಗಳ ಬಗ್ಗೆ ನಿಮ್ಮೊಂದಿಗೆ ಮುಕ್ತವಾಗಿ ಮಾತನಾಡುವ ಅವಕಾಶ ಕಲ್ಪಿಸಿಕೊಡಿ

ಮಕ್ಕಳು ಶಾಲೆಯ ವಿಷಯವನ್ನು ಮಾತನಾಡುವಾಗ, ಅವರಿಗೆ ಅವಕಾಶ ನೀಡಿ. ಮಕ್ಕಳು ಹೇಳುವ ವಿಷಯದಲ್ಲಿ ತಪ್ಪಿದ್ದರೆ, ಅದನ್ನು ತಿದ್ದಿ, ತಿಳಿಸಿ. ಪಾಠಗಳ ವಿಷಯಕ್ಕಿಂತಲೂ ಹೆಚ್ಚಾಗಿ ಜೀವನ ಹಾಗೂ ಬೇರೆ-ಬೇರೆ ರೀತಿಯ ಸನ್ನಿವೇಶಗಳನ್ನು ಸಮರ್ಥವಾಗಿ ಎದುರಿಸುವ ಬಗ್ಗೆ ನಿಮ್ಮ ಅನುಭವವನ್ನು ಹಂಚಿಕೊಳ್ಳಿ. ನಿಮ್ಮ ಬಳಿ ವಿಷಯಗಳನ್ನು ಹಂಚಿಕೊಳ್ಳಬಹುದು ಎನ್ನುವ ಆತ್ಮವಿಶ್ವಾಸವನ್ನು ಅವರಲ್ಲಿ ಮೂಡಿಸಿ, ಪ್ರೋತ್ಸಾಹಿಸಿ. ನಿಮ್ಮ ಪ್ರೋತ್ಸಾಹ ಅವರಿಗೆ ಉಪದೇಶ ದಂತೆ ಕಾಣುವುದು ಬೇಡ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ ಆದರೆ ಬೇರೆಯವರ ಬಗ್ಗೆ ಹೋಲಿಕೆ ಬೇಡ.

(...ಮುಂದುವರಿಯುತ್ತದೆ)

ವಿದ್ಯಾರ್ಥಿ ವೇತನ ಕೈಪಿಡಿ

ರೋಲ್ಸ್ ರಾಯ್ಸ್ ಉನ್ನತಿ ಕೋವಿಡ್ ಸ್ಕಾಲರ್‌ಶಿಪ್ ಫಾರ್ ವುಮೆನ್ ಇನ್ ಸ್ಟೆಮ್ 2021

- **ವಿವರ:** ರೋಲ್ಸ್ ರಾಯ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸ್ಟೆಮ್‌ನಲ್ಲಿ ಪದವಿ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕೋವಿಡ್ ಸಂದರ್ಭದಲ್ಲಿ ಕುಟುಂಬದ ಆರ್ಥಿಕತೆಗೆ ಬೆನ್ನೆಲುಬಾಗಿದ್ದವರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳ ಓದಿಗೆ ಪ್ರೋತ್ಸಾಹಿಸುವ ಸಲುವಾಗಿ ಈ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
- **ಅರ್ಹತೆ:** ಪ್ರಸ್ತುತ ಸ್ಟೆಮ್ ವಿಭಾಗದಲ್ಲಿ (ಸಾಮಾನ್ಯ ಮತ್ತು ವೃತ್ತಿಪರ) ಕೋರ್ಸ್ ಮಾಡುತ್ತಿರುವ ಕೋವಿಡ್ 19 ಕಾರಣದಿಂದ ಕುಟುಂಬ ಸದಸ್ಯರನ್ನು ಕಳೆದುಕೊಂಡ ಭಾರತೀಯ ಹುಡುಗಿಯರಿಗೆ ಈ ವಿದ್ಯಾರ್ಥಿವೇತನ ಮುಕ್ತವಾಗಿದೆ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.
- **ಆರ್ಥಿಕ ನೆರವು:** ₹ 25, 000
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಡಿಸೆಂಬರ್ 31, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/RRUS1

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ

-ಕುವೆಂಪು

ರಾಜ್ಯಗಳ ಹಣಕಾಸು ಸ್ಥಿತಿ ಒಂದು ನಿರಾಶಾದಾಯಕ ಚಿತ್ರಣ

ರಾಜ್ಯಗಳ ಹಣಕಾಸು ಸ್ಥಿತಿ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಬಿಡುಗಡೆ ಮಾಡಿರುವ ವರದಿಯು ನಿರಾಶಾದಾಯಕ ಚಿತ್ರಣವೊಂದನ್ನು ನೀಡಿದೆ. ರಾಜ್ಯಗಳು ಮುಂದಿನ ದಿನಗಳಲ್ಲಿ ಎದುರಿಸಬಹುದಾದ ಸವಾಲುಗಳ ಬಗ್ಗೆ ಒಂದಿಷ್ಟು ವಿವರಗಳನ್ನು ಕೂಡ ಈ ವರದಿಯು ನೀಡುತ್ತದೆ. ರಾಜ್ಯಗಳ ವರಮಾನ ಕಡಿಮೆ ಆಗುತ್ತಿದೆ, ಅವುಗಳ ವೆಚ್ಚಗಳ ಮೊತ್ತ ಹೆಚ್ಚಾಗುತ್ತಿದೆ, ರಾಜ್ಯಗಳು ಸಾಲದ ಸುಳಿಗೆ ಸಿಲುಕುತ್ತಿವೆ ಎಂದು ವರದಿ ಹೇಳಿದೆ. ಇವುಗಳಿಂದಾಗಿ ರಾಜ್ಯಗಳ ಹಣಕಾಸಿನ ಸ್ಥಿತಿ ಬಿಗಡಾಯಿಸುತ್ತಿದೆ. 2020–21ನೇ ಹಣಕಾಸು ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ರಾಜ್ಯಗಳ ಆರ್ಥಿಕ ಪರಿಸ್ಥಿತಿಯು ತೀರಾ ವಿಷಮಗೊಂಡಿತ್ತು. ಆಗ ಅವುಗಳ ತೆರಿಗೆ ವರಮಾನ ತಗ್ಗಿತ್ತು. ಗಾಯದ ಮೇಲೆ ಬರೆ ಎಂಬಂತೆ ರಾಜ್ಯಗಳ ವೆಚ್ಚವು ಹೆಚ್ಚಳ ಆಗಿತ್ತು. ಆಗ ವಿತ್ತೀಯ ಕೊರತೆಯು ದೊಡ್ಡ ಪ್ರಮಾಣದಲ್ಲಿ ಹೆಚ್ಚಳ ಆಗಿತ್ತು. ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟವು ರಾಜ್ಯಗಳ ಮಟ್ಟದಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ನಡೆದ ಕಾರಣ, ಅವುಗಳ ಹಣಕಾಸಿನ ಸ್ಥಿತಿಯು ದುರ್ಬಲಗೊಂಡಿತ್ತು. ಕೋವಿಡ್ ನಿರ್ವಹಣೆ ಜೊತೆಯಲ್ಲೇ ಕೆಲವು ರಾಜ್ಯಗಳು ಕಾರ್ಮಿಕರ ಮರುವಲಸೆಯ ಸಮಸ್ಯೆಯನ್ನೂ ನಿಭಾಯಿಸಬೇಕಾಗಿ ಬಂತು. ರಾಜ್ಯಗಳ ಮಟ್ಟಿಗೆ ಕೋವಿಡ್ ಸಾಂಕ್ರಾಮಿಕದ ವಿರುದ್ಧದ ಹೋರಾಟವು ಈಗಲೂ ಮುಗಿದಿಲ್ಲ ಎಂಬುದು ನಿಜ. ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಬೇಕು ಎಂದಾದರೆ ರಾಜ್ಯಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಇನ್ನಷ್ಟು ಹಣ ಹೂಡಿಕೆ ಮಾಡಬೇಕಿದೆ, ಜನಸಾಮಾನ್ಯರಿಗೆ ಸಾಮಾಜಿಕ ಭದ್ರತಾ ವ್ಯವಸ್ಥೆಗಳನ್ನು ಕಲ್ಪಿಸಬೇಕಿದೆ. ದೇಶದ ಒಕ್ಕೂಟ ವ್ಯವಸ್ಥೆಯ ಮೇಲೆ ಈ ಸಾಂಕ್ರಾಮಿಕವು ಬಹುಕಾಲ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ಕೂಡ ವರದಿಯು ಉಲ್ಲೇಖಿಸಿದೆ.



ರಾಜ್ಯಗಳ ವರಮಾನ ಕಡಿಮೆ ಆಗುತ್ತಿದೆ, ವೆಚ್ಚಗಳ ಮೊತ್ತ ಹೆಚ್ಚಾಗುತ್ತಿದೆ, ರಾಜ್ಯಗಳು ಸಾಲದ ಸುಳಿಗೆ ಸಿಲುಕುತ್ತಿವೆ ಎಂದು ಆರ್‌ಬಿಐ ಹೇಳಿರುವ ಮಾತು ಎಚ್ಚರಿಕೆಯ ಗಂಟೆಯೂ ಹೌದು

ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಇನ್ನಷ್ಟು ಸಶಕ್ತಗೊಳಿಸುವ ಅಗತ್ಯದ ಬಗ್ಗೆಯೂ ಆರ್‌ಬಿಐ ವರದಿ ಒತ್ತಿ ಹೇಳಿದೆ. ಸ್ಥಳೀಯ ಸಂಸ್ಥೆಗಳ ಕುರಿತು ಆರ್‌ಬಿಐ ಸಮೀಕ್ಷೆಯೊಂದನ್ನು ನಡೆಸಿದ್ದು, ಸಾಂಕ್ರಾಮಿಕದ ಸಂದರ್ಭದಲ್ಲಿ ಅವುಗಳ ಹಣಕಾಸು ಸ್ಥಿತಿ ಹದಗೆಟ್ಟರೆ, ಅವು ಸ್ಥಳೀಯರಿಗೆ ಒದಗಿಸಬಹುದಾದ ಸೇವೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ ಎಂಬ ಅಂಶವನ್ನು ಸಮೀಕ್ಷೆಯು ಕಂಡುಕೊಂಡಿದೆ. ಸಾಂಕ್ರಾಮಿಕದ ಸಂದರ್ಭದಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳು ತಾವು ಹಿಂದೆ ಮಾಡಿರದಿದ್ದ ಹಲವು ಕೆಲಸಗಳನ್ನು ಮಾಡಬೇಕಾದ ಸನ್ನಿವೇಶ ಎದುರಾಗಿತ್ತು. ಅವು, ಕೋವಿಡ್ ಹರಡುವುದನ್ನು ತಡೆಯಲು ಜನರನ್ನು ಸಾಂಸ್ಥಿಕ ಪ್ರತ್ಯೇಕವಾಸಕ್ಕೆ ಒಳಪಡಿಸಬೇಕಿತ್ತು. ಕೋವಿಡ್ ಪರೀಕ್ಷೆಗಳನ್ನು ನಡೆಸಬೇಕಿತ್ತು ಕೂಡ. ಇಂತಹ ಕೆಲಸಗಳ ಮೂಲಕ ಸ್ಥಳೀಯ ಸಂಸ್ಥೆಗಳು ಪಡೆದ ಅನುಭವವು, ಅವುಗಳಿಗೆ ಮುಂದೊಂದು ದಿನ ನೆರವಿಗೆ ಬರಬಹುದು. ಆದರೆ, ಸ್ಥಳೀಯ ಸಂಸ್ಥೆಗಳ ಪೈಕಿ ಶೇಕಡ 98ರಷ್ಟು ಸಂಸ್ಥೆಗಳ ವೆಚ್ಚವು ಹೆಚ್ಚಾಯಿತು, ವರಮಾನ ತಗ್ಗಿತು. ಅವು ಬೇರೆ ಕಡೆಯಿಂದ ಹಣವನ್ನು ಸಾಲವಾಗಿ ಪಡೆಯಬೇಕಾಯಿತು. ತಮ್ಮ ಮೀಸಲು ನಿಧಿಯನ್ನು ಕೂಡ ಬಳಸಿಕೊಳ್ಳಬೇಕಾಯಿತು. ಈ ಬಗೆಯ ಹಣಕಾಸಿನ ಸಮಸ್ಯೆಗಳು ಅವುಗಳಿಗೆ ಮೂಲಸೌಕರ್ಯ ನಿರ್ಮಾಣದಲ್ಲಿ, ಸೌಲಭ್ಯಗಳನ್ನು ಉತ್ತಮಪಡಿಸುವಲ್ಲಿ ಅಡ್ಡಿಯಾಗಿ ನಿಲ್ಲುತ್ತವೆ.

ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ವಾಯತ್ತೆಯನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಆರ್‌ಬಿಐ ಸಲಹೆ ನೀಡಿದೆ. ಈ ಸಂಸ್ಥೆಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕಿದೆ ಎಂದು ಕೂಡ ಆರ್‌ಬಿಐ ಹೇಳಿದೆ. ಆಸ್ತಿ ತೆರಿಗೆಯು ಸ್ಥಳೀಯ ಸಂಸ್ಥೆಗಳ ಪಾಲಿನ ಪ್ರಮುಖ ವರಮಾನ ಮೂಲ. ಆದರೆ ಅವುಗಳಿಗೆ ತೆರಿಗೆಗಳ ಮೂಲಕ ವರಮಾನ ಹೆಚ್ಚಿಸಿಕೊಳ್ಳಲು ಅವಕಾಶ ಇದೆ. ಕೆಲವು ಸ್ಥಳೀಯ ಸಂಸ್ಥೆಗಳು ವರಮಾನ ಸಂಗ್ರಹಿಸಲು ಬಾಂಡ್‌ಗಳನ್ನು ಹೊರಡಿಸಿದ್ದು ಕೂಡ ವರದಿಯಲ್ಲಿ ದಾಖಲಾಗಿದೆ. ಆಗಬೇಕಿರುವ ಹಣಕಾಸಿನ ಸುಧಾರಣೆಗಳು ಏನು ಎಂಬುದನ್ನು ಆರ್‌ಬಿಐ ವರದಿ ಹೇಳಿದೆ. ಅಲ್ಲದೆ, ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಇನ್ನಷ್ಟು ಪಾರದರ್ಶಕ ಆಗಿಸಬೇಕಿದೆ ಎಂದು ಕೂಡ ವರದಿ ಹೇಳಿದೆ. ಸ್ಥಳೀಯ ಸಂಸ್ಥೆಗಳಿಗೆ ಅಗತ್ಯವಿರುವ ಬೆಂಬಲವನ್ನು ರಾಜ್ಯ ಸರ್ಕಾರಗಳು ಒದಗಿಸಬೇಕು, ಸ್ಥಳೀಯ ಸಂಸ್ಥೆಗಳಿಗೆ ಅವು ಹೆಚ್ಚಿನ ಅಧಿಕಾರ ನೀಡಬೇಕು. ಇವು ಸಾಧ್ಯವಾಗುವುದಕ್ಕೆ ಬೇಕಿರುವ ನೀತಿಗಳನ್ನು ರೂಪಿಸಬೇಕು ಎಂಬ ಮಾತು ಕೂಡ ಆರ್‌ಬಿಐ ವರದಿಯಲ್ಲಿ ಇದೆ. ಆರೋಗ್ಯ ವಲಯದ ಮೇಲಿನ ವೆಚ್ಚವು ಒಟ್ಟು ಜಿಡಿಪಿಯ ಶೇಕಡ 2.5ರಷ್ಟಕ್ಕೆ ಹೆಚ್ಚಾಗಬೇಕು ಎಂಬ ಮಾತನ್ನು ಆರ್‌ಬಿಐ ಒತ್ತಿ ಹೇಳಿದೆ. ಈಗಿನ ಪರಿಸ್ಥಿತಿಯಲ್ಲಿ ಆರೋಗ್ಯ ವಲಯದ ಮೇಲಿನ ವೆಚ್ಚವು ಒಟ್ಟು ಜಿಡಿಪಿಯ ಶೇಕಡ 1.5ರಷ್ಟು ಮಾತ್ರವೇ ಇದೆ.

ದಿನದ ಟ್ವೀಟ್



ತಾರತಮ್ಯದ ನಡೆ...

ಮಾನವ ಹಕ್ಕುಗಳ ಉಲ್ಲಂಘನೆಗಾಗಿ ಅಮೆರಿಕವು ಬಾಂಗ್ಲಾದೇಶ ಮತ್ತು ಶ್ರೀಲಂಕಾ ಮೇಲೆ ದಿಗ್ಬಂಧನ ಹೇರಿದೆ. ಆದರೆ, ಪಾಕಿಸ್ತಾನದ ಮೇಲೆ ಅಂತಹ ಕ್ರಮ ಕೈಗೊಂಡಿಲ್ಲ. ಆಶ್ಚರ್ಯಕರ! ಅಮೆರಿಕಕ್ಕೆ ಬೇರೇನೋ ಉದ್ದೇಶ ಇದೆ ಎಂಬುದನ್ನು ಇಂತಹ ತಾರತಮ್ಯದ ನಡೆಗಳು ತೋರಿಸುತ್ತಿವೆ. ಇಂತಹ ವಿಚಾರಗಳಲ್ಲಿ ನಮ್ಮ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ವಿಧೇಯ ವರ್ತನೆ ತೋರುತ್ತಿರುವುದು ಏಕೆ? ಅಮೆರಿಕದ ಇಂತಹ ಪಕ್ಷಪಾತಿ ಕ್ರಮವನ್ನು ಭಾರತವು ಖಂಡಿಸಬೇಕು.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ, ರಾಜ್ಯಸಭಾ ಸದಸ್ಯ

ಕಿಡಿನುಡಿ

ಪ್ರಧಾನಿಗೆ ಪತ್ರ ಬರೆದರೆ ಅದಕ್ಕೆ ಉತ್ತರವೇ ಬರುವುದಿಲ್ಲ. ಮುಖ್ಯಮಂತ್ರಿಯೊಬ್ಬರ ಪತ್ರಕ್ಕೆ ಪ್ರತಿಕ್ರಿಯೆಯನ್ನೇ ನೀಡದ ಮೊದಲ ಪ್ರಧಾನಿ ನರೇಂದ್ರ ಮೋದಿ ಅವರು ಇರಬೇಕು. ದೇಶವು ಯಾವ ದಿಕ್ಕಿನತ್ತ ಸಾಗುತ್ತಿದೆ ಊಹಿಸಿ...



ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 13-12-1996

• ಜೆಎಂಎಂ ಲಂಚ ಪ್ರಕರಣ ಮೊಯಿಲಿಗೆ ಸಮನ್ಸ್

ನವದೆಹಲಿ, ಡಿ. 12 (ಯುಎನ್‌ಐ, ಪಿಟಿಐ)– ಜೆಎಂಎಂ ಸಂಸದರ ಖರೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಹಾಗೂ ಇನ್ನಿತರ ಐವರಿಗೆ ಸಿಬಿಐ ನ್ಯಾಯಾಧೀಶರು ಇಂದು ಸಮನ್ಸ್ ಹೊರಡಿಸಿದ್ದು, ಜ. 8ರ ಒಳಗಾಗಿ ಕೋರ್ಟಿನ ಮುಂದೆ ಹಾಜರಾಗುವಂತೆ ಆದೇಶಿಸಿದ್ದಾರೆ.

ಪಿ.ವಿ.ನರಸಿಂಹ ರಾವ್ ಸರ್ಕಾರದ ಅವಿಶ್ವಾಸ ನಿರ್ಣಯದ ವಿರುದ್ಧ ಮತ ಹಾಕಲು ನಾಲ್ವರು ಜೆಎಂಎಂ ಸಂಸದರಿಗೆ ಲಂಚ ನೀಡಲು ಹಣದ ವ್ಯವಸ್ಥೆ ಮಾಡಿರುವ ಆರೋಪದ ಮೇರೆಗೆ ವೀರಪ್ಪ ಮೊಯಿಲಿ, ವಿ. ರಾಜೇಶ್ವರ ರಾವ್, ಎಚ್.ಎಂ. ರೇವಣ್ಣ, ರಾಮಲಿಂಗಾ ರೆಡ್ಡಿ, ಡಿ.ಕೆ. ಆದಿಕೇಶವುಲು ಮತ್ತು ಎಂ. ತಿಮ್ಮೇಗೌಡ ಅವರ ವಿರುದ್ಧ ಸಿಬಿಐ ಹೆಚ್ಚುವರಿ ಆರೋಪಪಟ್ಟಿ ಸಲ್ಲಿಸಿತ್ತು.

• ಡಾ.ಎಚ್ಚೆನ್, ರಾಮಾನುಜಂ, ಶಿವಪ್ರಕಾಶ್ ಸೇರಿ 24 ಗಣ್ಯರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಬೆಂಗಳೂರು, ಡಿ. 12– ವಿಚಾರವಾದಿ ಡಾ. ಎಚ್. ನರಸಿಂಹಯ್ಯ, ಹಿರಿಯ ಪೊಲೀಸ್ ಅಧಿಕಾರಿ ಡಾ. ಪಿ.ಎಸ್. ರಾಮಾನುಜಂ, ಖ್ಯಾತ ಕವಿ ಎಚ್.ಎಸ್. ಶಿವಪ್ರಕಾಶ್, ದಲಿತ ಕವಿ ಸಿದ್ಧಲಿಂಗಯ್ಯ ಅವರೂ ಸೇರಿದಂತೆ 24 ಮಂದಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 1996ನೇ ಸಾಲಿನ ಪ್ರಶಸ್ತಿ ಲಭಿಸಿದೆ.

ಸಾಹಿತ್ಯ ಕ್ಷೇತ್ರದ ಒಟ್ಟಾರೆ ಕೊಡುಗೆಗಾಗಿ ದಲಿತ ಕವಿ ಡಾ. ಸಿದ್ಧಲಿಂಗಯ್ಯ ಅವರೂ ಸೇರಿದಂತೆ ಐವರಿಗೆ ಗೌರವ ಪ್ರಶಸ್ತಿ ಕೊಡಲಾಗಿದೆ. ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ರಾಘವೇಂದ್ರ ಖಾಸನೀಸ, ಡಾ. ಶೈಲಜಾ ಉಡಚಣ ಗೌರವ ಪ್ರಶಸ್ತಿ ಪಡೆದ ಇತರ ನಾಲ್ವರು ಸಾಹಿತಿಗಳು.

50 ವರ್ಷಗಳ ಹಿಂದೆ

ಸೋಮವಾರ, 13-12-1971

• ವಿಮಾನದಲ್ಲಿಳಿದು ಢಾಕಾದತ್ತ ನಮ್ಮ ಪಡೆಗಳ ದೌಡು: ಪ್ರಬಲ ಮುತ್ತಿಗೆ

ನವದೆಹಲಿ, ಡಿ. 12– ಅಕ್ರಮಣಕೋರ ಪಾಕಿಸ್ತಾನಿ ಸೈನ್ಯದ ರಕ್ಷಣಾ ವ್ಯೂಹವನ್ನು ಬಗ್ಗುಬಡಿಯುವ ನಿರ್ದಿಷ್ಟ ಉದ್ದೇಶದಿಂದ ಭಾರತ ಸೈನ್ಯದ ಪ್ಯಾರಾಷೂಟ್ ದಳಗಳವರು ಮುಕ್ತವಾಹಿನಿ ಪಡೆಯೊಡನೆ ಒಂದಾಗಿ ಢಾಕಾ ಸುತ್ತ ಲಗ್ಗೆ ಹಾಕಿ ಮುನ್ನುಗ್ಗುತ್ತಿದ್ದಾರೆ.

ಭಾರತದ ಸೈನ್ಯ ಇಂದು ರಾತ್ರಿ 10 ಗಂಟೆ ಸಮಯದಲ್ಲಿ ಬಾಂಗ್ಲಾದ ರಾಜಧಾನಿ ಢಾಕಾದಿಂದ ಕೇವಲ 22 ಮೈಲಿ ದೂರದಲ್ಲಿದೆ ಎಂದು ವರದಿಯಾಗಿದ್ದು, ‘ಢಾಕಾ ವಿಮೋಚನಾ ಸಮರ’ ಪೂರ್ಣವಾಗಿಯೇ ಬಿರುಸುಗೊಂಡಂತಾಗಿದೆ.

• ಸಾವಿರ ಶತ್ರು ಸೈನಿಕರ ಶರಣಾಗತಿ

ಕೋಲ್ಕತ್ತ, ಡಿ. 12– ಸುಮಾರು ಒಂದು ಸಹಸ್ರ ಪಾಕಿಸ್ತಾನಿ ಸೈನಿಕರು ಇಂದು ಕೊಮಿಲ್ಲ ವಿಭಾಗದಲ್ಲಿ ಭಾರತ ಸೇನೆಗೆ ಶರಣಾಗತರಾದರೆಂದು ಅಧಿಕೃತವಾಗಿ ಪೂರ್ವ ಸೇನಾ ಕಚೇರಿ ವಕ್ತಾರರು ಸುದ್ದಿಗಾರರರಿಗೆ ತಿಳಿಸಿದರು.

ಭಾರತದ ದಂಡನಾಯಕ ಜನರಲ್ ಮಾಣೆಕ್ ಷಾ ಅವರ ಕರೆಗೆ ಪ್ರತಿಕ್ರಿಯೆಯಾಗಿ ಶರಣಾಗತರಾದರು ಎಂದೂ ಅವರು ತಿಳಿಸಿದರು.

ಸಾಮಾಜಿಕ ಮಾಧ್ಯಮಗಳ ಈ ಸಂದರ್ಭದಲ್ಲೂ ‘ಕಾವಲುನಾಯಿ’ಯ ಪಾತ್ರ ಗುರುತರ

ಪತ್ರಕರ್ತರಿಗೆ ನೊಬೆಲ್: ಏನಿದರ ಮಹತ್ವ?



ವಿಶ್ಲೇಷಣೆ

ಜೇವಿಯರ್ ಗಾರ್ಜಾ ರಾಮೊಸ್

1935ರ ಕಾಲದಲ್ಲಿ ಪತ್ರಕರ್ತರು ಟೈಪ್‌ರೈಟರ್‌ಗಳಲ್ಲಿ ವರದಿಗಳನ್ನು ಟೈಪ್ ಮಾಡುತ್ತಿದ್ದರು. ಈ ವರದಿಗಳನ್ನು ಸೀಸದ ಅಕ್ಷರಗಳಲ್ಲಿ (ಲೆಡ್ ಟೈಪ್) ಜೋಡಿಸಲಾಗುತ್ತಿತ್ತು. ‘ಬ್ರೇಕಿಂಗ್ ನ್ಯೂಸ್’ ಎಂದರೆ ಆ ಕಾಲದಲ್ಲಿ ಪತ್ರಿಕೆಯ ಮಧ್ಯಾಹ್ನದ ಆವೃತ್ತಿಯನ್ನು ಹೊರತರುವುದಾಗಿತ್ತು. ಆದರೆ, ಅನೇಕ ಪತ್ರಕರ್ತರು, ರೇಡಿಯೊ ಎಂಬ ಹೊಸದೊಂದು ಅತ್ಯಾಕರ್ಷಕ ವೇದಿಕೆಯ ಬಳಕೆ ಕುರಿತು ಅರಿತುಕೊಳ್ಳಲು ಆರಂಭಿಸಿದ್ದರು.

1935- ಪತ್ರಕರ್ತರೊಬ್ಬರು ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ವರ್ಷ. ಆ ನಂತರ, ಯಾರಿಗೂ ಈ ಪ್ರಶಸ್ತಿ ದಕ್ಕಿರಲಿಲ್ಲ. ತಂತ್ರಜ್ಞಾನದ ವಿಸ್ತೃತ ನೋಟವನ್ನು ಇಂದಿನ ಪತ್ರಕರ್ತನಿಗೆ ಗುರುತಿಸಲು ಸಾಧ್ಯವಾಗದೆ ಇರಬಹುದು; ಆದರೆ, ರಾಜಕೀಯ ನೋಟವೆಂಬುದು ಭೀಕರವಾಗಿ ಪರಿಚಿತ ಎಂದು ಬಹುತೇಕರಿಗೆ ಅನಿಸುತ್ತದೆ. ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಅಥವಾ ಅಪರಾಧಿ ನಡವಳಿಕೆಗಳನ್ನು ಬಯಲು ಮಾಡುವ ಸ್ವತಂತ್ರ ಪತ್ರಿಕೋದ್ಯಮದ ಮೇಲೆ ದಾಳಿ ಅಥವಾ ಪತ್ರಕರ್ತರ ಮೇಲಿನ ದಾಳಿಗಳಿಗೆ ಶಿಕ್ಷಾ ಭಯವಿಲ್ಲದಂತಹ ಸ್ಥಿತಿಗಳನ್ನು ಸೃಷ್ಟಿಸುತ್ತಿರುವ ಸರ್ವಾಧಿಕಾರಿ ಆಡಳಿತಗಳು ಹೆಚ್ಚಾಗುತ್ತಿರುವುದು ಎದ್ದು ಕಾಣುವಂತಿದೆ.

ಇಂತಹ ಪರಿಸರದಲ್ಲಿ ಫಿಲಿಪ್ಪೀನ್ಸ್‌ನ ಮರಿಯಾ ರೆಸ್ಸಾ ಹಾಗೂ ರಷ್ಯಾದ ಡಿಮಿತ್ರಿ ಮುರಾಟೊವ್ ಅವರು ಪತ್ರಕರ್ತರಾಗಿ ಕೆಲಸ ಮಾಡುತ್ತಿದ್ದಾರೆ. ಮೊನ್ನೆ ಅವರು ತಮ್ಮ ಕೆಲಸಕ್ಕಾಗಿ ನೊಬೆಲ್ ಶಾಂತಿ ಪ್ರಶಸ್ತಿ ಸ್ವೀಕರಿಸಿದ್ದಾರೆ. ದೈಹಿಕ ಹಿಂಸೆ, ಕಾನೂನು ಸಮರ ಅಥವಾ ಆರ್ಥಿಕ ಸಂಕಷ್ಟಗಳ ಅಪಾಯಗಳ ನಡುವೆಯೂ ಕೆಲಸ ನಿರ್ವಹಿಸುತ್ತಿರುವ ನೂರಾರು ಪತ್ರಕರ್ತರ ಕೆಲಸಗಳನ್ನು ಈ ಪ್ರಶಸ್ತಿ ಸಂಕೇತಿಸುತ್ತದೆ. ಅಭಿವ್ಯಕ್ತಿ ಹಾಗೂ ಮಾಹಿತಿ ಸ್ವಾತಂತ್ರ್ಯವನ್ನು ‘ರಕ್ಷಿಸುವ ಹಾಗೂ ಸಮರ್ಥಿಸುವುದರ ಮಹತ್ವವನ್ನು ಸಾರುವುದು’, ಈ ಇಬ್ಬರು ಪತ್ರಕರ್ತರ ಆಯ್ಕೆಯ ಹಿಂದಿರುವ ಉದ್ದೇಶ ಎಂದು ಪ್ರಶಸ್ತಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ದುರದೃಷ್ಟವೆಂದರೆ, ಕಳೆದ ಕೆಲವು ವರ್ಷಗಳಲ್ಲಿ ಬೆಳೆದು ಬಂದಂತಹ ರಾಜಕೀಯ ಹಾಗೂ ಸಾಮಾಜಿಕ ವಾತಾವರಣದಲ್ಲಿ ಕೆಲಸ ಮಾಡಬೇಕಾದ ವಿಸ್ತೃತ ಸನ್ನಿವೇಶದ ಪ್ರತಿನಿಧಿಗಳಾಗಿದ್ದಾರೆ ಮರಿಯಾ ಹಾಗೂ ಡಿಮಿತ್ರಿ; ಪತ್ರಿಕಾ ಸ್ವಾತಂತ್ರ್ಯಕ್ಕೆ ಎಂದೂ ಚ್ಯುತಿ ಬಾರದು ಎಂದು ಭಾವಿಸಿದ್ದ ಸಮಾಜಗಳಲ್ಲೂ ಪತ್ರಿಕಾ ಸ್ವಾತಂತ್ರ್ಯದ ಮೌಲ್ಯಗಳಿಗೆ ಗೌರವ ಕಡಿಮೆ ಆಗಿರುವ ಸ್ಥಿತಿ ಇಂದಿನದು.

ಸರ್ಕಾರದ ಭ್ರಷ್ಟಾಚಾರ ಕುರಿತಂತೆ ನಿಷ್ಠುರ ತನಿಖೆಯು ಶಿಕ್ಷೆಗೆ ಕಾರಣವಾಗಬಹುದು. ಖಾಸಗಿ ಕಂಪನಿಗಳ ಅಕ್ರಮ ಚಟುವಟಿಕೆಗಳನ್ನು ಬಯಲು ಮಾಡಿದ ಸಂದರ್ಭಗಳಲ್ಲಿ, ಅಂತಹ ಪತ್ರಕರ್ತರಿಗೇ ಕಳಂಕ ಹಚ್ಚಲು ಸೀಮಾತೀತವಾದ ಸಂಪನ್ಮೂಲಗಳನ್ನು ಛೂ ಬಿಡಬಹುದು. ಅಪರಾಧ ಜಾಲವನ್ನು ಬಯಲಿಗೆಳೆಯುವಂತಹದ್ದು, ವರದಿಗಾರರು ಅಥವಾ ಸಂಪಾದಕರ ಹತ್ಯೆಗೆ ಕಾರಣವಾಗಬಹುದು ಹಾಗೂ ತಪ್ಪಿತಸ್ಥರನ್ನು ಅಧಿಕಾರಸ್ಥರು ಶಿಕ್ಷಿಸದಿದ್ದ ಸಂದರ್ಭಗಳಲ್ಲೂ ಅವರು ಹತ್ಯೆಗೊಳಗಾಗಬಹುದು.

ಸತ್ಯ ಹೇಳುವುದರಿಂದ ಬಲಿಷ್ಠರಿಗೆ ಹಾನಿಯಾಗುವ ಸಂದರ್ಭಗಳಲ್ಲೆಲ್ಲಾ ಪತ್ರಿಕೋದ್ಯಮವು ಈ ಗಂಡಾಂತರವನ್ನು ಸದಾ ಎದುರಿಸಿದೆ ಎಂಬುದನ್ನು ಕಾರ್ಲ್ ವೊನ್ ಒಸಿಯೆಟ್‌ಝ್ಕಿ ಅವರಿಗೆ 1935ರಲ್ಲಿ ನೀಡಲಾದ ನೊಬೆಲ್ ಶಾಂತಿ ಪ್ರಶಸ್ತಿಯು ನಮಗೆ ನೆನಪಿಸುತ್ತದೆ. ತನ್ನ ಅಂತರರಾಷ್ಟ್ರೀಯ ಬಾಧ್ಯತೆಗಳನ್ನು ಉಲ್ಲಂಘಿಸಿ 1920ರ ದಶಕದಲ್ಲಿ ಜರ್ಮನಿ ಕೈಗೊಂಡಿದ್ದ ರಹಸ್ಯ ಮರು ಮಿಲಿಟರೀಕರಣದ ವಿವರಗಳನ್ನು ಬಹಿರಂಗಗೊಳಿಸಿದ್ದಕ್ಕಾಗಿ ಒಸಿಯೆಟ್‌ಝ್ಕಿ ಅವರನ್ನು ನಾಝಿ ಆಡಳಿತ ಜೈಲಿಗೆ ಅಟ್ಟಿತ್ತು. ಯಹೂದಿ ವಿರೋಧಿ ಭಾವನೆ ಹಾಗೂ ಮಿಲಿಟರೀಕರಣದ ಹೆಚ್ಚಳದ ಬಗ್ಗೆಯೂ ಅವರು ಎಚ್ಚರಿಸಿದ್ದರು. ಹೀಗಾಗಿ, ಅವರನ್ನು ಜೈಲಿಗೆ ಹಾಕಿ ಚಿತ್ರಹಿಂಸೆ ನೀಡಿದ್ದರು ಅಧಿಕಾರಸ್ಥರು.

1935ರಲ್ಲಿ, ಆ ಹಿಂದಿನ ಶತಮಾನದ ರಾಜಕೀಯ ಕ್ರಿಯಾಶೀಲತೆಯ (ಆ್ಯಕ್ಟಿವಿಸಂ) ಮಾದರಿಯಿಂದ ದೂರ ಸರಿದು ಸ್ವತಂತ್ರ ಪತ್ರಿಕೋದ್ಯಮದ ಪರಿಕಲ್ಪನೆ ಚಿಗುರೊಡೆಯುತ್ತಿತ್ತು. ನಂತರದ ದಶಕಗಳಲ್ಲಿ ಪತ್ರಿಕೋದ್ಯಮದ ಲಾಂಛನವೇ ಆದ ‘ಕಾವಲುನಾಯಿ’ಯ ಪಾತ್ರದತ್ತ ಹೊರಳಿಕೊಳ್ಳುತ್ತಿದ್ದ ಕಾಲ ಅದು. ತಾವು ಒಪ್ಪಿಕೊಳ್ಳುವಂಥ ಸುದ್ದಿಗಳನ್ನಷ್ಟೇ ನೋಡುತ್ತಾ ಇತರ ಎಲ್ಲವನ್ನೂ ಸುಳ್ಳು ಸುದ್ದಿ ಎಂದು ಭಾವಿಸಿಕೊಳ್ಳಲು ಅನುವು ಮಾಡಿಕೊಡುವಂತಹ ಸಾಮಾಜಿಕ ಮಾಧ್ಯಮಗಳ ಈ ಸಂದರ್ಭಗಳಲ್ಲೂ (ಇನ್‌ಫರ್ಮೇಷನ್ ಬಬಲ್ಸ್) ಇಂದಿಗೂ ಈ ಕಾವಲು ನಾಯಿಯ ಪಾತ್ರ ಇದ್ದೇ ಇದೆ.

ಕಠಿಣ ವಾಸ್ತವಾಂಶಗಳು ಹಾಗೂ ಮುಕ್ತ ಪತ್ರಿಕೋದ್ಯಮದ ಮೇಲಿನ ನಂಬಿಕೆಯನ್ನು ಈ ‘ಇನ್‌ಫರ್ಮೇಷನ್ ಬಬಲ್ಸ್’ ಕಸಿಯುತ್ತವೆ. ಈ ಮನೋವೃತ್ತಿಗಳನ್ನು ಹೆಚ್ಚಿನ ಜನಪ್ರಿಯತೆ ಹೊಂದಿದ ರಾಜಕಾರಣಿಗಳು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಹೀಗಿದ್ದೂ ಕಿರುಕುಳ, ಒತ್ತಡ, ದಾಳಿಗಳ ನಡುವೆಯೂ ಪತ್ರಕರ್ತರು ಮುನ್ನಡೆಯುತ್ತಿದ್ದಾರೆ.

ಪ್ರಕಟಿಸುವ ತಮ್ಮ ಹಕ್ಕಿಗಾಗಿ ಹೋರಾಡುತ್ತಿರುವಂತಹ ಪತ್ರಕರ್ತರಿಗೆ ಪ್ರತಿ ವರ್ಷವೂ ‘ವರ್ಲ್ಡ್ ಅಸೋಸಿಯೇಷನ್ ಆಫ್ ನ್ಯೂಸ್ ಪಬ್ಲಿಷರ್ಸ್’ ನೀಡುವಂತಹ ‘ಗೋಲ್ಡನ್ ಪೆನ್ ಆಫ್ ಫ್ರೀಡಂ’ ಪ್ರಶಸ್ತಿಗೆ 2018ರಲ್ಲಿ ಮರಿಯಾ ರೆಸ್ಸಾ ಅವರು ಭಾಜನರಾದಾಗ ಹೇಳಿದ ಮಾತುಗಳಿವು: ‘ನಿಮ್ಮನ್ನು ನೀವು ಸಮರ್ಥಿಸಿಕೊಳ್ಳಲು ಹೋರಾಡಲೇಬೇಕಾದ ಕ್ಷಣದವರೆಗೂ ನೀವು ಯಾರೆಂಬುದು ನಿಮಗೇ ತಿಳಿದಿರುವುದಿಲ್ಲ’. ಅಷ್ಟರಲ್ಲಿ, ಫಿಲಿಪ್ಪೀನ್ಸ್ ಅಧ್ಯಕ್ಷ ರೊಡ್ರಿಗೊ ಡ್ಯುಟರ್ಟ್ ಅವರ ಅಧಿಕಾರ ದುರ್ಬಳಕೆ, ಭ್ರಷ್ಟಾಚಾರವನ್ನು ಬಯಲುಗೊಳಿಸಿದ್ದರಿಂದ, ಮರಿಯಾ ಅವರು 2012ರಲ್ಲಿ ಸಂಸ್ಥಾಪಿಸಿದ್ದ ‘ರ‍್ಯಾಪ್ಲರ್’ ಆನ್ ಲೈನ್ ಪತ್ರಿಕೆಯನ್ನು ನಿರ್ಬಂಧಿಸುವ ಸಂಬಂಧದಲ್ಲಿ ಮರಿಯಾ ಅವರು ಕಾನೂನು ಕ್ರಮಗಳನ್ನು ಎದುರಿಸಿದ್ದರು. ಆನ್‌ಲೈನ್ ಕಿರುಕುಳಗಳನ್ನೂ ಅವರು ಎದುರಿಸಿದ್ದರು. ಹೀಗಾಗಿ ಮುಕ್ತ ಪತ್ರಿಕೋದ್ಯಮದ ಶತ್ರುಗಳಿಗೆ ಶಕ್ತಿ ನೀಡುವ ಸಾಮಾಜಿಕ ಜಾಲಗಳನ್ನು ಖಂಡಿಸಿದ ಮೊದಲ ಪತ್ರಕರ್ತರಲ್ಲಿ ಮರಿಯಾ ಅವರೂ ಒಬ್ಬರಾಗಿದ್ದರು.



ಇದಕ್ಕೂ ಎರಡು ವರ್ಷಗಳ ಮುಂಚೆ, ಡಿಮಿತ್ರಿ ಮುರಾಟೊವ್ ಅವರೂ ಇದೇ ಪ್ರಶಸ್ತಿ ಪಡೆದುಕೊಂಡಿದ್ದರು. ಅಷ್ಟರಲ್ಲಿ, 1993ರಲ್ಲಿ ಅವರು ಸಂಸ್ಥಾಪಿಸಿದ ‘ನೊವಾಯಾ ಗಜೆಟಾ’ ಪತ್ರಿಕೆಯ 6 ಪತ್ರಕರ್ತರು ಹತ್ಯೆಗೀಡಾಗಿದ್ದರು. ಆ ಪೈಕಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಉಗ್ರ ಟೀಕಾಕಾರರಾಗಿದ್ದ ಅನ್ನಾ ಪೊಲಿಟ್ಕೊವಸ್ಕಯಾ ಅವರೂ ಸೇರಿದ್ದರು.

ಡಿಮಿತ್ರಿ ಹಾಗೂ ಮರಿಯಾ ಅವರದ್ದು ನಂಬಲು ಅಸಾಧ್ಯವಾದ ಪಯಣ. ‘ರ‍್ಯಾಪ್ಲರ್’ ಆರಂಭಿಸಿ ತನ್ನದೇ ಸ್ವದೇಶದಲ್ಲಿ ವರದಿ ಮಾಡುವುದಕ್ಕಾಗಿ ಮರಿಯಾ ಅವರು ಜಾಗತಿಕ ಮಾಧ್ಯಮದಲ್ಲಿನ ತಮ್ಮ ಕೆಲಸ ತೊರೆದಿದ್ದರು. ಸೋವಿಯತ್ ಯುಗದ ರಷ್ಯಾದಲ್ಲಿ ಪತ್ರಕರ್ತ ವೃತ್ತಿ ಆರಂಭಿಸಿದ ಡಿಮಿತ್ರಿ ಅವರು ಸ್ವಾತಂತ್ರ್ಯವಿಲ್ಲದ ಪತ್ರಿಕೋದ್ಯಮ ಶಕ್ತಿವಿಹೀನವಾದದ್ದು ಎಂಬುದನ್ನು ಬಹುಬೇಗ ಅರಿತುಕೊಂಡಿದ್ದರು.

ಇಂದು, ಇವರಿಬ್ಬರೂ ಶಾಂತಿಗೆ ತಡೆ ಒಡ್ಡುವ ಸಾಮಾಜಿಕ ಹಾಗೂ ರಾಜಕೀಯ ಕೆಡುಕುಗಳನ್ನು ಬಯಲಿಗೆಳೆಯಲು ಬದ್ಧರಾಗಿರುವ ಪತ್ರಕರ್ತರ ಪರಂಪರೆಯ ಸಮಕಾಲೀನ ಅಭಿವ್ಯಕ್ತಿಗಳಾಗಿದ್ದಾರೆ. ಜನಾಂಗೀಯತೆ, ಸರ್ವಾಧಿಕಾರ, ರಾಜಕೀಯ ದಮನ, ಮಾದಕವಸ್ತು ಸಾಗಣೆ, ಭಯೋತ್ಪಾದಕ ಗುಂಪುಗಳು, ಮಾನವ ಹಕ್ಕುಗಳ ದಮನ, ಶಿಕ್ಷಾಭಯವಿಲ್ಲದಿರುವುದು, ಯುದ್ಧ ಅಪರಾಧಗಳು ಅಥವಾ ಸೇನಾ ಜಮಾವಣೆಗಳನ್ನು ಅವರು ಸಾರ್ವಜನಿಕವಾಗಿ ಖಂಡಿಸಿದ್ದಾರೆ.

ಮರಿಯಾ ಹಾಗೂ ಡಿಮಿತ್ರಿ ಅವರೊಂದಿಗೆ ವಿಶ್ವದಾದ್ಯಂತ ಅಸಂಖ್ಯ ಪತ್ರಕರ್ತರು ಹಾಗೂ ಮಾಧ್ಯಮ ಉದ್ಯಮಿಗಳು ಇದೇ ಪರಂಪರೆಯನ್ನು ಮುಂದುವರಿಸಿದ್ದಾರೆ. ಅವರ ಹೆಸರುಗಳು ನಮಗೆ ಅಷ್ಟು ಪರಿಚಿತವಿಲ್ಲದಿರಬಹುದು ಅಷ್ಟೆ. ಆದರೆ ಆ ಪಟ್ಟಿಯೂ ಉದ್ದವಿದೆ. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಜಗದಗಲ ಹೋರಾಟ ನಡೆಯುತ್ತಿದೆ ಎಂಬುದನ್ನು ನಾವು ಅರಿತುಕೊಂಡರೆ ಸಾಕು.

ಕಾರ್ಲ್ ವೊನ್ ಅವರು, ತಮಗೆ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾದ ಮರು ವರ್ಷ ಎಂದರೆ 1936ರಲ್ಲಿ ಪ್ರಶಸ್ತಿ ಸ್ವೀಕರಿಸಿದ್ದರು. ಅದೇ ವರ್ಷವೇ ಸಾಹಿತ್ಯದ ನೊಬೆಲ್ ಪ್ರಶಸ್ತಿ ಅಮೆರಿಕದ ನಾಟಕಕಾರ ಯೂಜೀನ್ ಓ ನೀಲ್ ಅವರಿಗೆ ದಕ್ಕಿತ್ತು. ಅವರು ಒಮ್ಮೆ ಬರೆದಿದ್ದ ಈ ಸಾಲುಗಳು ಸುಪ್ರಸಿದ್ಧ: ‘ವರ್ತಮಾನ ಅಥವಾ ಭವಿಷ್ಯತ್ ಕಾಲ ಎಂಬುದಿಲ್ಲ, ಬರೀ ಭೂತ ಕಾಲವೇ ಈಗ ಮತ್ತೆ ಮತ್ತೆ ಮರುಕಳಿಸುತ್ತಿದೆ’. ಆ ಶಾಪವನ್ನು ಸೋಲಿಸಲು ಪ್ರತಿದಿನ ಮರಿಯಾ, ಡಿಮಿತ್ರಿ ಹಾಗೂ ವಿಶ್ವದಾದ್ಯಂತ ಅವರ ಸಹೋದ್ಯೋಗಿಗಳು ಹೋರಾಡುತ್ತಿದ್ದಾರೆ.

(ಲೇಖಕ: ಮೆಕ್ಸಿಕೊದ ಪತ್ರಕರ್ತ; ವರ್ಲ್ಡ್ ಎಡಿಟರ್ಸ್ ಫೋರಮ್ ನಿರ್ದೇಶಕ ಮಂಡಳಿ ಸದಸ್ಯ. ತನ್ನ ಗೋಲ್ಡನ್ ಪೆನ್ ಆಫ್ ಫ್ರೀಡಂ ಪ್ರಶಸ್ತಿ ಪುರಸ್ಕೃತರಿಗೆ 2021ರ ನೊಬೆಲ್ ಶಾಂತಿ ಪ್ರಶಸ್ತಿ ಪ್ರದಾನ ಸಂದರ್ಭಕ್ಕಾಗಿ ವರ್ಲ್ಡ್ ಎಡಿಟರ್ಸ್ ಫೋರಮ್/ ವ್ಯಾನ್-ಇಫ್ರಾ ನಿಯೋಜಿಸಿ ಬರೆಸಿದ ಲೇಖನ)

ಚುರುಮುರಿ



ಗುಂಪಿನ ಗಣಿತ

• ಸುಮಂಗಲಾ

ನಾಕೈದು ದಿನದಿಂದ ಬೆಕ್ಕಣ್ಣ ‘ಅಣ್ಣ ಅಕಾರ, ಹಣ ಹಕಾರ’ ಎಂದು ಹೇಳಿಕೊಳ್ಳುತ್ತಲೇ ಇತ್ತು. ಏನೋ ಪಾಠ ಓದ್ತಿರಬೇಕೆಂದು ಸುಮ್ಮನಿದ್ದೆ. ಇವತ್ತು ಬೆಕ್ಕಣ್ಣ ‘ನೀನು ಅಹ-ಜ್ಞಾನಿ ಗುಂಪಿನಲ್ಲಿ ಇರುವೆಯೋ ಅಥವಾ ಅಹ-ಅಜ್ಞಾನಿ ಗುಂಪಲ್ಲಿ ಇರುವೆಯೋ’ ಎಂದು ಘನಗಂಭೀರವಾಗಿ ಶುದ್ಧಕನ್ನಡದಲ್ಲಿ ಕೇಳಿತು.

‘ಇದ್ಯಾವುದಲೇ ಜ್ಞಾನಿ-ಅಜ್ಞಾನಿ ಗುಂಪು?’ ಎಂದೆ ಸೋಜಿಗದಿಂದ.

‘ಕಸಾಪದ ನಮ್ಮ ಹೊಸ ಅಧ್ಯಕ್ಷರು ಬೆಂಗಳೂರಿನಲ್ಲಿ ಕೇವಲ ಶೇ 26ರಷ್ಟು ಜನರು ಶುದ್ಧ ಕನ್ನಡ ಮಾತಾಡ್ತಾರೆ, ಇನ್ನುಳಿದೋರಿಗೆ ಅಕಾರ, ಹಕಾರ ವ್ಯತ್ಯಾಸ ಗೊತ್ತಿಲ್ಲ ಅಂದಿರುವರು. ನೀನು ಶೇ 26ರ ಅಹ-ಜ್ಞಾನಿ ಗುಂಪಿನಲ್ಲಿ ಇರುವೆಯೋ ಅಥವಾ ಶೇ 74ರ ಅಹ-ಅಜ್ಞಾನಿ ಗುಂಪಿನಲ್ಲಿ ಇರುವೆಯೋ?’ ಕಷ್ಟಪಟ್ಟು ಶುದ್ಧಕನ್ನಡದಲ್ಲಿ ಉಲಿಯಿತು.

‘ಶುದ್ಧ ಕನ್ನಡದೋರು ಶೇ 26 ಅಂತ ಹೆಂಗೆ ಗೊತ್ತಾತಲೇ, ಏನರಾ ಸಮೀಕ್ಷೆ ಮಾಡ್ಯಾರೇನು?’

‘ಹೂಂಮತ್ತ, ಇಲ್ಲಕಂದ್ರ ಇಷ್ಟ್ ಕರೆಕ್ಟಾಗಿ ಹೆಂಗ ಗೊತ್ತಾಗತೈತಿ? ಇನ್ಮ್ಯಾಗೆ ನಾ ಬ್ಯಾರೆ ಭಾಷೇದು ಎಲ್ಲಾ ಪದ ಕೈಬಿಟ್ಟು, ಶುದ್ಧ ಕನ್ನಡದಾಗೆ ಮಾತಾಡ್ತೀನಿ’ ಎಂದಿನ ಆಡು ಭಾಷೆಯಲ್ಲಿಯೇ ಹೇಳಿತು.

‘ಶುದ್ಧ ಅನ್ನೂದೇ ಸಂಸ್ಕೃತ ಪದ ಹೌದಿಲ್ಲೋ. ಹಂಗ ಜರಡಿ ಹಿಡಿದು ಬ್ಯಾರೆ ಭಾಷಾ ಪದಗಳನ್ನ ತೆಗದುಹಾಕಿದ್ರ ನಮ್ಮದು ಕಾಲುಭಾಗನೂ ಉಳಿಯಂಗಿಲ್ಲ. ಈಗ ಪ್ರಶ್ನೆ ಕೇಳೂದು ನನ್ನ ಪಾಳಿ. ನೀನು ಮತ್ತ ನಿಮ್ಮ ಅಧ್ಯಕ್ಷರು ಶೇ 50ರ ಗುಂಪಿನಾಗೆ ಇದ್ದೀರೋ ಅಥವಾ ಮ್ಯಾಲಿನ ಶೇ 10ರ ಗುಂಪಿನಾಗೆ ಇದ್ದೀರೋ?’ ಕೇಳಿದೆ. ಕಕಮಕ ಮುಖ ಮಾಡಿತು.

‘ನಮ್ಮ ದೇಶದ 65 ಭಾಗ ಸಂಪತ್ತು ಶೇ 10 ಮಂದಿ ಕೈಯಾಗೆ ಐತಿ. ಶೇ 50ರಷ್ಟು ಮಂದಿ ಹತ್ರ ದೇಶದ ಸಂಪತ್ತಿನ 6 ಭಾಗ ಮಾತ್ರ ಐತಿ, ಅಂದ್ರ ಖಾಲಿಕೈ ಗುಂಪು. ನೀವಿಬ್ಬರೂ ಯಾವ ಗುಂಪಿನಾಗೆ ಅದೀರಿ?’

‘ಅಧ್ಯಕ್ಷರು ಯಾವ್ ಗುಂಪಿನಾಗೆ ಅದಾರೋ ತಿಳಿವಲ್ದು. ನಾ ಶೇ 50ರ ಗುಂಪಿನಾಗೆ ಅದೀನಿ’ ಎಂದು ಮುಖ ಬಾಡಿಸಿತು!

ಸಂಗತ

ಸಕ್ಕರೆ ಕಾರ್ಖಾನೆ: ಪುನಶ್ಚೇತನದ ಮಾರ್ಗ

ನಷ್ಟದ ಹೊರೆ ತಾಳಲಾರದೆ ಸ್ಥಗಿತಗೊಂಡಿದ್ದ ಸಕ್ಕರೆ ಕಾರ್ಖಾನೆಗಳಿಗೆ ಹೊಸ ರೀತಿಯಲ್ಲಿ ಜೀವ ತುಂಬಿದ ನಿದರ್ಶನ...

• ಮಲ್ಲಿಕಾರ್ಜುನ ಹೆಗ್ಗಳಗಿ

ಮುಧೋಳ ತಾಲ್ಲೂಕಿನ ರನ್ನ ನಗರದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯು ಎರಡು ವರ್ಷಗಳಿಂದ ಬಾಗಿಲು ಮುಚ್ಚಿದೆ. ಉದ್ಯೋಗ ಕಳೆದುಕೊಂಡಿದ್ದರಿಂದ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕೆಲವರು ಖಿನ್ನತೆಗೆ ಈಡಾಗಿದ್ದಾರೆ. ಕಬ್ಬು ಪೂರೈಸಿದ ರೈತರು ಬಾಕಿ ಹಣ ಬಾರದೆ ತೊಂದರೆ ಅನುಭವಿಸುತ್ತಿದ್ದಾರೆ. ಈ ಕಾರ್ಖಾನೆಯ ಸುತ್ತಮುತ್ತ ಕಬ್ಬು ಬೆಳೆದ ರೈತರು ತಮ್ಮ ಕಬ್ಬು ದೂರದ ಕಾರ್ಖಾನೆಗಳಿಗೆ ಸಾಗಿಸುವುದಕ್ಕೆ ಪರದಾಡುತ್ತಿದ್ದಾರೆ. ಆತಂಕದ ಸಂಗತಿ ಎಂದರೆ ಕಾರ್ಮಿಕರ ಹಾಗೂ ಕಬ್ಬು ಬೆಳೆಗಾರರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಕಾರ್ಖಾನೆಯ ಆಡಳಿತ ಮಂಡಳಿ ಸಾಲ ಪಡೆದಿದೆ. ಈ ಸಾಲದ ಮರುಪಾವತಿಗೆ ಬ್ಯಾಂಕ್‌ಗಳು ನೋಟಿಸ್ ನೀಡತೊಡಗಿವೆ.

ಕಾರ್ಖಾನೆಯ ಪುನರಾರಂಭದ ಬಗ್ಗೆ ಸರ್ಕಾರ ಹಾಗೂ ಆಡಳಿತ ಮಂಡಳಿ ಮೌನ ವಹಿಸಿವೆ. ಇನ್ನು ಒಂದೆರಡು ವರ್ಷ ಕಾರ್ಖಾನೆ ಸ್ಥಗಿತಗೊಂಡರೆ ಯಂತ್ರೋಪಕರಣಗಳು ತುಕ್ಕು ಹಿಡಿದು ಹಾಳಾಗುತ್ತವೆ. ತಾಲ್ಲೂಕಿನ ಆರ್ಥಿಕ ಶಕ್ತಿಯಾಗಿದ್ದ ಕಾರ್ಖಾನೆಯೊಂದು ಹೀಗೆ ಕಳೆದುಹೋಗುವುದು ನಿಜಕ್ಕೂ ನೋವಿನ ಸಂಗತಿ.

ರಾಜ್ಯದಲ್ಲಿ 11 ಸಕ್ಕರೆ ಕಾರ್ಖಾನೆಗಳು ಸ್ಥಗಿತಗೊಂಡಿವೆ. ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆ, ಭದ್ರಾವತಿಯ ಎಂ.ಪಿ.ಎಂ. ಕಾರ್ಖಾನೆ, ಖಾಸಗಿ ವಲಯದ ಸಾವರಿನ್ ಕಾರ್ಖಾನೆ ಮತ್ತು ಸಹಕಾರಿ ರಂಗದ 8 ಕಾರ್ಖಾನೆಗಳು ಸ್ಥಗಿತಗೊಂಡಿವೆ. ಇಲ್ಲಿಯ ಕಾರ್ಮಿಕರಿಗೆ ಹಾಗೂ ಕಬ್ಬು ಬೆಳೆಗಾರರಿಗೆ ವಿಪರೀತ ತೊಂದರೆಯಾಗಿದೆ.

ಉತ್ತರಪ್ರದೇಶದಲ್ಲಿ ಬಾಗಿಲು ಮುಚ್ಚಿದ್ದ 30 ಸಕ್ಕರೆ ಕಾರ್ಖಾನೆಗಳು ಪುನಃ ಕಾರ್ಯಾರಂಭಿಸಿವೆ. ಅಲ್ಲಿನ ಸರ್ಕಾರವು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ ದಿಸೆಯಲ್ಲಿ ಮುತುವರ್ಜಿ ವಹಿಸಿ ಈ ಕಾರ್ಖಾನೆಗಳು ಮತ್ತೆ ಕಬ್ಬು ನುರಿಸುವಂತೆ ಮಾಡಿದೆ. ಕರ್ನಾಟಕ ಸರ್ಕಾರ ಈ ಬೆಳವಣಿಗೆಯನ್ನು ಅಧ್ಯಯನ ಮಾಡಿ, ರಾಜ್ಯದಲ್ಲಿ ಬಂದ್ ಆಗಿರುವ ಕಾರ್ಖಾನೆಗಳನ್ನು ಪುನಃ ಆರಂಭ ಮಾಡಿಸುವುದು ತೀರಾ ಅವಶ್ಯವಿದೆ.

ಉತ್ತರಪ್ರದೇಶ ಸರ್ಕಾರವು ಸಕ್ಕರೆ ತಂತ್ರಜ್ಞರು ಹಾಗೂ ಕಬ್ಬು ಅಭಿವೃದ್ಧಿ ವಿಜ್ಞಾನಿಗಳನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಿ, ಅದರಿಂದ ಅಧ್ಯಯನ ವರದಿ ಪಡೆದುಕೊಂಡಿತು. ಈ ಸಮಿತಿಯು ಸರ್ಕಾರಕ್ಕೆ ಒಂದು ನೂತನ ಸಲಹೆ ನೀಡಿತು. ಲೀಜ್ ಅಥವಾ ಮಾರಾಟ ಎಂಬ ಸಿದ್ಧ ಮಾದರಿಗಳಿಗೆ ಬದಲಾಗಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿರುವ ಸಮೀಪದ ಮತ್ತೊಂದು ಕಾರ್ಖಾನೆಯೊಂದಿಗೆ ಜೋಡಿಸಿ ನಡೆಸುವ ಸರಳ ವಿಧಾನ ಅನುಸರಿಸುವಂತೆ ಸಲಹೆ ಮಾಡಿತ್ತು. ಕಾರ್ಖಾನೆಯ ಆಡಳಿತದಲ್ಲಿ ಹಿರಿಯ ಕಾರ್ಮಿಕರಿಗೆ ಸಹಭಾಗಿತ್ವ ನೀಡಬೇಕು. ವೆಚ್ಚದ ವ್ಯವಹಾರಗಳಿಗೆ ಕಾರ್ಖಾನೆಯ ಮುಖ್ಯ ತಂತ್ರಜ್ಞರ ಮತ್ತು ಹಣಕಾಸು ತಜ್ಞರ ಲಿಖಿತ ಒಪ್ಪಿಗೆ ಕಡ್ಡಾಯವಾಗಿ ಪಡೆಯಬೇಕು. ಪ್ರತೀ ತಿಂಗಳು ಮಾಡಬೇಕಾಗಿರುವ ಖರ್ಚಿನ ಬಜೆಟ್ ಅನ್ನು ಮೊದಲೇ ಮಂಡಿಸಿ ಸಂಬಂಧಪಟ್ಟವರಿಂದ ಒಪ್ಪಿಗೆ ಪಡೆಯಬೇಕು. ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ಸಮಯ ಪಾಲನೆ ಬದ್ಧತೆಗೆ ಆದ್ಯತೆ ನೀಡಬೇಕು. ತಜ್ಞರ ಉನ್ನತ ಸಮಿತಿ ಶಿಫಾರಸು ಮಾಡಿದ ಮುಖ್ಯ ಅಂಶಗಳಿವು. ಇದರ ಆಧಾರದ ಮೇಲೆ ಕಾರ್ಖಾನೆಗಳನ್ನು ನಡೆಸುವ ವಿಧಾನ ಮತ್ತು ಗುರಿಯನ್ನು ಸರ್ಕಾರ ನಿಗದಿಪಡಿಸಿತು. ಸಕ್ಕರೆ ಕೈಗಾರಿಕೆಯ ಪ್ರಮುಖರು ಇದಕ್ಕೆ ಒಪ್ಪಿಗೆ ನೀಡಿದರು. ಈಗ ಈ ಯೋಜನೆ ಯಶಸ್ವಿಯಾಗಿ ಜಾರಿಯಾಗಿದ್ದು ಸ್ಥಗಿತಗೊಂಡ ಕಾರ್ಖಾನೆಗಳಲ್ಲಿ ನಗೆ ಅರಳಿದೆ.

ಗುಜರಾತ್ ರಾಜ್ಯದ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯು ನಷ್ಟದಿಂದ ಕಳೆದ ವರ್ಷ ಬಾಗಿಲು ಮುಚ್ಚಿತ್ತು. ಅಲ್ಲಿಯ ಎಲ್ಲ ಸಹಕಾರಿ ಸಕ್ಕರೆ ಕಾರ್ಖಾನೆಗಳು ಒಗ್ಗಟ್ಟಿನಿಂದ ಉತ್ತರಪ್ರದೇಶ ಮಾದರಿಯಲ್ಲಿ ಈ ಕಾರ್ಖಾನೆಯನ್ನು ಪುನಃ ಆರಂಭವಾಗುವಂತೆ ಮಾಡಿರುವುದು ಮೆಚ್ಚತಕ್ಕ ಸಂಗತಿಯಾಗಿದೆ.



ಮಂಡ್ಯದ ಮೈಶುಗರ್ ಕಾರ್ಖಾನೆಯನ್ನು ಸರ್ಕಾರವೇ ನಡೆಸಬೇಕು ಎಂದು ಸ್ಥಳೀಯರು ಧ್ವನಿ ಎತ್ತಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆ ಭಾಗದ ಪ್ರಮುಖರ ಸಭೆ ನಡೆಸಿ, ಈ ಕಾರ್ಖಾನೆಯನ್ನು ಸರ್ಕಾರವೇ ನಡೆಸಲಿದೆ ಎಂದು ಪ್ರಕಟಿಸಿದ್ದಾರೆ. ಎರಡು ತಿಂಗಳು ಕಳೆದರೂ ಕಾರ್ಖಾನೆ ಪುನರಾರಂಭದ ಕೆಲಸ ನಡೆದಂತೆ ತೋರುತ್ತಿಲ್ಲ. ಮಂಡ್ಯ ಕಾರ್ಖಾನೆಗೆ ಸರ್ಕಾರ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ₹ 504 ಕೋಟಿ ಅನುದಾನ ನೀಡಿದೆ. ಅದರಿಂದ ಕಾರ್ಖಾನೆಯ ಆರೋಗ್ಯವೇನೂ ಸುಧಾರಿಸಲಿಲ್ಲ ಎಂಬುದು ವಿಷಾದದ ಸಂಗತಿ.

ಸಕ್ಕರೆ ಕೈಗಾರಿಕೆಯು ಕೃಷಿ ಆಧಾರಿತ ಗ್ರಾಮೀಣ ಭಾಗದ ಆರ್ಥಿಕ ಉನ್ನತಿಗೆ ಬಲ ತುಂಬುವ ಉದ್ದಿಮೆಯಾಗಿದೆ. ಸಕ್ಕರೆ ಕಾರ್ಖಾನೆಗಳನ್ನು ಆಡಳಿತ ಮಂಡಳಿಗಳು ಬದ್ಧತೆಯಿಂದ ನಿರ್ವಹಿಸಿದರೆ ನಷ್ಟ ಆಗುವುದಕ್ಕೆ ಅವಕಾಶಗಳು ಕಡಿಮೆ. ಸಕ್ಕರೆ ಕೈಗಾರಿಕೆಯು ಶಿಸ್ತಿನಿಂದ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಿದರೆ ಅದು ನಿಜಕ್ಕೂ ಚಿನ್ನದ ಮೊಟ್ಟೆ ಇಡುವ ಕೋಳಿ. ಅದರ ಹೊಟ್ಟೆ ಬಗೆಯದೇ ಮೊಟ್ಟೆ ಮಾತ್ರ ಪಡೆಯಬೇಕು.

ಲೇಖಕ: ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ

ವಾಚಕರ ವಾಣಿ

ಶಿಕ್ಷಕರ ನೇಮಕಾತಿ: ಸಮಯೋಚಿತ ನಿರ್ಧಾರ

‘15 ಸಾವಿರ ಶಿಕ್ಷಕರ ನೇಮಕಾತಿ ಶೀಘ್ರ’ (ಪ್ರ.ವಾ., ಡಿ.12). ಇದೊಂದು ಸಂತಸದ ಸುದ್ದಿ. ಸರ್ಕಾರಿ ಶಾಲೆಗಳತ್ತ ಕಳೆದೊಂದು ವರ್ಷದಿಂದ ಮುಖ ಮಾಡಿದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಅದಕ್ಕೆ ಕೊರೊನಾ ಕಾರಣ ಇರಬಹುದು. ಈ ಮಕ್ಕಳು ಮತ್ತೆ ಖಾಸಗಿ ಶಾಲೆಗಳತ್ತ ಹೊರಳದೆ, ಸರ್ಕಾರಿ ಶಾಲೆಯಲ್ಲಿಯೇ ಉಳಿಯಬೇಕು ಎಂದರೆ ಸರ್ಕಾರಿ ಶಾಲೆಗಳನ್ನು ಪುನಶ್ಚೇತನಗೊಳಿಸುವುದು ಅನಿವಾರ್ಯ. ಹಾಗಾಗಿ, ಇಂತಹ ನೇಮಕಾತಿ ನಿರ್ಣಯ ತೆಗೆದುಕೊಂಡಿರುವುದು ಸಮಯೋಚಿತ. ಈ ಪ್ರಕ್ರಿಯೆ ವಿಳಂಬವಾಗದೆ ಶೀಘ್ರ ಶಾಲೆಗಳಿಗೆ ಪದವೀಧರ ಶಿಕ್ಷಕರು ಬರುವಂತಾಗಲಿ. ಮಕ್ಕಳನ್ನು ಇಂದಿನ ತಾಂತ್ರಿಕ ಜಗತ್ತಿಗೆ ಅಣಿಗೊಳಿಸಲು ಪ್ರಾಥಮಿಕ ಶಿಕ್ಷಣದಲ್ಲಿ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳ ಬುನಾದಿ ಗಟ್ಟಿಯಾಗಿ ಬೀಳಬೇಕಿದೆ. ನೇಮಕಾತಿ ಪ್ರಕ್ರಿಯೆಯು ತ್ವರಿತವಾಗಿ ಪೂರ್ಣಗೊಳ್ಳುವಂತೆ ಶಿಕ್ಷಣ ಸಚಿವರು ನೋಡಿಕೊಳ್ಳಲಿ.

ಜಿ.ಪಿ.ಪ್ರಕಾಶಗೌಡ್ರು, ಹಿರೇಕೆರೂರು

ದಿಗಿಲು ಹುಟ್ಟಿಸಿದ ಪರಿಷತ್ ಚುನಾವಣೆ!

ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಹಣ–ಆಮಿಷದ ಮೇಲಾಟಗಳನ್ನು ನೋಡಿದರೆ ನಿಜಕ್ಕೂ ದಿಗಿಲಾಗುತ್ತದೆ! ಇಲ್ಲಿ ಮತದಾರರಾಗಿರುವ ಸ್ಥಳೀಯ ಸಂಸ್ಥೆಗಳ ಪ್ರತೀ ಸದಸ್ಯನಿಗೆ ಹಂಚಲಾದ ಹಣ, ವಸ್ತುಗಳನ್ನು ಸೇರಿಸಿದರೆ ಅದರ ಮೌಲ್ಯ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇರಲಾರದು! ಹಾಗಾದರೆ ಒಬ್ಬೊಬ್ಬ ಅಭ್ಯರ್ಥಿಗೆ ಈ ಕೋಟಿಗಟ್ಟಲೆ ಹಣ ಎಲ್ಲಿಂದ ಬಂದಿರುತ್ತದೆ? ಈ ಹೊತ್ತಿನಲ್ಲಿ ಆದಾಯ ತೆರಿಗೆ ಇಲಾಖೆಯವರು ಎಲ್ಲಿ ಹೋಗಿರುತ್ತಾರೆ? ಎಲ್ಲಾ ಪಕ್ಷದವರೂ ಇದನ್ನೇ ಮಾಡಿರುವುದರಿಂದ ಯಾರೂ ಅದನ್ನು ಕೆದಕಿಲ್ಲ. ಅಲ್ಲವೇ? ಚುನಾವಣೆಯಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಿ ಅದಕ್ಕೆ ಬಡ್ಡಿ, ಚಕ್ರಬಡ್ಡಿ ಎಲ್ಲಾ ಸೇರಿಸಿ ಗಳಿಕೆ ಮಾಡಲು ಇವರು ಏನೇನು ಮಾಡುವರೋ ಯಾರಿಗೆ ಗೊತ್ತು?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

ಶಿಕ್ಷಕರ ಬಗ್ಗೆ ಇರಲಿ ಗೌರವ

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ತರಗತಿ ನಡೆಯುತ್ತಿರುವಾಗಲೇ ಕಸದ ಬುಟ್ಟಿಯನ್ನು ಶಿಕ್ಷಕರೊಬ್ಬರ ತಲೆ ಮೇಲೆ ಹಾಕಿ ಪುಂಡಾಟಿಕೆ ಮೆರೆದಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರತೀಯ ಪರಂಪರೆಯಲ್ಲಿ ಗುರುವಿಗೆ ಶ್ರೇಷ್ಠವಾದ ಸ್ಥಾನವಿದೆ. ಗುರುವನ್ನು ಸಾಕ್ಷಾತ್ ದೇವರಂತೆ ಕಾಣುತ್ತಿದ್ದ ಅನೇಕ ನಿದರ್ಶನಗಳು ನಮ್ಮ ಮಹಾನ್ ಕೃತಿಗಳಲ್ಲಿ ಸಿಗುತ್ತವೆ. ಪುರಂದರದಾಸರು ಗುರುವಿನ ಪ್ರಾಮುಖ್ಯದ ಕುರಿತು ‘ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ’ ಎಂದು ಸೊಗಸಾಗಿ ಹೇಳಿದ್ದಾರೆ. ಅದಕ್ಕೆ ತಕ್ಕಂತೆ ಶಿಷ್ಯರು ನಡೆದುಕೊಳ್ಳುವ ಕಾಲವೂ ಇತ್ತು.

ಆದರೆ, ಈಗ ಕೆಲವು ವಿದ್ಯಾರ್ಥಿಗಳು ಗುರುವನ್ನು ತಮ್ಮ ಗುಲಾಮನಂತೆ ಕಾಣುತ್ತಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಗುರುಗಳು ಪ್ರಮುಖ ಪಾತ್ರ ವಹಿಸುತ್ತಾರೆ. ವಿದ್ಯಾರ್ಥಿಗಳಲ್ಲಿ ವಿದ್ಯೆ ಇಲ್ಲದಿದ್ದರೂ ವಿನಯವಂತಿಕೆ ಇರಬೇಕು. ಗುರು–ಹಿರಿಯರ ಜೊತೆ ಗೌರವಯುತವಾಗಿ ನಡೆದುಕೊಂಡಾಗ ಮಾತ್ರ ನಾಗರಿಕ ಸಂಸ್ಕಾರಕ್ಕೆ ಅರ್ಥ ಬರುತ್ತದೆ. ಆದರೆ, ಕೆಲ ವಿದ್ಯಾರ್ಥಿಗಳಲ್ಲಿ ವಿನಯವಂತಿಕೆ, ಗೌರವ ಎಲ್ಲವೂ ಮರೆಯಾಗುತ್ತಿರುವುದು ವಿಷಾದನೀಯ.

ಬಿ.ಎಸ್. ಚೈತ್ರ, ಜಾಲಿಕಟ್ಟೆ, ಚಿತ್ರದುರ್ಗ

ಅಧಿವೇಶನ ಅರ್ಥಪೂರ್ಣವಾಗಿ ನಡೆಯಲಿ

ಗಡಿನಾಡು ಬೆಳಗಾವಿಯಲ್ಲಿ ಇಂದಿನಿಂದ (ಡಿ. 13) ಆರಂಭವಾಗಲಿರುವ ವಿಧಾನಮಂಡಲದ ಅಧಿವೇಶನ ಅರ್ಥಪೂರ್ಣವಾಗಿ ನಡೆಯಬೇಕಿದೆ. ಬರ, ನೆರೆ ಹಾನಿ, ಕೊರೊನಾ ಅಬ್ಬರದಿಂದಾಗಿ ರಾಜ್ಯದ ಜನ ತತ್ತರಿಸಿದ್ದಾರೆ. ಜ್ವಲಂತ ಸಮಸ್ಯೆಗಳ ಬಗ್ಗೆ ಸದನದಲ್ಲಿ ಗುಣಮಟ್ಟದ ಚರ್ಚೆಯಾಗಬೇಕು. ವಿರೋಧ ಪಕ್ಷಗಳ ಸದಸ್ಯರು ಸರ್ಕಾರಕ್ಕೆ ಮನದಟ್ಟು ಮಾಡಿಸುವ ರೀತಿಯಲ್ಲಿ ವಿಷಯಗಳನ್ನು ಪ್ರಸ್ತಾಪಿಸಬೇಕು. ಸರ್ಕಾರ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಅರ್ಥಹೀನ ವಿಷಯಗಳು ಸಮಯ ಕಬಳಿಸಬಾರದು. ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಚರ್ಚೆಗೆ ಒತ್ತು ಸಿಗಲಿ. ಸಂತ್ರಸ್ತರ ಸಂಕಷ್ಟಗಳನ್ನು ನಿವಾರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಜನಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಜನರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

ಅತಿಥಿ ಉಪನ್ಯಾಸಕರ ಬೇಡಿಕೆಗೆ ಸಿಗಲಿ ಸ್ಪಂದನ

ರಾಜ್ಯದಲ್ಲಿ ಸುಮಾರು 14 ಸಾವಿರ ಮಂದಿ ಅತಿಥಿ ಉಪನ್ಯಾಸಕರು ಪದವಿ ಕಾಲೇಜುಗಳಲ್ಲಿ ಕನಿಷ್ಠ ವೇತನಕ್ಕೆ ದುಡಿಯುತ್ತಿದ್ದಾರೆ. ಅದರಲ್ಲೂ ವರ್ಷಕ್ಕೆ 8 ರಿಂದ 10 ತಿಂಗಳು ಮಾತ್ರ ವೇತನ ಪಡೆಯುತ್ತಿದ್ದಾರೆ. ಅತಿಥಿ ಉಪನ್ಯಾಸಕರ ಬಾಳಿನ ಜೊತೆ ಸರ್ಕಾರ ಚೆಲ್ಲಾಟ ಆಡುತ್ತಿದೆ. ತಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಅತಿಥಿ ಉಪನ್ಯಾಸಕರು ಕಳೆದ ಕೆಲವು ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಅನಿರ್ದಿಷ್ಟ ಅವಧಿಯ ಧರಣಿಯಿಂದ ಪದವಿ ಕಾಲೇಜುಗಳ ಬೋಧನೆ ಮೇಲೆ ಪರಿಣಾಮ ಆಗಲಿದೆ. ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಗಮನಹರಿಸಲಿ.

ಪ್ರಶಾಂತ್ ಸಿದಗೊಂಡ, ಬೀದರ್

ರಸ್ತೆಗುಂಡಿ: ಕಾರಣ ಯಾರು?

‘ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿನ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಕ್ರಮ ಕೈಗೊಳ್ಳಬೇಕು’ (ಪ್ರ.ವಾ., ಡಿ. 12) ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನಗರದ ರಸ್ತೆಗಳ ಸ್ಥಿತಿ ಹಿಂದೆಂದೂ ಈ ಪರಿ ಕೆಟ್ಟಿರಲಿಲ್ಲ. ಮಳೆ ಬಂದಾಗ ಮತ್ತು ರಾತ್ರಿ ವೇಳೆ ದ್ವಿಚಕ್ರ ವಾಹನ ಓಡಿಸುವುದು ಅಪಾಯದ ಜೊತೆ ಸರಸ ಎಂಬಂತಾಗಿದೆ. ಜೀವದ ಆಸೆ ತೊರೆದು ವಾಹನ ಓಡಿಸಬೇಕಾದ ಇಂತಹ ದಾರುಣ ಸ್ಥಿತಿಗೆ ಕಾರಣ ಯಾರು? ‘ಯಾವುದಾದರೂ ರಸ್ತೆಯಲ್ಲಿ ಗುಂಡಿ ಮುಚ್ಚದೇ ಇರುವುದು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದು ಅವರು ಎಚ್ಚರಿಸಿದ್ದಾರೆ. ಮುಂದಿನ ಕಥೆ ಮುಂದಿನದು. ಈಗ ಆಗಿರುವ ಅಧ್ವಾನಕ್ಕೆ ಯಾರನ್ನಾದರೂ ಹೊಣೆ ಮಾಡಬೇಕಲ್ಲವೇ? ಆ ಕೆಲಸ ಮೊದಲು ನಡೆಯಲಿ.

ಅರುಣ್ ಕುಮಾರ್ ಎಸ್.ಎಂ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾರತ–ರಷ್ಯಾ ಮೈತ್ರಿಗೆ ಹೊಸ ಭಾಷ್ಯ



ಟ್ರಯಂಫ್

ಕೋವಿಡ್ ಸಾಂಕ್ರಾಮಿಕವು ಜಗತ್ತನ್ನು ತಲ್ಲಣಗೊಳಿಸಿದ ನಂತರದ ಸುಮಾರು ಎರಡು ವರ್ಷಗಳಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಎರಡು ಬಾರಿ ಮಾತ್ರ ತಮ್ಮ ದೇಶ ಬಿಟ್ಟು ಹೊರಗೆ ಹೋಗಿದ್ದಾರೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಜತೆಗೆ ಒಂದು ಶೃಂಗಸಭೆ ನಡೆದರೆ, ಇನ್ನೊಂದು ಬಾರಿ ಭಾರತಕ್ಕೆ ಬಂದು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಪುಟಿನ್ ಭೇಟಿಯೇ ಎರಡು ದೇಶಗಳ ಸಂಬಂಧ ಎಷ್ಟು ಮುಖ್ಯ ಎಂಬುದನ್ನು ಸಾರಿ ಹೇಳುತ್ತದೆ. 'ಭಾರತವು ಪ್ರಬಲ, ಸ್ನೇಹಮಯಿ ದೇಶ. ಕಾಲದ ಪರೀಕ್ಷೆಯಲ್ಲಿ ಗೆದ್ದ ಗೆಳೆಯ' ಎಂಬ ಪುಟಿನ್ ಅವರ ಬಣ್ಣನೆ ಕೂಡ ನಂಟಿನ ಮಹತ್ವವೇನು ಎಂಬುದನ್ನು ಹೇಳಿದೆ. 'ರಾಜಕೀಯ ಸಮೀಕರಣ, ಲೆಕ್ಕಾಚಾರಗಳು ಬದಲಾದರೂ ಭಾರತ-ರಷ್ಯಾ ಸಂಬಂಧ ಸದಾ ಸ್ಥಿರ' ಎಂದು ಮೋದಿಯವರೂ ಹೇಳಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಸಂದರ್ಭದಿಂದಲೂ ಉಭಯ ದೇಶಗಳ ನಡುವೆ ಉತ್ತಮ ಬಾಂಧವ್ಯ ಇದೆ. 1947ರಲ್ಲಿ ಭಾರತಕ್ಕೆ ಮಾನ್ಯತೆ ಕೊಟ್ಟ ಮೊದಲ ದೇಶಗಳಲ್ಲಿ ಸೋವಿಯತ್ ಒಕ್ಕೂಟ ಕೂಡ ಒಂದು. 1950ರ ದಶಕದ ಮಧ್ಯ ಭಾಗದಿಂದ ಸಂಬಂಧ ಇನ್ನಷ್ಟು ನಿಕಟಗೊಂಡಿತು. ಭಾರತದ ಆರ್ಥಿಕ ಅಭಿವೃದ್ಧಿಗಾಗಿ ಇಲ್ಲಿ ಬಂಡವಾಳ ಹೂಡಿಕೆಗೂ ಸೋವಿಯತ್ ಒಕ್ಕೂಟ ಸಿದ್ಧವಾಯಿತು. ರಕ್ಷಣಾ–ತಾಂತ್ರಿಕ ಸಹಕಾರಕ್ಕೆ 1962ರಲ್ಲಿ ಒಪ್ಪಿಕೊಳ್ಳಲಾಯಿತು. 1971ರಲ್ಲಿ ಶಾಂತಿ ಮತ್ತು ಗೆಳೆತನ ಒಪ್ಪಂದಕ್ಕೆ ಸಹಿ ಹಾಕಲಾಯಿತು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ನೀಡಬೇಕು, ಪರಮಾಣು ಪೂರೈಕೆದಾರರ ಗುಂಪಿಗೆ ಭಾರತವನ್ನು ಸೇರಿಸಿಕೊಳ್ಳಬೇಕು ಎಂಬುದಕ್ಕೆ ರಷ್ಯಾದ ದೃಢ ಬೆಂಬಲ ಇದೆ.

1991ರಲ್ಲಿ ಸೋವಿಯತ್ ಒಕ್ಕೂಟ ಪತನಗೊಂಡು ರಷ್ಯಾ ಸೇರಿ 15 ಸ್ವತಂತ್ರ ದೇಶಗಳು ರೂಪುಗೊಂಡವು. 1990ರ ದಶಕದಲ್ಲಿ ಭಾರತವು ಆರ್ಥಿಕ ಉದಾರೀಕರಣ ನೀತಿ ಅನುಸರಿಸಿತು. ಆರ್ಥಿಕ ನೀತಿಯು ಬದಲಾದಂತೆ, ರಕ್ಷಣೆ, ವ್ಯಾಪಾರ– ವಹಿವಾಟು ಮುಂತಾದ ವಿಷಯಗಳಲ್ಲಿ ಭಾರತವು ವಿವಿಧ ದೇಶಗಳ ಜತೆಗೆ ಸಂಬಂಧವನ್ನು ವಿಸ್ತರಿಸಿಕೊಂಡಿತು. ಅಮೆರಿಕ, ಫ್ರಾನ್ಸ್, ಇಸ್ರೇಲ್ ಮುಂತಾದ ದೇಶಗಳು ಭಾರತಕ್ಕೆ ಈಗ ರಕ್ಷಣಾ ಸಾಮಗ್ರಿಗಳನ್ನು ಪೂರೈಸುತ್ತಿವೆ. 2009–13ರ ಅವಧಿಗೆ ಹೋಲಿಸಿದರೆ 2014–18ರ ಅವಧಿಯಲ್ಲಿ ಭಾರತಕ್ಕೆ ರಷ್ಯಾದ ರಕ್ಷಣಾ ಸಾಮಗ್ರಿ ಪೂರೈಕೆಯು ಸುಮಾರು ಶೇ 40ಕ್ಕಿಂತಲೂ ಹೆಚ್ಚು ಕುಸಿದಿದೆ ಎಂಬ ವರದಿಗಳಿವೆ. ಹಾಗಿದ್ದರೂ, ಭಾರತದಲ್ಲಿ ಈಗ ಬಳಕೆಯಲ್ಲಿರುವ ರಕ್ಷಣಾ ಸಾಮಗ್ರಿಗಳಲ್ಲಿ ಶೇ 86ರಷ್ಟು ರಷ್ಯಾದಿಂದ ಆಮದಾದವು ಎಂದು ಇನ್ನೊಂದು ವರದಿ ಹೇಳಿದೆ.

ವಾಯು ಪ್ರದೇಶ ರಕ್ಷಣೆಯ ಕ್ಷಿಪಣಿ ನಿರೋಧಕ ವ್ಯವಸ್ಥೆ-ಟ್ರಯಂಫ್ ಅನ್ನು ರಷ್ಯಾ ಈ ವರ್ಷದ ಕೊನೆಯ ಹೊತ್ತಿಗೆ ಪೂರೈಸಲಿದೆ. ಇದು ₹39 ಸಾವಿರ ಕೋಟಿಯ ಒಪ್ಪಂದ. ಆರು ಲಕ್ಷಕ್ಕೂ ಹೆಚ್ಚು ಎ.ಕೆ–203 ರೈಫಲ್‌ಗಳನ್ನು 'ಭಾರತದಲ್ಲಿ ತಯಾರಿಸಿ' ಯೋಜನೆ ಅಡಿಯಲ್ಲಿ ಅಮೇಠಿಯಲ್ಲಿ ತಯಾರಿಸುವ ಒಪ್ಪಂದಕ್ಕೂ ಉಭಯ ದೇಶಗಳು ಸಹಿ ಹಾಕಿವೆ. ಇದು ₹5 ಸಾವಿರ ಕೋಟಿಯ ಒಪ್ಪಂದ.

ಹೀಗೆ ಭಾರತ–ರಷ್ಯಾ ನಡುವಣ ರಕ್ಷಣಾ ಸಂಬಂಧವು ಮತ್ತೆ ಪುನಶ್ಚೇತನದ ಹಾದಿಗೆ ಮರಳಿದೆ.

ರೂಪಾಯಿ ವ್ಯವಹಾರ



ಅಮೆರಿಕದ 'ಎದುರಾಳಿ' ದೇಶಗಳ ಜತೆಗೆ, ಬೇರೆ ದೇಶಗಳು ಡಾಲರ್ ಮತ್ತು ಯೂರೊ ಮೂಲಕ ಹಣಕಾಸು ವ್ಯವಹಾರ ಮಾಡಿದಾಗ ಮಾತ್ರ ನಿರ್ಬಂಧವು ಅನ್ವಯವಾಗುತ್ತದೆ. ಹೀಗಾಗಿ ಎಸ್–400 ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆ ಖರೀದಿಯ ಹಣವನ್ನು ರೂಪಾಯಿಯಲ್ಲೇ ವರ್ಗಾಯಿಸಲು ಭಾರತ ಮತ್ತು ರಷ್ಯಾ ಒಪ್ಪಿಕೊಂಡಿವೆ. ಇದರಿಂದ ಅಮೆರಿಕವು ನಿರ್ಬಂಧ ಹೇರಲು ಅವಕಾಶವೇ ಇಲ್ಲದಂತಾಗುತ್ತದೆ ಎಂದು ಈ ಒಪ್ಪಂದ ಕುರಿತು ಮಾಹಿತಿ ಇರುವ, ರಕ್ಷಣಾ ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಟ್ರಯಂಫ್ ಖರೀದಿ: ಅಮೆರಿಕದ ನಿರ್ಬಂಧ ಸಾಧ್ಯತೆ ಕ್ಷೀಣ

ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆಯನ್ನು ಭಾರತಕ್ಕೆ ಪೂರೈಸುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ಎಂದು ರಷ್ಯಾ ಸೇನಾ ಸಹಕಾರ ಸಂಸ್ಥೆಯ ಮುಖ್ಯಸ್ಥ ಡಿಮಿಟ್ರಿ ಶುಗಯೆವ್ ಇತ್ತೀಚೆಗೆ ಹೇಳಿದ್ದರು. ಈ ಪೂರೈಕೆಯಿಂದಾಗಿ ಭಾರತವು ಅಮೆರಿಕದ ನಿರ್ಬಂಧಗಳಿಗೆ ಒಳಗಾಗುವ ಅಪಾಯ ಎದುರಾಗಿದೆ. ನಿರ್ಬಂಧಗಳಿಂದ ತಪ್ಪಿಸಿಕೊಳ್ಳುವ ದಾರಿಗಳನ್ನು ಭಾರತ ಹುಡುಕುತ್ತಿದೆ.

ಅಮೆರಿಕದ ಎದುರಾಳಿಗಳಿಗೆ ನಿರ್ಬಂಧದ ಮೂಲಕ ತಿರುಗೇಟು ಕಾಯ್ದೆಯನ್ನು (ಸಿಎಎಟಿಎಸ್‌ಎ) ಅಮೆರಿಕವು 2017ರಲ್ಲಿ ಜಾರಿಗೆ ತಂದಿದೆ. ಉಕ್ರೇನ್‌ನಲ್ಲಿ ರಷ್ಯಾದ 'ಅತಿಕ್ರಮಣ', ಅಮೆರಿಕದ ಚುನಾವಣೆಯಲ್ಲಿ 'ಹಸ್ತಕ್ಷೇಪ' ಮುಂತಾದ ಕಾರಣಗಳಿಂದಾಗಿ ರಷ್ಯಾವನ್ನು 'ಎದುರಾಳಿ' ಎಂದು ಅಮೆರಿಕ ಗುರುತಿಸಿದೆ. ಇಂತಹ ಎದುರಾಳಿ ದೇಶದ ಜತೆಗೆ ವ್ಯವಹರಿಸುವ ದೇಶದ ಮೇಲೆ ನಿರ್ಬಂಧ ಹೇರಲು ಕಾಯ್ದೆಯು ಅವಕಾಶ ಒದಗಿಸುತ್ತದೆ. ಹೀಗಾಗಿ, ಭಾರತವು ಅಮೆರಿಕದ ನಿರ್ಬಂಧಕ್ಕೆ ಒಳಗಾಗಬಹುದು. ರಷ್ಯಾದಿಂದ ಟ್ರಯಂಫ್ ವ್ಯವಸ್ಥೆಯನ್ನು ಖರೀದಿಸಿದ ಟರ್ಕಿ ಮೇಲೆ ಅಮೆರಿಕ ನಿರ್ಬಂಧ ಹೇರಿದ ಉದಾಹರಣೆಯೂ ಇದೆ.

ಟ್ರಯಂಫ್ ಪೂರೈಕೆಗಾಗಿ ರಷ್ಯಾ ಜತೆಗೆ 2016ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಸಿಎಎಟಿಎಸ್‌ಎಯನ್ನು ಅಮೆರಿಕವು ಜಾರಿಗೆ ತಂದದ್ದು 2017ರಲ್ಲಿ. ಹಾಗಾಗಿ, ರಷ್ಯಾ ಜತೆಗಿನ ಟ್ರಯಂಫ್ ಪೂರೈಕೆ ಒಪ್ಪಂದಕ್ಕೆ ಇದು ಅನ್ವಯ ಆಗುವುದಿಲ್ಲ ಎಂಬುದು ಭಾರತದ ಪ್ರತಿಪಾದನೆ.

ಭಾರತದ ಮೇಲೆ ನಿರ್ಬಂಧ ಹೇರುವುದು ಅಮೆರಿಕಕ್ಕೆ ಸುಲಭವೇನೂ ಅಲ್ಲ. ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯ ಹೆಚ್ಚುತ್ತಲೇ ಇದೆ. ಇದು ಭಾರತ ಮತ್ತು ಅಮೆರಿಕ ಎರಡೂ ದೇಶಗಳಿಗೂ ದೊಡ್ಡ ಬೆದರಿಕೆ. ಚೀನಾವನ್ನು ನಿಯಂತ್ರಣದಲ್ಲಿ ಇರಿಸಲು ಅಮೆರಿಕಕ್ಕೆ ಭಾರತದ ಬೆಂಬಲ ಅನಿವಾರ್ಯ. ಅದಲ್ಲದೆ, ಭಾರತ–ಅಮೆರಿಕ ಸಂಬಂಧ ಈಗ ಅತ್ಯಂತ ಆಪ್ತ ಎನ್ನುವ ಮಟ್ಟಕ್ಕೆ ತಲುಪಿದೆ. ವ್ಯಾಪಾರ, ನಾಗರಿಕ–ನಾಗರಿಕರ ನಡುವಣ ನಂಟು ಎಲ್ಲವೂ ಉತ್ತಮವಾಗಿದೆ. ಇಂತಹ ಸಂದರ್ಭದಲ್ಲಿ ನಿರ್ಬಂಧದ ಮಾತು ಎಲ್ಲವನ್ನೂ ಕೆಡಿಸಬಲ್ಲುದು ಎಂಬ ಅರಿವು ಅಮೆರಿಕಕ್ಕೆ ಇದೆ.

ಅಮೆರಿಕದ ವಿದೇಶಾಂಗ ಖಾತೆಯ ಉಪಕಾರ್ಯದರ್ಶಿ ವೆಂಡಿ ಶೆರ್ಮನ್ ಅವರು ಎರಡು ತಿಂಗಳ ಹಿಂದೆ ಭಾರತಕ್ಕೆ ಭೇಟಿ ನೀಡಿದ್ದಾಗ, ಟ್ರಯಂಫ್ ವ್ಯವಸ್ಥೆ ಖರೀದಿ ಒಪ್ಪಂದದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದರು. ಆದರೆ, ಈ ಬಗ್ಗೆ ಇರುವ ಅಸಮಾಧಾನವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯ ಎಂದಿದ್ದರು. ಅಮೆರಿಕವು ನಿರ್ಬಂಧ ಹೇರುವ ನಿರ್ಧಾರ ಕೈಗೊಳ್ಳದು ಎಂಬುದರ ಸೂಚನೆ ಇದು.

ರಷ್ಯಾ ಈಗಲೂ ಪ್ರಭಾವಿ ರಾಷ್ಟ್ರವೇ?

ಶೀತಲ ಸಮರದ ವೇಳೆಯಲ್ಲಿ ಅಮೆರಿಕಕ್ಕೆ ಪರ್ಯಾಯ ಶಕ್ತಿಯಂತಿದ್ದ ರಷ್ಯಾ, ಸೋವಿಯತ್ ಒಕ್ಕೂಟದ ಪತನದ ನಂತರ ಆ ಶಕ್ತಿಯನ್ನು ಕಳೆದುಕೊಂಡಿತ್ತು. ಆದರೆ ವಿಶ್ವದ ಹಲವು ರಾಷ್ಟ್ರಗಳನ್ನು ನಿಯಂತ್ರಿಸುವ ಸೂತ್ರವನ್ನು ರಷ್ಯಾ ಈಗಲೂ ಹೊಂದಿದೆ. ವಿಶ್ವದ 97 ದೇಶಗಳಿಗೆ ರಷ್ಯಾ ಈಗಲೂ ಶಸ್ತ್ರಾಸ್ತ್ರ ಮತ್ತು ಮದ್ದು–ಗುಂಡನ್ನು ಪೂರೈಸುವ ಪ್ರಮುಖ ರಾಷ್ಟ್ರವಾಗಿದೆ.

ಆದರೆ ಸೇನಾ ನಿರ್ವಹಣೆಗಾಗಿ ರಷ್ಯಾದ ಮೇಲೆ ಹೆಚ್ಚು ಅವಲಂಬಿತವಾಗಿರುವುದು ಭಾರತ, ಈಜಿಪ್ಟ್, ಚೀನಾ, ಕಜಕಿಸ್ತಾನ್, ಇಂಡೊನೇಷ್ಯಾ, ಇರಾನ್, ವಿಯೆಟ್ನಾಂ ಮತ್ತಿತರ ದೇಶಗಳು. 19ನೇ ಶತಮಾನದಲ್ಲಿ ಅಮೆರಿಕದ ಜತೆಗೆ ವೈರತ್ವ ಇಲ್ಲವೇ ಸೇನಾ ಸಂಘರ್ಷ ಹೊಂದಿದ್ದ ಬಹುತೇಕ ರಾಷ್ಟ್ರಗಳು ತಮ್ಮ ಸೇನೆಗಳ ಶಸ್ತ್ರಾಗಾರಗಳ ನಿರ್ವಹಣೆಗಾಗಿ ರಷ್ಯಾವನ್ನು ಅವಲಂಬಿಸಿವೆ. ಹೀಗಾಗಿ ಅಮೆರಿಕದಷ್ಟು ಭಾರಿ ಪ್ರಾಬಲ್ಯ ಹೊಂದಿಲ್ಲದಿದ್ದರೂ, ರಷ್ಯಾ ಜಾಗತಿಕವಾಗಿ ಪ್ರಭಾವ ಹೊಂದಿದೆ.

ಇಡೀ ಜಗತ್ತಿನ ತೈಲ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುವ ಒಪೆಕ್+ ದೇಶಗಳಲ್ಲಿ (ತೈಲ ಉತ್ಪಾದನೆ ಮತ್ತು ರಫ್ತು ದೇಶಗಳು) ರಷ್ಯಾ ಸಹ ಒಂದು. ಯೂರೋಪ್‌ನ ಬಹುತೇಕ ಎಲ್ಲಾ ರಾಷ್ಟ್ರಗಳಿಗೆ ರಷ್ಯಾ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲವನ್ನು ಪೂರೈಸುತ್ತದೆ. ದಕ್ಷಿಣ ಏಷ್ಯಾ, ಆಗ್ನೇಯ ಏಷ್ಯಾ, ಲ್ಯಾಟಿನ್ ಅಮೆರಿಕದ ದೇಶಗಳು ಮತ್ತು ಪಶ್ಚಿಮ ಆಫ್ರಿಕಾದ ಹಲವು ದೇಶಗಳಿಗೆ ರಷ್ಯಾವು ಕಚ್ಚಾತೈಲವನ್ನು ಪೂರೈಸುತ್ತದೆ. ಈ ದಿಸೆಯಲ್ಲಿ ರಷ್ಯಾ ಇಂದಿಗೂ ಒಂದು ಪ್ರಬಲ ಶಕ್ತಿಯಾಗಿ ಉಳಿದುಕೊಂಡಿದೆ.

ಅಫ್ಗಾನಿಸ್ತಾನದಿಂದ ಅಮೆರಿಕ ಮತ್ತು ನ್ಯಾಟೊ ಪಡೆಗಳು ನಿರ್ಗಮಿಸಿದ ನಂತರ ಮಧ್ಯಏಷ್ಯಾದಲ್ಲಿ ಶಾಂತಿ ಕಾಪಾಡುವ ಹೊಣೆ ನೆರೆಯ ದೇಶಗಳ ಹೆಗಲಿಗೆ ಬಿದ್ದಿದೆ. ಅಫ್ಗಾನಿಸ್ತಾನವು ಉಗ್ರರ ನೆಲೆಯಾಗುವುದನ್ನು ತಪ್ಪಿಸುವುದು ಹೇಗೆ ಎಂಬುದನ್ನು ರಷ್ಯಾ, ಭಾರತ ಮತ್ತು ಚೀನಾ ಕೂತು ಚರ್ಚಿಸಿವೆ. ರಷ್ಯಾವೇ ಈ ಮಾತುಕತೆಯ ಮುಂದಾಳತ್ವ ವಹಿಸಿತ್ತು. ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ರಷ್ಯಾ ಈ ಮೂಲಕ ಯತ್ನಿಸಿದೆ. ಆದರೆ ಇದಕ್ಕಾಗಿ, ಏಷ್ಯಾದಲ್ಲಿ ದೊಡ್ಡ ಶಕ್ತಿಗಳಲ್ಲಿ ಒಂದಾಗಿರುವ ಭಾರತವನ್ನು ಪ್ರಾದೇಶಿಕ ಶಾಂತಿ ಪಾಲನೆಯಲ್ಲಿ ಒಳಗೊಳ್ಳುವುದು ರಷ್ಯಾಕ್ಕೆ ಅನಿವಾರ್ಯ.



ಪುಟಿನ್– ಮೋದಿ

ಶಸ್ತ್ರಾಗಾರ ನಿರ್ವಹಣೆಗೆ ರಷ್ಯಾ ಸಂಬಂಧ ಅನಿವಾರ್ಯ

ರಷ್ಯಾ ಮತ್ತು ಚೀನಾ ಸಂಬಂಧ ಉತ್ತಮವಾಗಿದೆ. ಈಗ ಚೀನಾ ಜತೆಗೆ ಗಡಿ ಸಂಘರ್ಷದ ಕಾರಣ, ಭಾರತ ಮತ್ತು ಚೀನಾ ಸಂಬಂಧ ಹಳಿತಪ್ಪಿದೆ. ಆದರೆ ಚೀನಾದ ಆಪ್ತ ರಾಷ್ಟ್ರವಾಗಿರುವ ರಷ್ಯಾದ ಜತೆಗೆ ರಕ್ಷಣಾ ಸಹಕಾರ ಒಪ್ಪಂದವನ್ನು ಹತ್ತು ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ.

ಭಾರತೀಯ ಭೂಸೇನೆಯಲ್ಲಿರುವ ಟ್ಯಾಂಕ್‌ಗಳು, ಟ್ರಕ್‌ಗಳು, ಫಿರಂಗಿಗಳಲ್ಲಿ ರಷ್ಯಾದ್ದೇ ಸಿಂಹಪಾಲು. ಇನ್ನು ವಾಯುಪಡೆ ಮತ್ತು ನೌಕಾಪಡೆಗಳಲ್ಲಿ ಇರುವ ಹೆಲಿಕಾಪ್ಟರ್‌ಗಳು, ಯುದ್ಧ ವಿಮಾನಗಳಲ್ಲಿ ಬಹುತೇಕವು ರಷ್ಯಾ ನಿರ್ಮಿತವೇ ಆಗಿವೆ. ಐದಾರು ದಶಕಗಳ ಹಿಂದೆ ಖರೀದಿಸಲಾದ ಇವುಗಳನ್ನು ಈಗಲೂ ಬಳಸಲಾಗುತ್ತಿದೆ. ಇವುಗಳಿಗೆ ಅಗತ್ಯವಿರುವ ಬಿಡಿಭಾಗಗಳು, ಶಸ್ತ್ರಾಸ್ತ್ರಗಳು ಮತ್ತು ಮದ್ದು–ಗುಂಡುಗಳಿಗಾಗಿ, ರಷ್ಯಾ ಜತೆಗೆ ಭಾರತವು ರಕ್ಷಣಾ ವಾಣಿಜ್ಯ ಸಂಬಂಧವನ್ನು ಮುಂದುವರಿಸುವುದು ಅನಿವಾರ್ಯವಾಗಿದೆ. ಜತೆಗೆ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗಾಗಿ ರಷ್ಯಾ ಜತೆಗೆ ಉತ್ತಮ ಸಂಬಂಧ ಕಾಯ್ದುಕೊಳ್ಳುವ ಅಗತ್ಯವೂ ಇದೆ.

ಭಾರತಕ್ಕೆ ಈಗ ತೀವ್ರತರವಾದ ಗಡಿತಂಟೆ ಇರುವುದು ಪಾಕಿಸ್ತಾನ ಮತ್ತು ಚೀನಾ ಜತೆಗೆ ಮಾತ್ರ. ಭಾರತದ ಜತೆಗಿನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಚೀನಾ ತಂಟೆ ಮಾಡುತ್ತಲೇ ಇದೆ. ಎಲ್‌ಎಸಿಯ ಉದ್ದಕ್ಕೂ ಚೀನಾ ತನ್ನ ಸೇನಾ ಇರುವಿಕೆಯನ್ನು ಹೆಚ್ಚಿಸುತ್ತಿದೆ. ಜತೆಗೆ ತನ್ನ ನೆಲದ ಯಾವುದೇ ಪ್ರದೇಶದಿಂದಲಾದರೂ ಭಾರತದ ಮೇಲೆ ಕ್ಷಿಪಣಿ ದಾಳಿ ನಡೆಸಬಹುದಾದ ಪ್ರಬಲ ಕ್ಷಿಪಣಿಗಳನ್ನು ಹೊಂದಿದೆ. ಹೀಗಾಗಿ ಅಂತಹ ಕ್ಷಿಪಣಿಗಳ ದಾಳಿಯನ್ನು ತಡೆಯಬಹುದಾದ ಕ್ಷಿಪಣಿ ನಿರೋಧಕ ವ್ಯವಸ್ಥೆ ಭಾರತಕ್ಕೆ ಅನಿವಾರ್ಯವಾಗಿದೆ. ರಷ್ಯಾದ ಎಸ್–400 ಟ್ರಯಂಫ್ ಮಾತ್ರವೇ ಜಗತ್ತಿನ ಅತ್ಯಂತ ಪ್ರಬಲ ಕ್ಷಿಪಣಿ ನಿರೋಧಕ ವ್ಯವಸ್ಥೆ ಎನಿಸಿದೆ. ಹೀಗಾಗಿ ಅನಿವಾರ್ಯವಾಗಿ ಈ ಕ್ಷಿಪಣಿ ವ್ಯವಸ್ಥೆಯನ್ನು ಭಾರತವು ಖರೀದಿಸಿದೆ.

ಭಾರತವು ಅಮೆರಿಕದ ಜತೆಗೆ ಶಸ್ತ್ರಾಸ್ತ್ರ ಮತ್ತು ಸೇನಾ ಸಲಕರಣೆಗಳ ಖರೀದಿಗೆ ಹಲವು ಬಾರಿ ಯತ್ನಿಸಿದೆ. ಆದರೆ ಅಮೆರಿಕವೇ ಇದಕ್ಕೆ ಸರಿಯಾಗಿ ಸ್ಪಂದಿಸಿಲ್ಲ. ರಷ್ಯಾದ ಎಸ್–400 ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆಯಂತಹ, ಥಾಡ್ ಎಂಬ ವ್ಯವಸ್ಥೆಯನ್ನು ಅಮೆರಿಕ ಹೊಂದಿದೆ. ಆದರೆ ಭಾರತಕ್ಕೆ ಅದನ್ನು ಮಾರಾಟ ಮಾಡಲು ಅಮೆರಿಕ ಯಾವುದೇ ಆಸಕ್ತಿ ತೋರಲಿಲ್ಲ. ಯುದ್ಧವಿಮಾನಗಳ ಖರೀದಿಗೆ ಭಾರತ ಟೆಂಡರ್ ಕರೆದಾಗಲೂ ಅಮೆರಿಕದ ಕಂಪನಿಗಳು ಅದರಲ್ಲಿ ಭಾಗಿಯಾಗಲಿಲ್ಲ. ಈಗ ಬಾಂಬರ್ ಡ್ರೋನ್ ಖರೀದಿಗೆ ಭಾರತ ಆಸಕ್ತಿ ತೋರುತ್ತಿದ್ದರೂ, ಒಪ್ಪಂದಕ್ಕೆ ಸಹಿ ಹಾಕುವುದುನ್ನು ಅಮೆರಿಕ ಮುಂದೂಡುತ್ತಲೇ ಇದೆ.

ಈ ಎಲ್ಲಾ ಕಾರಣಗಳಿಂದಾಗಿ, ಭಾರತವು ತನ್ನ ಶಸ್ತ್ರಾಗಾರವನ್ನು ಸಜ್ಜಾಗಿ ಇರಿಸಿಕೊಳ್ಳಲು ರಷ್ಯಾವನ್ನು ಅವಲಂಬಿಸುವುದು ಅನಿವಾರ್ಯವೇ ಆಗಿದೆ.

ವರದಿ: ಹಮೀದ್ ಕೆ., ಜಯಸಿಂಹ ಆರ್.

ಆಧಾರ: ಸಿಪ್ರಿ, ಪಿಟಿಐ, ರಾಯಿಟರ್ಸ್, ಭಾರತದ ವಿದೇಶಾಂಗ ಸಚಿವಾಲಯ

ಪ್ರಜಾ ಮತ

ಜನತಂತ್ರದ ಹಬ್ಬ 2021

ಉತ್ತರ ಪ್ರದೇಶ: ಇಬ್ಬರು ಶಾಸಕರು ಎಸ್‌ಪಿಗೆ ಸೇರ್ಪಡೆ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವ ಸಮಯದಲ್ಲೇ ಇಬ್ಬರು ಶಾಸಕರು ಭಾನುವಾರ ಸಮಾಜವಾದಿ ಪಕ್ಷ (ಎಸ್‌ಪಿ) ಸೇರಿದರು.

ಬಿಎಸ್‌ಪಿಯಿಂದ ಇತ್ತೀಚೆಗಷ್ಟೇ ಉಚ್ಚಾಟಿತರಾಗಿದ್ದ ಚಿಲ್ಲುಪುರ್ ಕ್ಷೇತ್ರದ ಶಾಸಕ ವಿನಯ್ ಶಂಕರ್ ತಿವಾರಿ ಮತ್ತು ಬಿಜೆಪಿ ತೊರೆದ ಖಲೀಲಾಬಾದ್ ಶಾಸಕ ದಿಗ್ವಿಜಯ್ ನಾರಾಯಣ್ ಎಸ್‌ಪಿ ಸೇರಿದರು. ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರಿಬ್ಬರನ್ನೂ ಎಸ್‌ಪಿ ಕಚೇರಿಯಲ್ಲಿ ಪಕ್ಷಕ್ಕೆ ಬರಮಾಡಿಕೊಂಡರು.

ಅವರಿಬ್ಬರ ಜೊತೆ, ಉತ್ತರ ಪ್ರದೇಶ ವಿಧಾನ ಪರಿಷತ್ ಮಾಜಿ ಸದಸ್ಯ ಗಣೇಶ್ ಶಂಕರ್ ಪಾಂಡೆ ಕೂಡಾ ಬಿಎಸ್‌ಪಿ ತೊರೆದು ಎಸ್‌ಪಿ ಸೇರಿದರು. ಈ ಎಲ್ಲಾ ಪ್ರಮುಖ ಮುಖಂಡರ ಜೊತೆ, ಬ್ರಾಹ್ಮಣ ಸಮುದಾಯದ ಹಲವಾರು ಮುಖಂಡರು ವಿವಿಧ ಪಕ್ಷಗಳನ್ನು ತೊರೆದು ಎಸ್‌ಪಿ ಸೇರಿದ್ದಾರೆ ಎನ್ನಲಾಗಿದೆ.

ಪಕ್ಷದಲ್ಲಿ ಅಶಿಸ್ತಿಗೆ ಕಾರಣವಾಗಿರುವ ನೆಪ ನೀಡಿ ಕಳೆದ ಸೋಮವಾರವಷ್ಟೇ ಬಿಎಸ್‌ಪಿಯು ಶಾಸಕ ವಿನಯ್ ಶಂಕರ್ ತಿವಾರಿ, ಅವರ ಸಹೋದರ, ಮಾಜಿ ಸಂಸದ ಕುಶಾಲ್ ತಿವಾರಿ ಮತ್ತು ಸಂಬಂಧಿ ಪಾಂಡೆ ಅವರನ್ನು ಪಕ್ಷದಿಂದ ಉಚ್ಚಾಟಿಸಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಅಖಿಲೇಶ್ ಯಾದವ್ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. 'ಬ್ರಿಟಿಷರ ಒಡೆದು ಆಳುವ ನೀತಿಯ ಮಾದರಿಯಲ್ಲೇ ಜನರನ್ನು ಹೆದರಿಸಿ ಮತ್ತು ಕೊಂದು ಬಿಜೆಪಿ ಆಡಳಿತ ನಡೆಸುತ್ತಿದೆ. ಮುಂದಿನ ಚುನಾವಣೆಯಲ್ಲಿ ಜನರು ಬಿಜೆಪಿಗೆ ಪಾಠ ಕಲಿಸಲಿದ್ದಾರೆ' ಎಂದರು.

'ಬಿಜೆಪಿಗೆ ಈಗ ಯಾರೂ ಮತ ಹಾಕುವುದಿಲ್ಲ'

● ಸಂಜಯ್ ಪಾಂಡೆ



ಪ್ರಜಾವಾಣಿ ಸಂದರ್ಶನ

ಓಂ ಪ್ರಕಾಶ್ ರಾಜ್‌ಭರ್, ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ಮುಖ್ಯಸ್ಥ

ಬಿಜೆಪಿಯ ಮಿತ್ರಪಕ್ಷವಾಗಿದ್ದ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್ ಈಗ ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ಯೋಗಿ ಆದಿತ್ಯನಾಥ ಅವರ ಸರ್ಕಾರದಲ್ಲಿ ಸಚಿವರಾಗಿದ್ದ ಓಂ ಪ್ರಕಾಶ್ ಅವರು, 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯ ಕಟುಟೀಕಾಕಾರರಾಗಿ ಬದಲಾಗಿದ್ದರು. ನಂತರ ಅವರನ್ನು ಸಂಪುಟದಿಂದ ವಜಾ ಮಾಡಲಾಗಿತ್ತು. ಉತ್ತರ ಪ್ರದೇಶದ ಪೂರ್ವಾಂಚಲದಲ್ಲಿ ರಾಜ್‌ಭರ್ ಸಮುದಾಯದ ಮತದಾರರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ರಾಜ್ಯದ ಒಟ್ಟು ಮತದಾರರಲ್ಲಿ ಶೇ 4ರಷ್ಟು ಪಾಲನ್ನು ಈ ಸಮುದಾಯ ಹೊಂದಿದೆ. ಈ ಸಮುದಾಯದ ಪ್ರಭಾವಿ ನಾಯಕ ಸಮಾಜವಾದಿ ಪಕ್ಷ ಸೇರಿರುವುದು ಈಗ ಬಿಜೆಪಿಗೆ ದೊಡ್ಡ ಹಿನ್ನಡೆಯೇ ಆಗಿದೆ.

● ನೀವು ಬಿಜೆಪಿ ಜತೆ ಮೈತ್ರಿ ಮುರಿದುಕೊಂಡಿದ್ದೇಕೆ?

ರಾಜ್‌ಭರ್, ನಿಶಾದ್, ಗೊಂಡ ಸಮುದಾಯಗಳಿಗೆ ಮೀಸಲಾತಿ ನೀಡುವುದಾಗಿ ಬಿಜೆಪಿ ಭರವಸೆ ನೀಡಿತ್ತು. ಆದರೆ ಮೀಸಲಾತಿ ನೀಡಲಿಲ್ಲ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಜಾತಿ ಗಣತಿಯನ್ನೂ ನಡೆಸಲಿಲ್ಲ. ಈ ಸಮುದಾಯಗಳಿಗೆ ನೀಡಬೇಕಾಗಿರುವುದನ್ನು ನೀಡಿ ಎಂಬುದೇ ನನ್ನ ಒತ್ತಾಯ. ಈ ಮೈತ್ರಿಯನ್ನು ಬಿಡುವುದರ ಹೊರತಾಗಿ ಬೇರೆ ಆಯ್ಕೆ ನನ್ನ ಮುಂದೆ ಇರಲಿಲ್ಲ.

● ಸಮಜವಾದಿ ಪಕ್ಷದ ಜತೆಗಿನ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ, ನಿಮಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವ ಭರವಸೆಯನ್ನು ಅಖಿಲೇಶ್ ಯಾದವ್ ನೀಡಿದ್ದಾರೆಯೇ?

ನಾನು ಯಾವತ್ತೂ ಅಂತಹ ಬೇಡಿಕೆಯನ್ನು ಇಟ್ಟಿಲ್ಲ. ನಮ್ಮ ಮೈತ್ರಿ, ವಿಚಾರ ಆಧಾರಿತವಾದುದು. ನಮ್ಮ ಮೈತ್ರಿಕೂಟವು ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

● ನಿಮ್ಮ ಮೈತ್ರಿಕೂಟವು ಪೂರ್ವಾಂಚಲದಲ್ಲಿ ಎಷ್ಟು ಸ್ಥಾನ ಗೆಲ್ಲಲಿದೆ?

ಈಗ ಯಾರೂ ಬಿಜೆಪಿಗೆ ಮತ ನೀಡುವುದಿಲ್ಲ. ದಿನಬಳಕೆ ವಸ್ತುಗಳ ಬೆಲೆ ಬಿಜೆಪಿ ಆಡಳಿತಾವಧಿಯಲ್ಲಿ ಗಗನಕ್ಕೇರಿದೆ. ಈ ಸರ್ಕಾರವು ರೈತ ವಿರೋಧಿ ಮತ್ತು ತನ್ನ ಸ್ನೇಹಿತ ಉದ್ಯಮಿಗಳ ಹಿತಾಸಕ್ತಿಯನ್ನಷ್ಟೇ ನೋಡುತ್ತದೆ. ರೈತರ ಭೂಮಿಯನ್ನು ಖರೀದಿಸಿ, ಈ ಉದ್ಯಮಿಗಳಿಗೆ ನೀಡಲು ಮುಂದಾಗಿದೆ. ಚುನಾವಣೆ ಬಂದಾಗ ಬಿಜೆಪಿಯು ಖಬರಸ್ಥಾನ, ಮುಸ್ಲಿಮರು ಮತ್ತು ಮಸೀದಿಗಳ ಬಗ್ಗೆ ಮಾತ್ರ ಮಾತನಾಡುತ್ತದೆ. ಜನರಿಗೆ ತೋರಿಸಲು ಬಿಜೆಪಿ ಬಳಿ ಏನೂ ಇಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256


ತಮಿಳುನಾಡಿನಲ್ಲಿ ನಡೆದ ಸೇನಾ ಹೆಲಿಕಾಪ್ಟರ್ ಪತನದಲ್ಲಿ ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಮತ್ತು ಅವರ ಪತ್ನಿ ಮಧುಲಿಕಾ ರಾವತ್ ಮೃತಪಟ್ಟ ಬಳಿಕ, ಎನ್‌ಡಿ ಟಿ.ವಿ.ಯ ಪತ್ರಕರ್ತ ರವೀಶ್ ಕುಮಾರ್ ನೀಡಿದ್ದಾರೆ ಎನ್ನಲಾದ ಹೇಳಿಕೆಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಲ್ಲದೇ, ಈ ಹೇಳಿಕೆಗೆ ಖಂಡನೆ ಕೂಡಾ ವ್ಯಕ್ತವಾಗುತ್ತಿದೆ. 'ಬಿಪಿನ್ ರಾವತ್ ಅವರ ಪತ್ನಿ ಏಕೆ ಸೇನಾ ವಿಮಾನದಲ್ಲಿ ಇದ್ದರು' ಎಂದು ರವೀಶ್ ಕುಮಾರ್ ಪ್ರಶ್ನಿಸಿದ್ದಾರೆ ಎಂದು ವೈರಲ್ ಆಗಿರುವ ಟ್ವೀಟ್‌ಗಳಲ್ಲಿ ಹೇಳಲಾಗಿದೆ.



ರವೀಶ್ ಕುಮಾರ್

ತಾವು ಈ ಹೇಳಿಕೆ ನೀಡಿಲ್ಲ ಎಂದು ಸ್ವತಃ ರವೀಶ್ ಕುಮಾರ್ ಅವರೇ ಆಲ್ಟ್‌ನ್ಯೂಸ್‌ಗೆ ಮಾಹಿತಿ ನೀಡಿದ್ದಾರೆ. ಹೆಲಿಕಾಪ್ಟರ್ ದುರಂತದ ಕುರಿತು ಡಿ.8ರಂದು ರವೀಶ್ ಕುಮಾರ್ ಅವರು ಫೇಸ್‌ಬುಕ್‌ನಲ್ಲಿ ಕಿರುಬರಹ ಬರೆದಿದ್ದರು ಮತ್ತು ಈ ಘಟನೆಯ ಕುರಿತು ಎನ್‌ಡಿ ಟಿ.ವಿ. ಪ್ರೈಮ್‌ಟೈಮ್ ಕಾರ್ಯಕ್ರಮದಲ್ಲಿ ಮಾತನಾಡಿದ್ದರು. ಆದರೆ ಈ ರೀತಿಯ ಹೇಳಿಕೆಯನ್ನು ಅವರು ಎಲ್ಲಿಯೂ ನೀಡಿಲ್ಲ. ಅಲ್ಲದೇ, ತಮ್ಮ ಹೆಸರಿನಲ್ಲಿ ಸುಳ್ಳು ಹೇಳಿಕೆ ಹರಿದಾಡುತ್ತಿರುವ ಕುರಿತು ಇದೇ 10ರಂದು ಸ್ವತಃ ಅವರೇ ಪ್ರೈಮ್‌ಟೈಮ್‌ನಲ್ಲಿ ಮಾತನಾಡಿದ್ದರು ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ಸೋಮವಾರ ಡಿಸೆಂಬರ್ 13, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮೃಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ದಶಮಿ ಗಂ. 43-39 (ರಾ. 12-07) ಸೋಮವಾರ ನಿತ್ಯ ನಕ್ಷತ್ರ ರೇವತಿ ಗಂ. 55-45 (ರಾ. 4-57) ವ್ಯತೀಪಾತ ನಾಮ ಯೋಗ ಗಂ. 7-45 ತೈತಲ ಕರಣ ಗಂ. 13-9 ವಿಷ ಗಂ. 24-39 ಅಮೃತ ಗಂ 49-51 : ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-35 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 2, 6

ಮೇಷ: ದಿನದ ಮೊದಲ ಭಾಗ ಅತಿಯಾದ ಶ್ರಮದಾಯಕವಾಗಿದ್ದರೂ ನಂತರ ಎಲ್ಲವೂ ಸುಸೂತ್ರವಾಗಿ ನಿರಾಳತೆ ಮೂಡಿಬರುವುದು. ಎಲ್ಲ ಕಿರಿಕಿರಿಗಳನ್ನೂ ಶಾಂತ ರೀತಿಯಿಂದ ಎದುರಿಸಿ ಯಶಸ್ಸನ್ನು ಸಂಪಾದಿಸುವಿರಿ.

ವೃಷಭ: ಕೈಗೊಂಡ ಬಹುಮುಖ್ಯವಾದ ಯೋಜನೆಯೊಂದನ್ನು ಪೂರ್ಣಗೊಳಿಸುವ ಸಾಧ್ಯತೆ. ಕೆಲಸ–ಕಾರ್ಯಗಳು ತ್ವರಿತಗತಿಯಲ್ಲಿ ಸುಗಮವಾಗಿ ನೆರವೇರುವವು. ಆರೋಗ್ಯ ಸಿಬ್ಬಂದಿಗಳಿಗೆ ಹೆಚ್ಚಿನ ಅನುಕೂಲತೆ.

ಮಿಥುನ: ವಿಹಾರ ಮತ್ತು ಔತಣಕೂಟಗಳನ್ನು ಏರ್ಪಡಿಸುವ ಹಾಗೂ ಸಕ್ರಿಯ ಭಾಗವಹಿಸುವ ಸಾಧ್ಯತೆ. ರಾಜಕಾರಣಿಗಳಿಗೆ ಕೆಲಸದ ಒತ್ತಡ ಹೆಚ್ಚಿ ದೇಹಾಯಾಸಗೊಳ್ಳುವುದು. ಸ್ಪರ್ಧಾತ್ಮಕ ವಾತಾವರಣ ಮೂಡುವುದು.

ಕರ್ಕಾಟಕ: ಬಹು ಬೇಗನೆ ಗುರಿ ತಲುಪಬೇಕೆಂಬ ಧಾವಂತದ ನಡೆಯಿಂದಾಗಿ ಆತಂಕಗಳು ಎದುರಾಗುವ ಸಾಧ್ಯತೆ. ಮಾನಸಿಕ ದೃಢತೆಯಿಂದಾಗಿ ಯಶಸ್ಸು. ಮನೆಯಲ್ಲಿ ಧಾರ್ಮಿಕ ಕಾರ್ಯ ನಡೆಯುವ ಸಾಧ್ಯತೆ.

ಸಿಂಹ: ಸಂತೋಷದ ಸುದ್ದಿಯೊಂದು ನಿಮ್ಮನ್ನು ತಲುಪುತ್ತದೆ. ಮಹತ್ತರ ಸನ್ನಿವೇಶದಲ್ಲಿ ರಕ್ಷಕರಾಗಿ ಕಾರ್ಯನಿರ್ವಹಿಸುವ ಅವಕಾಶ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ಅಪರೂಪದ ವ್ಯಕ್ತಿಗಳ ದರ್ಶನ ಭಾಗ್ಯ.

ಕನ್ಯಾ: ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಉದ್ಯೋಗದಲ್ಲಿ ಬದಲಾವಣೆಗೆ ಮನಸ್ಸು ಮಾಡುವ ಸಾಧ್ಯತೆ. ಯೋಜನೆಗಳಿಗೆ ಶೀಘ್ರ ಫಲಿತಾಂಶ. ನೆರೆಹೊರೆಯವರೊಂದಿಗಿನ ಸಂಬಂಧದಲ್ಲಿ ಹೊಂದಾಣಿಕೆ ವೃದ್ಧಿಯಾಗುವುದು.

ತುಲಾ: ಆತ್ಮವಿಶ್ವಾಸ ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಯನ್ನು ತುಳಿಯುವಿರಿ. ವ್ಯವಹಾರ ನಿಮಿತ್ತ ಕೆಲವು ಪ್ರಮುಖ ವ್ಯಕ್ತಿಗಳನ್ನು ಭೇಟಿಯಾಗುವ ಸಾಧ್ಯತೆ. ನೆನೆಸಿಕೊಂಡ ಕೆಲಸ ಕಾರ್ಯಗಳು ಪ್ರಗತಿ.

ವೃಶ್ಚಿಕ: ಮಾಧ್ಯಮದವರ ಸಹಕಾರದಿಂದಾಗಿ ಹೆಚ್ಚಿನ ಪ್ರಚಾರ. ವಿರೋಧಿಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಬೇಕಾದೀತು. ಕಾರ್ಮಿಕ ವರ್ಗದವರಿಗೆ ಕೆಲಸದಲ್ಲಿ ಹೆಚ್ಚಳದಿಂದಾಗಿ ದೇಹಾಯಾಸ.

ಧನು: ಹೊಸ ಮನೆ ನಿರ್ಮಾಣಕ್ಕಾಗಿ ಬಿಡುವಿಲ್ಲದ ಓಡಾಟ. ಗೃಹ ನಿರ್ಮಾಣಕ್ಕೆ ಸಂಬಂಧಿಸಿದ ಅಧಿಕಾರಿ ವರ್ಗದವರೊಂದಿಗೆ ಚರ್ಚೆಯ ಸಾಧ್ಯತೆ. ನೆಂಟರಿಷ್ಟರಿಂದ ಸಹಕಾರ ದೊರೆತು ಯಶಸ್ಸಿನ ಮಾರ್ಗ.

ಮಕರ: ಕೃಷಿಕರ ವರಮಾನದಲ್ಲಿ ಹೆಚ್ಚಳ. ಮಕ್ಕಳ ಭವಿಷ್ಯದ ಬಗ್ಗೆ ಯೋಜನೆಗಳನ್ನು ರೂಪಿಸಲು ಸಕಾಲ. ಪದೋನ್ನತಿಯ ಅವಕಾಶಗಳು ಹೆಚ್ಚಾಗಿದೆ. ಗಣ್ಯ ವ್ಯಕ್ತಿಗಳಿಂದ ಪ್ರಶಂಸೆಯ ಮಹಾಪೂರವೇ ಹರಿದೀತು.

ಕುಂಭ: ಹೊಸ ಯೋಜನೆಯೊಂದನ್ನು ಕೈಗೊಳ್ಳುವ ಮೂಲಕ ಜೀವನೋಪಾಯಕ್ಕೊಂದು ಹೊಸ ಮಾರ್ಗ ಗೋಚರವಾಗುವ ಸಾಧ್ಯತೆ. ಸಂಗಾತಿಯಿಂದ ಸಕಾರಾತ್ಮಕ ಸಹಕಾರ ದೊರೆತು ಸಂತೃಪ್ತಿ.

ಮೀನ: ಅನಿರೀಕ್ಷಿತ ಕೆಲಸವೊಂದನ್ನು ಮಾಡಬೇಕಾದೀತು. ಆರ್ಥಿಕ ಉನ್ನತಿಗೆ ಅವಕಾಶಗಳು ವಿಪುಲವಾಗಿ ದೊರಕುವುದರಿಂದ ಸೂಕ್ತ ಆಯ್ಕೆ ಮಾಡಿಕೊಳ್ಳುವಲ್ಲಿ ಗೊಂದಲಕ್ಕೊಳಗಾಗುವ ಸಾಧ್ಯತೆ. ವಿಚಾರ ಮಾಡಿ ಹೆಜ್ಜೆ ಇಡಿ.

ನಿಮ್ಮ ಜನ್ಮದಿನ 13-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ತಾಳ್ಮೆಯಿಂದ ನೀವು ಮಾಡುವ ಎಲ್ಲಾ ಕೆಲಸದಲ್ಲಿ ಜಯ ನಿಶ್ಚಿತವಾಗಿ ದೊರಕಲಿದೆ. ಹೊಸ ಹೊಸ ಯೋಜನೆಗಳನ್ನು ರೂಪಿಸಲು ಸಕಾಲ. ವಿದೇಶದಲ್ಲಿರುವ ಮಕ್ಕಳನ್ನು ಭೇಟಿಯಾಗುವ ಸಾಧ್ಯತೆ. ಶುಭ ಸಮಾರಂಭಗಳು ಏರ್ಪಟ್ಟು ಸದಾ ಕಾರ್ಯಚಟುವಟಿಕೆಯಿಂದ ಕೂಡಿರುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅನುಭವಗಳ ತೆರೆಸಾಲು

ಮನುಜಸಾಕಲ್ಯದನುಭವಕೆ ಮಿತಿಗೊತ್ತುಂಟೆ ? |
ದಿನದಿನವು ಕಡಲಲೆಗಳಂತೆ ಪರಿವುದದು ||
ಅನುಮಿತಿಯ ನಿರ್ಧಾರರವದರಿಂ ನಿರಾಧಾರ |
ದನಿ ನೂರು ನರನೆದೆಗೆ – ಮಂಕುತಿಮ್ಮ || 517 ||

ಪದ-ಅರ್ಥ: ಮನುಸಾಕಲ್ಯದನುಭವಕೆ = ಮನುಜ = ಸಾಕಲ್ಯದ(ಸಮಗ್ರತೆಯ) + ಅನುಭವಕೆ, ಪರಿವುದದು = ಪರಿವುದು(ಹರಿವುದು) + ಅದು, ಅನುಮಿತಿ = ಊಹೆ, ಅನುಮಾನ, ನಿರ್ಧಾರವದರಿಂ = ನಿರ್ಧಾರವು + ಅದರಿಂ(ಅದರಿಂದ), ನರನೆದೆಗೆ = ನರನ + ಎದೆಗೆ.

ವಾಚ್ಯಾರ್ಥ: ಮನುಷ್ಯನ ಸಮಗ್ರದ ಅನುಭವಕ್ಕೆ ಮಿತಿ ಏನಾದರೂ ಇದೆಯೆ? ನಿತ್ಯವೂ ಅದು ಸಮುದ್ರದ ಅಲೆಗಳಂತೆ ಹರಿಯುತ್ತದೆ. ಹೀಗೆ ಚಂಚಲವಾದ, ಮಿತಿಯಿಲ್ಲದ ಊಹೆಗಳಿಂದ ಯಥಾರ್ಥವನ್ನು ತೀರ್ಮಾನಿಸುವುದು ನಿರಾಧಾರ. ಮನುಷ್ಯನ ಹೃದಯಕ್ಕೆ ನೂರಾರು ಭಾವನೆಯ ಧ್ವನಿಗಳು.

ವಿವರಣೆ: ಲೋಕದಲ್ಲಿ ಎಷ್ಟು ಜನರಿದ್ದಾರೋ, ಅಷ್ಟು ವಿಭಿನ್ನ ಅನುಭವಗಳು. ದೃಷ್ಟಿಕೋನ ಬದಲಾದಂತೆ ಅನುಭವವೂ ಬದಲು. ಒಬ್ಬ ಮನುಷ್ಯ ಮತ್ತೊಬ್ಬನಿಗೆ ತುಂಬ ಒಳ್ಳೆಯವನಾಗಿ ಕಾಣುತ್ತಾನೆ. ಅವನ ಬಗ್ಗೆ ತುಂಬ ಅಭಿಮಾನ. ಮುಂದೊಂದು ದಿನ ತನ್ನ ಹಿಂದಿನ ತೊಂದರೆಗೆ ಅವನೇ ಕಾರಣವೆಂದು ತಿಳಿದಾಗ, ಆತ ಮಾಡಿದ್ದು, ಹೇಳಿದ್ದು ಎಲ್ಲ ಅಪಥ್ಯ. ಹಿಂದಿನ ಅನುಭವ ಕರಗಿ ಹೋಯಿತು. ಬೆಟ್ಟದ ತುದಿಯ ಮೇಲೆ ನಿಂತಿದ್ದವನಿಗೆ, ಕೆಳಗೆ ಅಡ್ಡಾಡುವ ಮನುಷ್ಯ ಪುಟ್ಟಗೊಂಬೆಯಂತೆ ಕಾಣುತ್ತಾನೆ. ಅವನನ್ನು ನೋಡಿ ನಗುತ್ತಾನೆ. ಕೆಳಗೆ ಇದ್ದವನಿಗೂ ಮೇಲೆ ಇದ್ದವನು ಗುಬ್ಬಚ್ಚಿಯಂತೆ ತೋರುತ್ತಾನೆ. ಇಬ್ಬರೂ ಸಮಾನಗಾತ್ರರೇ. ಒಬ್ಬರ ದೃಷ್ಟಿಯಲ್ಲಿ ಮತ್ತೊಬ್ಬ ಸಣ್ಣವ. ಇದು ಗಾತ್ರದಲ್ಲಿ ಮಾತ್ರ ಕಂಡ ವ್ಯತ್ಯಾಸವಲ್ಲ. ಅಹಂಕಾರದಲ್ಲಿ, ತಿಳಿವಳಿಕೆಯಲ್ಲಿಯೂ ಈ ಅನುಭವದ ವ್ಯತ್ಯಾಸ ಇದೆ.

ಉರಿಲಿಂಗಪೆದ್ದಿ, ಉರಿಲಿಂಗದೇವರ ಶಿಷ್ಯನಾಗಿದ್ದವನು. ಮೊದಲು ಅವನೊಬ್ಬ ಕಳ್ಳ. ಆಗ ಅವನ ಪ್ರಪಂಚದ ಅನುಭವವೇ ಬೇರೆ. ಹಣ, ವಸ್ತು ಕಂಡರೆ ಕದಿಯಬೇಕೆಂಬ ಭಾವ. ಧರ್ಮ, ಸಂಸ್ಕೃತಿಯ ಮಾತು ಅವನಿಗೆ ಅಪಥ್ಯ. ಒಂದು ರಾತ್ರಿ ಕಳ್ಳತನಕ್ಕೆ ಮನೆಯೊಂದನ್ನು ಸೇರಿದ. ಅಲ್ಲಿ ಮಹಾನ್ ಶರಣರೊಬ್ಬರು ಶಿವಯೋಗ ಸಾಧನೆ ಮಾಡುತ್ತಿದ್ದಾರೆ. ಮರೆನಿಂತು ಎವೆಯಿಕ್ಕದೆ ಅದನ್ನೇ ನೋಡಿದ ಕಳ್ಳ. ಅವರು ಏಕಾಗ್ರತೆಯಿಂದ ನೋಡುತ್ತಿದ್ದ ಲಿಂಗವನ್ನು, ಅವರ ಕಣ್ಣಿನ ಕಾಂತಿಯನ್ನು, ಸಾಧಕರ ಮುಖದ ಮೇಲೆ ಹೊಳೆಯುತ್ತಿದ್ದ ತೇಜಸ್ಸನ್ನು ಕಂಡ. ತನಗೂ ಅದನ್ನು ಪಡೆಯಬೇಕೆನ್ನಿಸಿತು. ಕೆಳಗಿಳಿದು ಬಂದು ಅವರ ಮುಂದೆ ಕುಳಿತ. ಗುರು ಇಷ್ಟಲಿಂಗವನ್ನು ಕೊಟ್ಟರು. ಕಳ್ಳ ಉರಿಲಿಂಗ ಪೆದ್ದಿ ಶರಣ ಉರಿಲಿಂಗ ಪೆದ್ದಿಯಾದ. ಅರ್ಚಿಸಿ ಅಂಗ-ಲಿಂಗ ಸಾಮರಸ್ಯ ಸಾಧಿಸಿ ಬಯಲಾದ. ಅವನ ಅನುಭವವೇ ಬೇರೆಯಾಯಿತು. ಮೊದಲು ಆಕರ್ಷಣೆಯಾಗಿದ್ದ ಧನಕನಕಗಳು ಈಗ ತ್ಯಾಜ್ಯವಸ್ತುಗಳು. ಶರಣ ಪೆದ್ದಿಗೆ ಎಲ್ಲರೂ ಸಜ್ಜನರು. ಒಂದು ಗಳಿಗೆಯಲ್ಲಾದ ಬದಲಾವಣೆ ಅವನ ಅನುಭವಗಳನ್ನೇ ಪರಿವರ್ತಿಸಿತು.

ಈ ಮಾತನ್ನು ಕಗ್ಗ ತಿಳಿಸುತ್ತದೆ. ಸಮುದ್ರದ ಅಲೆಗಳಂತೆ ಮನುಷ್ಯನ ಬದುಕಿನಲ್ಲಿ ಅನುಭವಗಳು ಬರುತ್ತವೆ. ಒಂದು ಮತ್ತೊಂದನ್ನು ಅಳಿಸಿ ಬಿಡುತ್ತದೆ. ಈ ಅನುಭವಗಳ ಸಮಗ್ರತೆಗೆ ಏನಾದರೂ ಮಿತಿ ಇದೆಯೆ? ಬದುಕು ಪ್ರತಿಕ್ಷಣ ಬದಲಾಗುವ ಮೂಸೆಯಲ್ಲಿಯ ವಸ್ತು. ಹೀಗೆ ಸದಾ ಪರಿವರ್ತಿತವಾಗುವ, ಚಂಚಲವಾಗಿರುವ ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಇದೇ ಪರಮಸತ್ಯ ಎಂದು ತೀರ್ಮಾನ ಮಾಡುವುದು ಸಾಧ್ಯವಲ್ಲ.

ಪದಬಂಧ 4806


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರಸವಾದ ವಿದ್ಯೆ (5)
3.ಆನೆಯ ಮರಿ ಇಲ್ಲಿದೆ (3)
5.ವಿವಾದದಲ್ಲಿ ಅಂತ್ಯಗೊಂಡಿರುವ ಚರ್ಚೆ! (2)
6.ಭರವಸೆ ನೀಡಿರುವ ಧ್ವನಿ! (2)
10.ಎಣ್ಣೆಯನ್ನು ಶುದ್ಧೀಕರಿಸುವ ಕಾರ್ಖಾನೆ (7)
13.ನೀರೆತ್ತಲು ಬಾವಿಗೆ ಅಳವಡಿಸುವ ಚಕ್ರ (2)
15.ಪರಂಪರೆಯಲ್ಲಿ ಜಗಳವೇ? (2)
16.ವಸ್ತುಗಳ ಭಾರವನ್ನು ತೂಗುವ ಸಾಧನ (3)
17.ಕಿವಿಯನ್ನು ಹೀಗೂ ಹೇಳುವರು (5)

ಮೇಲಿಂದ ಕೆಳಕ್ಕೆ

1.ಒಳ್ಳೆಯ ಸುದ್ದಿ (4)
2.ಕಾವುಳ್ಳ ಹೊರಗಿನ ಅಂದ! (3)
4.ವರಸೆ ತೋರಿದವನಿಗೆ ನೀಡಿದ ಆಶ್ವಾಸನೆ! (4)
7.ಆಲದ ಮರದ ಹತ್ತಿರವಿರುವ ಸೋಮಾರಿ (3)
8.ನೀಚ ವ್ಯಕ್ತಿ ಇಲ್ಲಿದ್ದಾನಲ್ಲಾ? (3)
9.ಚಿನ್ನ ಇಲ್ಲಿದೆ (3)
11.ಇಂದ್ರನ ಆನೆಯಿದು (4)
12.ಕೊನೆಗೆ ಗೆಲುವಿದ್ದರೂ ಇದು ಸೋಲು! (4)
14.ಕೊನೆಗೆ ಶವನ್ನು ಇಟ್ಟರೆ ಬಾಲ್ಯ ಕಂಡೀತೇ? (3)



4805ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕೊತವಾಲ 3.ಕರಣಿಕ 5.ವಲ್ಲರಿ 6.ಗಡುಸು 8.ಕೊರಳು 9.ವಿಚಾರ 10.ರುಜಿನ 12.ಮೊಳಕೆ 14.ಹರತಾಳ 15.ರತ್ನಾಕರ

ಮೇಲಿಂದ ಕೆಳಕ್ಕೆ: 1.ಕೊಳಗ 2.ಲವ 3.ಕರಿ 4.ಕರುಳು 7.ಸುಮನೋಹರ 8.ಕೊನೆಯುಸಿರು 9.ವಿವಾಹ 11.ನಗರ 12.ಮೊಳ 13.ಕೆರ

ಸುಡೊಕು 5192

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5191 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಮತದಾರರ ಪಟ್ಟಿ ಪರಿಷ್ಕರಣೆಗೆ ನಾಲ್ಕು ಅರ್ಹತಾ ದಿನಾಂಕ ನಿಗದಿಗೆ ಚಿಂತನೆ

ನವದೆಹಲಿ (ಪಿಟಿಐ): ಜನಪ್ರತಿನಿಧಿಗಳ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಮತದಾರರ ಪಟ್ಟಿಗೆ ಹೆಸರು ನೋಂದಣಿಗೆ ವಾರ್ಷಿಕ ನಾಲ್ಕು ಪ್ರತ್ಯೇಕ ಅರ್ಹತಾ ದಿನಾಂಕ ನಿಗದಿಪಡಿಸಲು ಕೇಂದ್ರ ಚುನಾವಣಾ ಆಯೋಗ ಚಿಂತನೆ ನಡೆಸಿದೆ.

ಈ ಕ್ರಮವು ಭವಿಷ್ಯದಲ್ಲಿ ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಏಕರೂಪದ ಮತದಾರರ ಪಟ್ಟಿ ಹೊಂದಲು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಹಕಾರಿಯಾಗಲಿದೆ ಎಂದು ಹೇಳಲಾಗಿದೆ.

ಹಾಲಿ ನಿಯಮದ ಅನುಸಾರ, ನಿರ್ದಿಷ್ಟ ವರ್ಷ ನಡೆಯುವ ಚುನಾವಣೆಗೆ ಮತದಾನದ ಹಕ್ಕು ಪಡೆಯಲು ಆ ವರ್ಷ ಅಥವಾ ಅದಕ್ಕೂ ಮೊದಲು 18 ವರ್ಷ ವಯಸ್ಸು ಪೂರ್ಣವಾದವರಷ್ಟೇ ಹೆಸರು ನೋಂದಣಿಗೆ ಅವಕಾಶವಿದೆ. ಸದ್ಯ, ಜನವರಿ 1 ಅನ್ನು ಅರ್ಹತಾ ದಿನವಾಗಿ ಪರಿಗಣಿಸಲಾಗುತ್ತದೆ. ಇದರ ಪ್ರಕಾರ, ಜನವರಿ 2ರಂದು 18 ವರ್ಷ ಪೂರ್ಣವಾಗುವವರು ಆ ವರ್ಷ ಮತದಾರ ಪಟ್ಟಿಗೆ ಹೆಸರು ನೋಂದಾಯಿಸಲು ಅವಕಾಶ ಇರುವುದಿಲ್ಲ.

ಹೀಗಾಗಿ, ಹೆಚ್ಚಿನ ಯುವಜನರು ಹೆಸರು ನೋಂದಣಿ ಮಾಡಿಸಲು ಅವಕಾಶ ಇರುವಂತೆ ಕಾಯ್ದೆಗೆ ತಿದ್ದುಪಡಿ ತಂದು ಮತದಾರರ ಪಟ್ಟಿಗೆ ಹೆಸರು ನೋಂದಣಿಗೆ ಅರ್ಹತಾ ದಿನವಾಗಿ ಜನವರಿ 1, ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1 ಅನ್ನು ನಿಗದಿಪಡಿಸಬಹುದು ಎಂದು ಕಾನೂನು ಸಚಿವಾಲಯ ಸಂಸದೀಯ ಸಮಿತಿಗೆ ತಿಳಿಸಿದೆ.

ನಾಲ್ಕು ಅರ್ಹತಾ ದಿನಾಂಕ ಹೊಂದುವುದು ಒಳಗೊಂಡಂತೆ ಸಮಗ್ರ ಸುಧಾರಣೆ ಕ್ರಮಗಳನ್ನು ಸಂಪುಟದ ಮುಂದಿಡಲು ಕರಡು ಪ್ರತಿಯನ್ನು ಚುನಾವಣಾ ಆಯೋಗವು ಸಿದ್ಧಪಡಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹಿಂದುತ್ವವಾದಿಗಳನ್ನು ಉಚ್ಚಾಟಿಸಿ, ಹಿಂದೂಗಳ ಆಳ್ವಿಕೆ ನೆಲೆಗೊಳಿಸಿ: ರಾಹುಲ್

‘ಭಾರತ ಹಿಂದುತ್ವವಾದಿ ದೇಶವಲ್ಲ’

ಜೈಪುರ (ಪಿಟಿಐ): ಭಾರತವು ಹಿಂದೂಗಳ ದೇಶವೇ ಹೊರತು ಹಿಂದುತ್ವವಾದಿಗಳದ್ದು ಅಲ್ಲ. ಹಿಂದುತ್ವವಾದಿಗಳನ್ನು ಅಧಿಕಾರದಿಂದ ಉಚ್ಚಾಟಿಸಿ ದೇಶದಲ್ಲಿ ಹಿಂದೂಗಳ ಆಳ್ವಿಕೆ ನೆಲೆಗೊಳಿಸಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದ್ದಾರೆ.

ಬೆಲೆ ಏರಿಕೆಯ ವಿರುದ್ಧ ಕಾಂಗ್ರೆಸ್ ಪಕ್ಷವು ಜೈಪುರದಲ್ಲಿ ಏರ್ಪಡಿಸಿದ್ದ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡಿದರು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಕಾರ್ಯಕ್ರಮದಲ್ಲಿ ಇದ್ದರು.

‘ಹಿಂದುತ್ವವಾದಿ’ ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಬೆನ್ನಿಗೆ ಇರಿದಿದ್ದಾರೆ ಮತ್ತು ಬೆರಳೆಣಿಕೆಯ ಉದ್ಯಮಿಗಳ ಪರವಾಗಿದ್ದಾರೆ ಎಂದು ರಾಹುಲ್ ಟೀಕಿಸಿದರು. ಉತ್ತರ ಪ್ರದೇಶ ಮತ್ತು ಬಿಹಾರದಂತಹ ಪ್ರಮುಖ ರಾಜ್ಯಗಳ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಇರುವಾಗ ಜೈಪುರದಲ್ಲಿ ಕಾಂಗ್ರೆಸ್ ಪಕ್ಷವು ಬಲಪ್ರದರ್ಶನಕ್ಕಾಗಿ ಸಮಾವೇಶ ಏರ್ಪಡಿಸಿದೆ.

‘ನಾನು ಹಿಂದೂ, ಆದರೆ ಹಿಂದುತ್ವವಾದಿ ಅಲ್ಲ. ಹಿಂದೂವಿನ ಹೃದಯವು ಪ್ರೀತಿಯಿಂದ ತುಂಬಿರುತ್ತದೆ. ಹಿಂದುತ್ವವಾದಿಯ ಹೃದಯದಲ್ಲಿ ಭೀತಿ ಮತ್ತು ದ್ವೇಷ ಇರುತ್ತದೆ. ಹಿಂದೂವಿಗೆ ಯಾರ ಭಯವೂ ಇರುವುದಿಲ್ಲ, ಆತ ಎಲ್ಲರನ್ನೂ ಅಪ್ಪಿಕೊಳ್ಳುತ್ತಾನೆ, ಎಲ್ಲ ಧರ್ಮಗಳನ್ನೂ ಗೌರವಿಸುತ್ತಾನೆ ಮತ್ತು ಸತ್ಯವನ್ನು ಅರಸುತ್ತಾನೆ’ ಎಂದು ರಾಹುಲ್ ಪ್ರತಿಪಾದಿಸಿದ್ದಾರೆ. ಹಿಂದೂ ಮತ್ತು ಹಿಂದುತ್ವದ ನಡುವಣ ವ್ಯತ್ಯಾಸವನ್ನು ಕೆಲವು ವಾರಗಳ ಹಿಂದೆಯೂ ರಾಹುಲ್ ವಿವರಿಸಿದ್ದರು.

> **ಹಿಂದೂ ಮತ್ತು ಹಿಂದುತ್ವದ ನಡುವೆ ವ್ಯತ್ಯಾಸ ಇದೆ. ಮಹಾತ್ಮ ಗಾಂಧಿ ಹಿಂದೂ ಆಗಿದ್ದರು. ಅವರನ್ನು ಹತ್ಯೆ ಮಾಡಿದ ನಾಥೂರಾಂ ಗೋಡ್ಸೆ ಹಿಂದುತ್ವವಾದಿಯಾಗಿದ್ದ**
> **ರಾಹುಲ್ ಗಾಂಧಿ**
> ಕಾಂಗ್ರೆಸ್ ಸಂಸದ

‘ಹಿಂದೂಗಳನ್ನು ದಮನ ಮಾಡಲು ಸಾಧ್ಯವಿಲ್ಲ. ಮೂರು ಸಾವಿರ ವರ್ಷಗಳಲ್ಲಿ ಅದು ಸಾಧ್ಯವಾಗಿಲ್ಲ, ಈಗಲೂ ಸಾಧ್ಯವಿಲ್ಲ. ನಮ ಗೆ ಸಾವಿನ ಭಯವೂ ಇಲ್ಲ’ ಎಂದರು. ‘ನಕಲಿ ಹಿಂದೂ’ಗಳನ್ನೂ ಅವರು ಟೀಕಿಸಿದರು. ಹಿಂದುತ್ವವಾದಿಗೆ ಯಾವ ಬೆಲೆ ತೆತ್ತಾದರೂ ಅಧಿಕಾರ ಪಡೆಯುವ ಆಸೆ ಇರುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಇದ್ದ ರಾಜ್ಯಗಳಲ್ಲಿ ರೈತರ ಸಾಲ ಮನ್ನಾ ಮಾಡಲಾಗಿದೆ. ಏಕೆಂದರೆ, ರೈತರು ದೇಶದ ಬೆನ್ನೆಲುಬು ಎಂಬುದು ಕಾಂಗ್ರೆಸ್‌ಗೆ ಗೊತ್ತಿದೆ. ಪ್ರಧಾನಿ ಹಿಂದುತ್ವವಾದಿ ಆಗಿರುವುದರಿಂದಲೇ ರೈತರ ಬೆನ್ನಿಗೆ ಇರಿದಿದ್ದಾರೆ. ‘ಹಿಂದೂ ರೈತರು ಎದ್ದು ನಿಂತಾಗ ಹಿಂದುತ್ವವಾದಿಯು ‘ನಾನು ಕ್ಷಮೆ ಕೇಳುತ್ತೇನೆ’ ಎಂದರು’ ಎಂದು ರಾಹುಲ್ ಹೇಳಿದ್ದಾರೆ.

‘ದೇಶದಲ್ಲಿ ಹಣದುಬ್ಬರ ಇದ್ದರೆ ಸಂಕಷ್ಟ ಇರುತ್ತದೆ. ಇದು ಹಿಂದುತ್ವವಾದಿಗಳ ಕೆಲಸ. ಯಾವ ಪರಿಸ್ಥಿತಿಯೇ ಇರಲಿ, ಹಿಂದುತ್ವವಾದಿಗೆ ಅಧಿಕಾರದ ದಾಹ ಇದ್ದೇ ಇರುತ್ತದೆ’ ಎಂದು ಅವರು ಆರೋಪಿಸಿದರು. ಈ ಸಮಾವೇಶವು ಬೆಲೆ ಏರಿಕೆಯ ವಿರುದ್ಧ ಕಾಂಗ್ರೆಸ್ ಪಕ್ಷದ ಪ್ರತಿಭಟನೆ ಎಂದು ಅವರು ಬಣ್ಣಿಸಿದರು.



ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಜೈಪುರದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಭಾನುವಾರ ಪೇಟ ತೊಡಿಸಿದರು —ಪಿಟಿಐ ಚಿತ್ರ

ಭಗವದ್ಗೀತೆ ಉಲ್ಲೇಖ

ಭಗವದ್ಗೀತೆಯೇ ಇರಲಿ ರಾಮಾಯಣವೇ ಇರಲಿ. ಯಾವ ಗ್ರಂಥದಲ್ಲಿಯೂ ಬಡವರನ್ನು ಕೊಂದು ಹಾಕಿ ಮತ್ತು ತುಳಿಯಿರಿ ಎಂದು ಹೇಳಿಲ್ಲ. ಅಧಿಕಾರಕ್ಕಾಗಿ ಸಹೋದರರನ್ನೇ ಕೊಲ್ಲುವಂತೆ ಕೃಷ್ಣನು ಅರ್ಜುನನಿಗೆ ಹೇಳಿಲ್ಲ. ಸಾವು ಸಂಭವಿಸುತ್ತದೆ ಎಂದಾದರೂ ಸತ್ಯಕ್ಕಾಗಿ ಹೋರಾಡಬೇಕು ಎಂದು ಭಗವದ್ಗೀತೆಯಲ್ಲಿ ಬರೆದಿದೆ ಎಂದು ರಾಹುಲ್ ಹೇಳಿದರು.

ವಿಳಂಬವಾಗಿ ಬಂದ ಚನ್ನಿ

ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಜೈಪುರ ತಲುಪುವಾಗ ತಡವಾಗಿತ್ತು. ಸಮಾವೇಶ ಮುಗಿದಿತ್ತು ಎಂದು ಮೂಲಗಳು ಹೇಳಿವೆ. ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಅವರು ದೆಹಲಿಗೆ ಹೋಗಲು ವಿಮಾನ ನಿಲ್ದಾಣಕ್ಕೆ ತಲುಪಿದ್ದರು. ಚನ್ನಿ ಅವರು ವಿಮಾನ ನಿಲ್ದಾಣಕ್ಕೆ ಹೋಗಿ ಅವರನ್ನು ಭೇಟಿಯಾದರು.

ಪ್ರಿಯಾಂಕಾ ಅವರೂ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಕಾಂಗ್ರೆಸ್ ಪಕ್ಷವು 70 ವರ್ಷಗಳಲ್ಲಿ ಕಟ್ಟಿದ್ದನ್ನು ಮೋದಿ ನೇತೃತ್ವದ ಸರ್ಕಾರವು ತನ್ನ ‘ಕೈಗಾರಿಕೋದ್ಯಮಿ ಗೆಳೆಯ’ರಿಗೆ ಮಾರಾಟ ಮಾಡಲು ಬಯಸಿದೆ ಎಂದು ಟೀಕಿಸಿದರು. ಕೇಂದ್ರಸರ್ಕಾರ ಏಳು ವರ್ಷಗಳಲ್ಲಿ ಜನರಿಗಾಗಿ ಮಾಡಿದ್ದೇನು ಎಂದು ಪ್ರಶ್ನಿಸಿದರು.

‘ಪಾಕಿಸ್ತಾನ ವಿರುದ್ಧ ಪರೋಕ್ಷ ಯುದ್ಧವನ್ನೂ ಗೆಲ್ಲಲಿದೆ ಭಾರತ’

ನವದೆಹಲಿ (ಪಿಟಿಐ): ಪಾಕಿಸ್ತಾನದ ವಿರುದ್ಧ 1971ರಲ್ಲಿ ನಡೆದಿದ್ದ ನೇರ ಯುದ್ಧದಲ್ಲಿ ಭಾರತ ಗೆದ್ದಿತ್ತು. ಪ್ರಸ್ತುತ ನಡೆಯುತ್ತಿರುವ ಪರೋಕ್ಷ ಯುದ್ಧದಲ್ಲಿಯೂ ಗೆಲ್ಲಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

1971ರ ಯುದ್ಧದಲ್ಲಿ ಭಾರತದ ಗೆಲುವಿನ ಸ್ವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಭಯೋತ್ಪಾದನೆ ಮತ್ತು ಭಾರತ ವಿರೋಧಿ ಚಟುವಟಿಕೆಗಳಿಗೆ ಪಾಕಿಸ್ತಾನವು ಕುಮ್ಮಕ್ಕು ನೀಡುತ್ತಿದೆ. ಆ ಮೂಲಕ ಭಾರತದಲ್ಲಿ ಒಡಕು ಮೂಡಿಸಲು ಸಂಚು ಹೂಡುತ್ತಿದೆ’ ಎಂದು ತಿಳಿಸಿದರು.

ಪಾಕಿಸ್ತಾನದ ಎಲ್ಲ ಸಂಚುಗಳನ್ನು ಭಾರತದ ಸಶಸ್ತ್ರ ಪಡೆಗಳು ವಿಫಲಗೊಳಿಸಿದ್ದವು. ಇದೀಗ ಭಯೋತ್ಪಾದನೆಯನ್ನು ಮಟ್ಟಹಾಕಲು ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

ಬ್ರಿಟಿಷ್ ಆಳ್ವಿಕೆ ವಿರುದ್ಧದ ಸ್ವಾತಂತ್ರ್ಯಕ್ಕಾಗಿ ನಡೆದಿದ್ದ ಹೋರಾಟದ ಬಳಿಕ ಧರ್ಮದ ಹೆಸರಿನಲ್ಲಿ ಭಾರತವು ವಿಭಜನೆಗೊಂಡಿದ್ದು ‘ಚಾರಿತ್ರಿಕ ಪ್ರಮಾದ’ ಎಂದೂ ಅವರು ಅಭಿಪ್ರಾಯಪಟ್ಟರು.



ರಾಜನಾಥ್ ಸಿಂಗ್

‘ಭಯೋತ್ಪಾದನೆ ಮತ್ತು ಭಾರತ ವಿರೋಧಿ ಕೃತ್ಯಗಳಿಗೆ ಉತ್ತೇಜನ ನೀಡುವ ಮೂಲಕ ಭಾರತವನ್ನು ವಿಭಜಿಸಲು ಪಾಕಿಸ್ತಾನ ಬಯಸುತ್ತಿದೆ. ಆದರೆ ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತೊಗೆಯಲು ಸೇನಾ ಪಡೆಗಳು ಕಾರ್ಯತತ್ಪರವಾಗಿವೆ’ ಎಂದು ಸಚಿವರು ಹೇಳಿದರು.

ತುಂಬಲಾರದ ನಷ್ಟ: ತಮಿಳುನಾಡಿನ ಕೂನೂರಿನಲ್ಲಿಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಬಿಪಿನ್ ರಾವತ್, ಅವರ ಪತ್ನಿ ಹಾಗೂ ಇತರ ಸೇನಾಧಿಕಾರಿಗಳು ಹುತಾತ್ಮರಾಗಿರುವುದು ದೇಶಕ್ಕೆ ತುಂಬಲಾರದ ನಷ್ಟ ಎಂದು ರಾಜನಾಥ್ ಸಿಂಗ್ ಎಂದರು.

‘ಈ ಸಂದರ್ಭದಲ್ಲಿ ಅವರೆಲ್ಲರನ್ನೂ ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಅವರೆಲ್ಲರಿಗೂ ಗೌರವ ಸಮರ್ಪಿಸುತ್ತಿದ್ದೇನೆ’ ಎಂದು ತಿಳಿಸಿದರು.

ದುರಂತದಲ್ಲಿ ಬದುಕುಳಿದು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ತಂದೆ ಜತೆ ನಿರಂತರ ಸಂಪರ್ಕದಲ್ಲಿದ್ದೇನೆ. ಅವರು ಶೀಘ್ರ ಚೇತರಿಸಿಕೊಂಡು ಮೊದಲಿನಂತಾಗಿ ಕರ್ತವ್ಯಕ್ಕೆ ಮರಳುವಂತಾಗಲಿ ಎಂದು ನಾವೆಲ್ಲ ಪ್ರಾರ್ಥಿಸುತ್ತಿದ್ದೇವೆ ಎಂದು ರಾಜನಾಥ್ ಸಿಂಗ್ ಹೇಳಿದರು.

ನೀತಿ ಆಯೋಗಕ್ಕೆ ನಿತೀಶ್ ಕುಮಾರ್ ಸರ್ಕಾರದ ಪತ್ರ

‘ಬಿಹಾರಕ್ಕೆ ವಿಶೇಷ ಸ್ಥಾನಮಾನ’

ಮುಖ್ಯಾಂಶಗಳು

- 12 ವರ್ಷ ಹಳೆಯ ಬೇಡಿಕೆ
- ಕೈಗಾರಿಕಾ ಬೆಳವಣಿಗೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪೂರಕ

ಪಟ್ನಾ (ಪಿಟಿಐ): ಬಿಹಾರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಮೂಲಕ ಹೆಚ್ಚಿನ ಅನುದಾನ ನೀಡಬೇಕು ಎಂದು ಮುಖ್ಯಮಂತ್ರಿ ನಿತೀಶ್ ಕುಮಾರ್ ಸರ್ಕಾರ ನೀತಿ ಆಯೋಗಕ್ಕೆ ಪತ್ರ ಬರೆದಿದೆ.

ಇದು 10–12 ವರ್ಷಗಳ ಹಳೆಯ ಬೇಡಿಕೆಯಾಗಿದ್ದು, ಇದನ್ನು ಕೂಡಲೇ ಈಡೇರಿಸಬೇಕು ಎಂದು ಬಿಹಾರದ ಯೋಜನೆ ಮತ್ತು ಅನುಷ್ಠಾನ ಖಾತೆ ರಾಜ್ಯ ಸಚಿವ ಬಿಜೇಂದ್ರ ಯಾದವ್ ಅವರು ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಅವರಿಗೆ ಬರೆದ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಬಿಹಾರವು ವಿಶೇಷ ಸ್ಥಾನಮಾನ ಪಡೆಯಲು ಬೇಕಾದ ಎಲ್ಲಾ ಮಾನದಂಡಗಳನ್ನು ಹೊಂದಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ನೀತಿ ಆಯೋಗವು ಈಚೆಗೆ ಬಿಡುಗಡೆ ಮಾಡಿದ ಬಹು ಆಯಾಮದ ಬಡತನ ಸೂಚ್ಯಂಕ ವರದಿಯಲ್ಲಿ ಬಿಹಾರವು ಕೊನೆಯ ಸ್ಥಾನ ಪಡೆದಿತ್ತು.

ಬಿಹಾರ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು ನೈಸರ್ಗಿಕ ಸಂಪನ್ಮೂಲಗಳು ವಿರಳವಾಗಿವೆ. ಅರ್ಧಕ್ಕಿಂತ ಹೆಚ್ಚಿನ ಜಿಲ್ಲೆಗಳಲ್ಲಿ ಬರ ಮತ್ತು ಪ್ರವಾಹ ಪರಿಣಾಮ ಬೀರಿರುವುದರಿಂದ ತಲಾ ಆದಾಯ, ಸುಲಭ ಜೀವನ ಮತ್ತು ಮಾನವ ಅಭಿವೃದ್ಧಿಯಂತಹ ಸೂಚ್ಯಂಕಗಳಲ್ಲಿ ಬಿಹಾರ ರಾಷ್ಟ್ರೀಯ ಸರಾಸರಿಗಿಂತ ಕೆಳಗಿದೆ ಎಂದು ಸಚಿವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪೂರಕವಾಗುವಂತೆ ಸಾರ್ವಜನಿಕ ವಲಯದ ಘಟಕಗಳನ್ನು ಸ್ಥಾಪಿಸಲು ಕೇಂದ್ರದ ಕಡೆಯಿಂದ ಉಪಕ್ರಮದ ಕೊರತೆ ಇದೆ ಎಂದು ಸಚಿವರು ದೂರಿದ್ದಾರೆ.

ಗೋವಾದಲ್ಲಿ ಟಿಎಂಸಿ ಜೊತೆ ಮೈತ್ರಿ ಇಲ್ಲ– ಎಎಪಿ

ಪಣಜಿ (ಪಿಟಿಐ): ಗೋವಾದ ವಿಧಾನಸಭಾ ಚುನಾವಣೆಗೆ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಆಮ್ ಆದ್ಮಿ ಪಕ್ಷ(ಎಎಪಿ) ಭಾನುವಾರ ತಿಳಿಸಿದೆ.



ಅತಿಶಿ

ಉತ್ತಮ ಅಭ್ಯರ್ಥಿಗಳೊಂದಿಗೆ ಗೋವಾಕ್ಕೆ ಹೊಸ ಪರ್ಯಾಯ ಒದಗಿಸಲು ಮತ್ತು ಪ್ರಾಮಾಣಿಕ ಮತ್ತು ಭ್ರಷ್ಟಾಚಾರ ಮುಕ್ತ ಸರ್ಕಾರವನ್ನು ರಚಿಸಲು ಎಎಪಿ ನಿರ್ಧರಿಸಿದೆ. ಹಾಗಾಗಿ ಅವರೊಂದಿಗೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ ಎಂದು ಪಕ್ಷದ ಗೋವಾ ಘಟಕದ ಮುಖ್ಯಸ್ಥೆ ಅತಿಶಿ ಹೇಳಿದ್ದಾರೆ.

ಗೋವಾ ಚುನಾವಣೆಗೆ ಎಎಪಿ ಪಕ್ಷವು ಟಿಎಂಸಿ ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳಲಿದೆ ಎನ್ನುವ ಮಾಧ್ಯಮವೊಂದರ ವರದಿ ಉಲ್ಲೇಖಿಸಿ ಪಶ್ಚಿಮ ಬಂಗಾಳ ಮೂಲದ ಲೇಖಕರೊಬ್ಬರು ಮಾಡಿರುವ ಟ್ವೀಟ್‌ಗೆ ಉತ್ತರಿಸುತ್ತಾ ಅವರು ಈ ರೀತಿ ಹೇಳಿದ್ದಾರೆ.

ಮುಂದಿನ ವರ್ಷದ ಆರಂಭದಲ್ಲಿ ಗೋವಾದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.



ಹೆಲಿಕಾಪ್ಟರ್ ಅವಘಡದಲ್ಲಿ ಮೃತಪಟ್ಟಿದ್ದ ಲ್ಯಾನ್ಸ್ ನಾಯಕ್ ಸಾಯಿತೇಜಾ ಅವರ ಅಂತ್ಯಕ್ರಿಯೆ ಚಿತ್ತೂರು ಜಿಲ್ಲೆಯ ಹುಟ್ಟೂರು ರೇಗಡಪಲ್ಲಿಯಲ್ಲಿ ಭಾನುವಾರ ಸೇನಾ ಗೌರವದೊಂದಿಗೆ ನಡೆಯಿತು.

ಸಾಯಿ ತೇಜ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹೆಲಿಕಾಪ್ಟರ್ ಪತನದಲ್ಲಿ ಮೃತಪಟ್ಟಿದ್ದ ಲ್ಯಾನ್ಸ್‌ನಾಯಕ್ ಸಾಯಿ ತೇಜ ಅವರ ಅಂತ್ಯಕ್ರಿಯೆ, ಚಿತ್ತೂರು ಜಿಲ್ಲೆಯ ಅವರ ಹುಟ್ಟೂರು ರೇಗಡಪಲ್ಲಿಯ ತೋಟದಲ್ಲಿ ಸೇನಾ ಗೌರವದೊಂದಿಗೆ ನಡೆಯಿತು. ಇದಕ್ಕೂ ಮುನ್ನ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು.

ಕೃಷಿಕ ಕುಟುಂಬ ಹಿನ್ನೆಲೆಯ ಸಾಯಿ ತೇಜ 2013ರಲ್ಲಿ ಸೇನೆಗೆ ಸೇರಿದ್ದು, ಬಳಿಕ ವಿಶೇಷ ಪಡೆಗೆ ನಿಯೋಜನೆಗೊಂಡಿದ್ದರು. ಅವರ ಕಾರ್ಯದಕ್ಷತೆ ಗಮನಿಸಿ ಸಿಡಿಎಸ್ ಅವರ ಭದ್ರತಾ ಅಧಿಕಾರಿಯಾಗಿ ನೇಮಕ ಮಾಡಲಾಗಿತ್ತು.

ತೇಜ ಅವರ ತಮ್ಮ ಕೂಡ ಸೇನೆಯಲ್ಲಿದ್ದು ಸದ್ಯ ಸಿಕ್ಕಿಂನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತೇಜಾ ಅವರಿಗೆ ಪತ್ನಿ, 5 ಮತ್ತು 3 ವರ್ಷದ ಇಬ್ಬರು ಮಕ್ಕಳಿದ್ದಾರೆ.

ಮೃತ ಯೋಧನ ಪತ್ನಿಗೆ ನೌಕರಿ ನೀಡಬೇಕು ಎಂಬ ಬೇಡಿಕೆಯನ್ನು ಮುಖ್ಯಮಂತ್ರಿ ಪರಿಗಣಿಸಬಹುದು ಎಂದು ಸ್ಥಳಕ್ಕೆ ಭೇಟಿ ನೀಡಿದ್ದ ಪಂಚಾಯತ್ ರಾಜ್ ಸಚಿವ ಪೆದ್ದಿರೆಡ್ಡಿ ರಾಮಚಂದ್ರ ರೆಡ್ಡಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಾಶ್ಮೀರದಲ್ಲಿ ಜೆಇಎಂ ಉಗ್ರನ ಹತ್ಯೆ

ಶ್ರೀನಗರ: ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಅವಂತಿಪುರ ಪ್ರದೇಶದಲ್ಲಿ ಭದ್ರತಾ ಪಡೆಗಳು ಭಾನುವಾರ ಬೆಳಿಗ್ಗೆ ನಡೆಸಿದ ಎನ್‌ಕೌಂಟರ್‌ನಲ್ಲಿ ಜೈಶ್‌–ಎ–ಮಹಮ್ಮದ್ ಸಂಘಟನೆಗೆ ಹೊಸದಾಗಿ ಸೇರಿದ್ದ ಉಗ್ರನನ್ನು ಹತ್ಯೆ ಮಾಡಲಾಗಿದೆ.

ಹತ್ಯೆಗೀಡಾದ ಉಗ್ರನನ್ನು ಬರಗಾಮ್‌ನ ಸಮೀರ್ ಅಹ್ಮದ್ ತಂತ್ರಾಯ್ ಎಂದು ಗುರುತಿಸಲಾಗಿದೆ. ಆತ ನವೆಂಬರ್ 2ರಂದು ಸಂಘಟನೆಗೆ ಸೇರಿದ್ದ. ಪುಲ್ವಾಮಾದ ಬರಗಾಮ್ ಪ್ರದೇಶದಲ್ಲಿ ಉಗ್ರರು ಇರುವ ಮಾಹಿತಿ ಪಡೆದ ಭದ್ರತಾ ಪಡೆಯ ಯೋಧರು ಸ್ಥಳಕ್ಕೆ ಸಮೀಪಿಸುತ್ತಿದ್ದಂತೆ, ಅಡಗಿಕೊಂಡಿದ್ದ ಉಗ್ರರು ಅವರ ಮೇಲೆ ದಾಳಿ ನಡೆಸಿದ್ದು ಅದಕ್ಕೆ ಪತ್ಯುತ್ತರವಾಗಿ ಸೈನಿಕರು ಎನ್‌ಕೌಂಟರ್ ನಡೆಸಿ ಒಬ್ಬ ಉಗ್ರನನ್ನು ಹತ್ಯೆ ಮಾಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮೆಕ್ಕಾ ಮಾದರಿ ರಾಮ ಜನ್ಮಭೂಮಿ ಕ್ಷೇತ್ರ ಅಭಿವೃದ್ಧಿ’

ನಾಗಪುರ (ಪಿಟಿಐ): ಅಯೋಧ್ಯೆಯ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಹಿಂದುತ್ವದ ಸಂಕೇತವಾಗಿ ಹೊರಹೊಮ್ಮಲಿದ್ದು ಅದನ್ನು ವ್ಯಾಟಿಕನ್ ಸಿಟಿ ಮತ್ತು ಮೆಕ್ಕಾ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ವಿಶ್ವ ಹಿಂದೂ ಪರಿಷತ್‌ನ(ವಿಎಚ್‌ಪಿ) ಅಧ್ಯಕ್ಷ ರವೀಂದ್ರ ನರೈನ್ ಸಿಂಗ್ ಭಾನುವಾರ ಹೇಳಿದರು

ಮಹಾರಾಷ್ಟ್ರ ದ ನಾಗಪುರದ ಧಂತೋಲಿ ಪ್ರದೇಶದಲ್ಲಿ ವಿಶ್ವ ಹಿಂದೂ ಜನಕಲ್ಯಾಣ ಪರಿಷತ್‌ನ ವಿದರ್ಭ ಪ್ರಾದೇಶಿಕ ಕಚೇರಿ ನಿರ್ಮಾಣದ ಶಿಲಾನ್ಯಾಸ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಯೋಧ್ಯೆಯ ರಾಮ ಜನ್ಮಭೂಮಿ ತೀರ್ಥಕ್ಷೇತ್ರವನ್ನು ರೋಮನ್ ಕ್ಯಾಥೋಲಿಕ್ ಚರ್ಚ್‌ಗಳ ಕೇಂದ್ರಸ್ಥಳ ವ್ಯಾಟಿಕನ್ ಸಿಟಿ ಮತ್ತು ಇಸ್ಲಾಂನ ಪವಿತ್ರ ಸ್ಥಳವಾದ ಮೆಕ್ಕಾ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು. ಅದು ಹಿಂದುತ್ವದ ಸಂಕೇತವಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಭಾರತದಲ್ಲಿ ಧಾರ್ಮಿಕ ಮತಾಂತರದ ಗುರಿಯನ್ನು ಹೊಂದಿರುವ ವಿದೇಶಿ ನೆರವನ್ನು ನರೇಂದ್ರ ಮೋದಿ ಸರ್ಕಾರ ತಡೆಯುತ್ತಿದೆ ಎಂದು ಶ್ಲಾಘಿಸಿದರು. ರಾಷ್ಟ್ರ ಸೇವೆಯಲ್ಲಿ ಹಿಂದೂಗಳ ಜೊತೆ ಕೈಜೋಡಿಸುವಂತೆ ಮುಸ್ಲಿಂ ಸಮುದಾಯಕ್ಕೆ ಮನವಿ ಮಾಡಿದರು.

‘ಅಪರಾಧಿಯ ಮನಸ್ಥಿತಿಯನ್ನೂ ಗಮನಿಸಬೇಕು’

ನವದೆಹಲಿ (ಪಿಟಿಐ): ‘ನ್ಯಾಯಾಲಯಗಳು ಕೇವಲ ಅಪರಾಧದ ಸ್ವರೂಪವನ್ನಷ್ಟೇ ಅಲ್ಲ, ಅಪರಾಧಿ ಮತ್ತು ಆತನ ಮನಸ್ಥಿತಿಯನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಎಲ್. ನಾಗೇಶ್ವರರಾವ್ ನೇತೃತ್ವದ ಪೀಠವು, ಅಪರಾಧಿಯ ಸುಧಾರಣೆ ಮತ್ತು ಪುನರ್ವಸತಿ ಸಾಧ್ಯತೆಗಳನ್ನೂ ಗಮನಿಸಬೇಕು ಎಂದೂ ಅಭಿಪ್ರಾಯಪಟ್ಟಿದೆ.

ಕೊಲೆ ಪ್ರಕರಣದಲ್ಲಿ ಅಪರಾಧಿಗೆ ವಿಧಿಸಿದ್ದ ಜೀವಾವಧಿ ಸಜೆ ಅವಧಿಯನ್ನು ಕಡಿತಗೊಳಿಸಿ ಹೀಗೆ ಹೇಳಿತು.

ಸಾಲ ಪಡೆಯುವಾಗ ಈ ನಿಯಮಗಳನ್ನು ಮರೆಯದಿರಿ



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಸಾಲ ಎಂದಾಕ್ಷಣ 'ಸಾಲವನ್ನು ಕೊಂಬಾಗ ಹಾಲೋಗರ ಉಂಡಂತೆ, ಸಾಲಿಗನು ಬಂದಾಗ ಕಿಬ್ಬದಿಯ ಕೀಲು ಮುರಿದಂತೆ' ಎಂಬ ಸರ್ವಜ್ಞನ ಮಾತು ನೆನಪಿಗೆ ಬರುತ್ತದೆ. ಆದರೆ, ಮನೆ-ವಾಹನ ಖರೀದಿ, ಬಿಸಿನೆಸ್, ವೈದ್ಯಕೀಯ ತುರ್ತು ಹೀಗೆ ಅನೇಕ ಕಾರಣಗಳಿಗೆ ಸಾಲ ಪಡೆಯುವುದು ಅಗತ್ಯ. ಸಾಲ ಮಾಡುವುದು ತಪ್ಪಲ್ಲ. ಆದರೆ, ಸರಿಯಾದ ಮಾಹಿತಿ ಇಲ್ಲದೆ, ಅಳತೆ ಅಂದಾಜಿಲ್ಲದೆ ಸಾಲ ತೆಗೆದುಕೊಂಡರೆ ಅದು ಮುಳುವಾಗುತ್ತದೆ. ಸಾಲ ಪಡೆಯುವಾಗ ನಾವು ಅನುಸರಿಸಬೇಕಾದ ನಿಮಯಗಳು ಯಾವುವು? ಆ ಬಗ್ಗೆ ಒಂದು ನೋಟ ಇಲ್ಲಿದೆ.

ಯಾವ ಉದ್ದೇಶಕ್ಕೆ ಸಾಲ?: ಎಲ್ಲದಕ್ಕೂ ಸುಲಭದಲ್ಲಿ ಸಾಲ ಸಿಗುವ ಕಾಲವಿದು. ಆದರೆ, ಸಾಲ ಸಿಗುತ್ತದೆ ಎಂದು ಎಲ್ಲವನ್ನೂ ಸಾಲದಲ್ಲೇ ಖರೀದಿ ಮಾಡುವ ಗೋಜಿಗೆ ಹೋಗಬೇಡಿ. ನೀವು ಮಾಡುವ ಸಾಲದಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದಾದರೆ ತೊಂದರೆ ಇಲ್ಲ. ಮದುವೆ, ವಿದೇಶ ಪ್ರಯಾಣದಂತಹ ಉದ್ದೇಶಗಳಿಗೆ ಅನುತ್ಪಾದಕ ಸಾಲ ಮಾಡಿದರೆ ಅದು ನಿಮ್ಮನ್ನು ಕಾಡುತ್ತದೆ. ಸಾಲದ ವಿಚಾರಕ್ಕೆ ಬಂದರೆ 'ಹಾಸಿಗೆ ಇರುವುದಕ್ಕಿಂದ ಕಡಿಮೆ ಕಾಲು ಚಾಚಬೇಕು'. ನಿಮ್ಮ ಒಟ್ಟಾರೆ ಸಾಲದ ಕಂತುಗಳ ಮೊತ್ತವು ಮಾಸಿಕ ನಿವ್ವಳ ಆದಾಯದ ಶೇಕಡ 50ಕ್ಕಿಂತ ಹೆಚ್ಚಿಗೆ ಇರಬಾರದು.

ಯಾವುದಕ್ಕೆ ಎಷ್ಟು ಸಾಲ ಮಾಡಬೇಕು?: ನಿಮ್ಮ ಎಲ್ಲ ಸಾಲಗಳ ಮಾಸಿಕ ಕಂತಿನ ಮೊತ್ತ (ಇಎಂಐ) ನಿಮ್ಮ ತಿಂಗಳ ಆದಾಯದ ಶೇ 50ಕ್ಕಿಂತ ಹೆಚ್ಚಿಗೆ ಇರಬಾರದು. ಅಂದರೆ ನಿಮ್ಮ ಸಂಬಳ ಒಂದು ಲಕ್ಷ ರೂಪಾಯಿ ಆಗಿದ್ದರೆ ನಿಮ್ಮ ಎಲ್ಲ ಸಾಲಗಳ ಒಟ್ಟು ಮಾಸಿಕ ಕಂತಿನ (ಇಎಂಐ) ಮೊತ್ತ ₹ 50 ಸಾವಿರ ಮೀರಬಾರದು.

ಗೃಹ ಸಾಲ ನಿಯಮ: ನೀವು ಮನೆ ಕಟ್ಟಿಸಲು ಅಥವಾ ಮನೆ ಖರೀದಿಸಲು ಮಾಡುವ ಸಾಲದ ಮೊತ್ತವು ನಿಮ್ಮ ವಾರ್ಷಿಕ ಆದಾಯದ ಐದು ಪಟ್ಟು ಮಾತ್ರ ಇರಬೇಕು. ಇನ್ನು ಮನೆ ಕೊಳ್ಳುವಾಗ ಕನಿಷ್ಠ ಶೇ 25ರಷ್ಟು ಡೌನ್ ಪೇಮೆಂಟ್ ಮಾಡಿದರೆ ಒಳಿತು. ನಿಮ್ಮ ಮಾಸಿಕ ಆದಾಯದ ಶೇ 30ರಷ್ಟು ಮಾತ್ರ ನಿಮ್ಮ ಗೃಹ ಸಾಲದ ಇಎಂಐ ಆಗಿರಬೇಕು. ಗರಿಷ್ಠ 20 ವರ್ಷಕ್ಕಿಂತ ಹೆಚ್ಚು ಅವಧಿಗೆ ಸಾಲ ಪಡೆಯುವುದು ಬೇಡ. ಸಾಧ್ಯವಾದರೆ ಅವಧಿಗೆ ಮುನ್ನ ಸಾಲ ಮರುಪಾವತಿಗೆ ಮುಂದಾಗಬೇಕು.

ವಾಹನ ಸಾಲ ನಿಯಮ: ವಾಹನ ಸಾಲ ಪಡೆಯುವಾಗ ಕನಿಷ್ಠ ಶೇ 20ರಷ್ಟು ಡೌನ್ ಪೇಮೆಂಟ್ ಮಾಡಿ. ಗರಿಷ್ಠ ನಾಲ್ಕು ವರ್ಷಕ್ಕೆ ಸಾಲ ಪಡೆಯಿರಿ. ನಿಮ್ಮ ಮಾಸಿಕ ಆದಾಯದ ಶೇ 10ರಷ್ಟು ಮಾತ್ರ ಸಾಲದ ಇಎಂಐ ಆಗಿರಬೇಕು.

ವೈಯಕ್ತಿಕ ಸಾಲ ನಿಯಮ: ವೈಯಕ್ತಿಕ ಸಾಲದ ಇಎಂಐ ನಿಮ್ಮ ಮಾಸಿಕ ನಿವ್ವಳ ಆದಾಯದ ಶೇ 10ಕ್ಕಿಂತ ಹೆಚ್ಚಿಗೆ ಇರಬಾರದು. ವೈಯಕ್ತಿಕ ಸಾಲಕ್ಕೆ ಗರಿಷ್ಠ ಬಡ್ಡಿ ದರ ಇರುತ್ತದೆ. ಇದರ ಬಡ್ಡಿ ದರ ಕೆಲವೊಮ್ಮೆ ಶೇ 20ಕ್ಕಿಂತಲೂ ಹೆಚ್ಚಿರುತ್ತದೆ. ತುರ್ತು ಅಗತ್ಯಗಳಿಗೆ ಮಾತ್ರ ಇದನ್ನು ಪರಿಗಣಿಸಬೇಕು.

ಗೃಹ ಸಾಲ ತೀರಿಸಲು ವೈಯಕ್ತಿಕ ಸಾಲ ಬೇಡ: ವೈಯಕ್ತಿಕ ಸಾಲದ ಬಡ್ಡಿ ದರಕ್ಕೆ ಹೋಲಿಕೆ ಮಾಡಿದಾಗ ಗೃಹ ಸಾಲದ ಬಡ್ಡಿದರ ಬಹಳ ಕಡಿಮೆ. ಗೃಹ ಸಾಲದ ಬಡ್ಡಿ ದರ ಶೇ 6.25ರಿಂದ ಶೇ 8ರವರೆಗೆ ಇರಬಹುದು. ಹಾಗಾಗಿ ಶೇ 12ರಿಂದ ಶೇ 20ರಷ್ಟು ಬಡ್ಡಿ ಇರುವ ವೈಯಕ್ತಿಕ ಸಾಲ ಮಾಡಿ ಗೃಹ ಸಾಲ ಪಾವತಿ ಸರಿಯಲ್ಲ.

ಎಲ್ಲದಕ್ಕೂ ಕ್ರೆಡಿಟ್ ಕಾರ್ಡ್ ಬೇಡ: ಅನಿರೀಕ್ಷಿತ ಸಂದರ್ಭಗಳಲ್ಲಿ ಹಣಕಾಸಿನ ಕೊರತೆ ನೀಗಿಸಲು ಕ್ರೆಡಿಟ್ ಕಾರ್ಡ್ ಬಳಸುವುದರಲ್ಲಿ ತಪ್ಪಿಲ್ಲ. ಆದರೆ ಸಾಲ ಮಾಡಿ ಖರೀದಿ ಮಾಡುವುದಕ್ಕಾಗೇ ಕ್ರೆಡಿಟ್ ಕಾರ್ಡ್ ಪಡೆದಿದ್ದೇನೆ ಎಂಬ ಧೋರಣೆ ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸುತ್ತದೆ. ಶಾಪಿಂಗ್ ಆಸೆಗೆ ಬಿದ್ದು ಸಿಕ್ಕಾಪಟ್ಟೆ ಖರೀದಿ ಮಾಡಿದ ಬಳಿಕ ಸರಿಯಾದ ಸಮಯಕ್ಕೆ ಕ್ರೆಡಿಟ್ ಕಾರ್ಡ್ ಬಾಕಿ ಪಾವತಿ ಮಾಡದಿದ್ದರೆ ಬಡ್ಡಿ, ಚಕ್ರಬಡ್ಡಿ ನಿಮ್ಮ ನಿದ್ದೆಗೆಡಿಸುತ್ತದೆ.

ಪೇಡೇ ಸಾಲಗಳ ಬಗ್ಗೆ ಎಚ್ಚರ: ವರ್ಷಕ್ಕೆ ಶೇ 20ರಿಂದ ಶೇ 40ರಷ್ಟು ಬಡ್ಡಿ ಪಡೆಯುವ ಸಾಲಗಳ ಬಗ್ಗೆ ನಿಮಗೆ ಗೊತ್ತಿರಬಹುದು. ಆದರೆ ದಿನಕ್ಕೆ ಒಂದು ಪರ್ಸೆಂಟ್ಟು ಬಡ್ಡಿ, ವರ್ಷಕ್ಕೆ ಶೇ 365ರಿಂದ ಶೇ 400ರಷ್ಟು ಬಡ್ಡಿ ಪಡೆಯುವ ಸಾಲಗಳ ಬಗ್ಗೆ ನೀವು ಕೇಳಿದ್ದೀರಾ? ಆಶ್ಚರ್ಯ ಅನಿಸಿದರೂ ಇಂತಹ ಅಪಾಯಕಾರಿ ಸಾಲವು ಲೋನ್ ಆ್ಯಪ್‌ಗಳ ಮೂಲಕ ಜನಸಾಮಾನ್ಯರಿಗೆ ಸಿಗುತ್ತಿದೆ. ಹಣದ ತುರ್ತು ಅಗತ್ಯವಿರುವ ಅಮಾಯಕರು ಸರಿಯಾದ ಮಾಹಿತಿ ಇಲ್ಲದೆ ಪೇಡೇ ಸಾಲಗಳ (ಸಂಬಳದ ದಿನ ಮರುಪಾವತಿ ಮಾಡುವ ಸಾಲ) ಮೊರೆ ಹೋಗಿ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. 'ನನ್ನ ಬಳಿ ಈಗ ಹಣವಿಲ್ಲ, ಈಗ ಸಾಲ ಕೊಟ್ಟರೆ ಮುಂದಿನ ತಿಂಗಳ ಸಂಬಳದಲ್ಲಿ ಬಡ್ಡಿ ಸಮೇತ ಸಾಲ ತೀರಿಸುತ್ತೇನೆ' ಎನ್ನುವ ಲೆಕ್ಕಾಚಾರದಲ್ಲಿ ನೀಡಲಾಗುವ ಸಾಲವೇ ಪೇಡೇ ಲೋನ್. ಏಳು ದಿನಗಳಿಂದ 60 ದಿನಗಳ ಅವಧಿಗೆ ಸಿಗುವ ಈ ಅಲ್ಪಾವಧಿ ಸಾಲಕ್ಕೆ ಯಾವುದೇ ಅಡಮಾನ ಇರುವುದಿಲ್ಲ. ಆದರೆ ವಿಪರೀತಿ ಬಡ್ಡಿ ದರವನ್ನು ಈ ಸಾಲಕ್ಕೆ ತೆರಬೇಕಾಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಎರಡನೇ ವಾರ ಗಳಿಕೆ ಕಂಡ ಸೂಚ್ಯಂಕಗಳು



ಅನಿಶ್ಚಿತ ಪರಿಸ್ಥಿತಿಯ ನಡುವೆ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ಕಂಡಿವೆ. ಡಿಸೆಂಬರ್ 10ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸಕಾರಾತ್ಮಕವಾಗಿ ಕಂಡುಬಂದಿವೆ. 58,786 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.88ರಷ್ಟು ಹೆಚ್ಚಳವಾಗಿದೆ. 17,511 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.82ರಷ್ಟು ಜಿಗಿದಿದೆ.

ಆರ್‌ಬಿಐ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಇಟ್ಟಿರುವುದು, ಕೊರೊನಾದ ಓಮೈಕ್ರಾನ್ ತಳಿಯ ಆತಂಕದಿಂದ ಹೂಡಿಕೆದಾರರು ಹೊರಬಂದಿರುವುದು, ಏಷ್ಯಾದ ಮಾರುಕಟ್ಟೆಗಳಲ್ಲೂ ಸಕಾರಾತ್ಮಕತೆ ಕಂಡುಬಂದಿರುವುದು ಸೇರಿ ಹಲವು ಅಂಶಗಳು ಜಿಗಿತಕ್ಕೆ ಕಾರಣ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 9ರಷ್ಟು ಗಳಿಕೆ ಕಂಡಿದ್ದರೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 6ರಷ್ಟು ಮತ್ತು ಲೋಹ ಸೂಚ್ಯಂಕ ಶೇ 5ರಷ್ಟು ಹೆಚ್ಚಳವಾಗಿವೆ. ಉಳಿದಂತೆ ಎಲ್ಲಾ ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಹಿಂಡಾಲ್ಕೋ ಶೇ 7.5ರಷ್ಟು, ಐಟಿಸಿ ಶೇ 7ರಷ್ಟು, ಏಷ್ಯನ್ ಪೇಂಟ್ಸ್ ಶೇ 5.5ರಷ್ಟು, ಐಸಿಐಸಿಐ ಶೇ 5.5ರಷ್ಟು, ಟಾಟಾ ಸ್ಟೀಲ್ ಶೇ 5ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 5ರಷ್ಟು ಮತ್ತು ಬಜಾಜ್ ಫೈನಾನ್ಸ್ ಶೇ 5ರಷ್ಟು ಗಳಿಸಿಕೊಂಡಿವೆ. ಡಿವಿಸ್ ಲ್ಯಾಬ್ಸ್ ಶೇ 5ರಷ್ಟು, ಐಒಸಿ ಶೇ 2ರಷ್ಟು ಮತ್ತು ಸಿಪ್ಲಾ ಶೇ 2ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ದೇಶಿ ಮತ್ತು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ. ಸಾಕಷ್ಟು ಐಪಿಒಗಳು ಸಹ ಜರುಗುತ್ತಿದ್ದು, ಅಳೆದು ತೂಗಿ ಒಳ್ಳೆಯ ಕಂಪನಿಗಳನ್ನು ಮಾತ್ರ ಹೂಡಿಕೆದಾರರು ಆಯ್ಕೆ ಮಾಡಿಕೊಳ್ಳಬೇಕು. ಹೊಸದಾಗಿ ಷೇರು ಮಾರುಕಟ್ಟೆ ಪ್ರವೇಶಿಸುವವರು ಅತಿಯಾಗಿ ಮೌಲ್ಯಮಾಪನ (ಓವರ್ ವ್ಯಾಲ್ಯೂಡ್) ಹೊಂದಿರುವ ಷೇರುಗಳ ಬಗ್ಗೆ ಎಚ್ಚರದಿಂದಿರಬೇಕು. ಉತ್ತಮ ಕಂಪನಿಗಳ ಷೇರುಗಳನ್ನು ಮಾತ್ರ ಸರಿಯಾದ ಬೆಲೆಯಲ್ಲಿ ಖರೀದಿಸುವ ಬಗ್ಗೆ ಚಿಂತಿಸಬೇಕು.

'ಬಜೆಟ್‌ನಲ್ಲಿ ಬ್ಯಾಂಕ್‌ಗಳಿಗೆ ನೆರವು ಅನುಮಾನ'

ವಸೂಲಾಗದ ಸಾಲ (ಲಕ್ಷ ಕೋಟಿಗಳಲ್ಲಿ)



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸುಸ್ತಿ ಸಾಲ ಕಡಿಮೆ ಆಗಿರುವುದರಿಂದ ಅವುಗಳ ಸ್ಥಿತಿ ಸುಧಾರಿಸಿದೆ. ಹೀಗಾಗಿ ಕೇಂದ್ರ ಸರ್ಕಾರವು 2022–23ನೇ ಸಾಲಿನ ಬಜೆಟ್‌ನಲ್ಲಿ ಅವುಗಳಿಗೆ ಬಂಡವಾಳ ನೆರವು ಘೋಷಣೆ ಮಾಡುವುದು ಅನುಮಾನ ಎಂದು ಮೂಲಗಳು ಹೇಳಿವೆ.

ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸಲು ಮತ್ತು ಪ್ರಮುಖವಲ್ಲದ ಆಸ್ತಿಗಳನ್ನು ಮಾರಾಟ ಮಾಡಲು ಸರ್ಕಾರವು ಬ್ಯಾಂಕ್‌ಗಳಿಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿವೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಹೊಸದಾಗಿ ಬಂಡವಾಳ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ₹ 20 ಸಾವಿರ ಕೋಟಿ ನೀಡಿದೆ.

ಬ್ಯಾಂಕ್‌ಗಳ ನಿವ್ವಳ ಲಾಭವು ಮೊದಲ ತ್ರೈಮಾಸಿಕದಲ್ಲಿ ₹ 14,012 ಕೋಟಿಗಳಷ್ಟು ಆಗಿದ್ದು, ಎರಡನೇ ತ್ರೈಮಾಸಿಕದಲ್ಲಿ ₹ 17,132 ಕೋಟಿಗಳಿಗೆ ಏರಿಕೆ ಕಂಡಿದೆ. ಎರಡೂ ತ್ರೈಮಾಸಿಕಗಳ ಒಟ್ಟಾರೆ ನಿವ್ವಳ ಲಾಭವು ಹಿಂದಿನ ಹಣಕಾಸು ವರ್ಷದ ಒಟ್ಟಾರೆ ಲಾಭದ ಸಮೀಪಕ್ಕೆ ಬರಲಿದೆ ಎಂದು ಹೇಳಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ರಾಮನಗರ ರೇಷ್ಮೆ



ಮಿಶ್ರತಳಿ	₹350-636
ದ್ವಿತಳಿ	₹456-806

'ಠೇವಣಿದಾರರು ಮೊದಲು' ಕಾರ್ಯಕ್ರಮದಲ್ಲಿ ಮೋದಿ

'3 ಲಕ್ಷ ಠೇವಣಿದಾರರಿಗೆ ಶೀಘ್ರವೇ ವಿಮಾ ಹಣ'

• ಅನ್ನಪೂರ್ಣಾ ಸಿಂಗ್

ನವದೆಹಲಿ: ಬ್ಯಾಂಕ್ ವೈಫಲ್ಯದಿಂದಾಗಿ ಹಣ ಕಳೆದುಕೊಂಡಿರುವ ಅಂದಾಜು ಮೂರು ಲಕ್ಷ ಠೇವಣಿದಾರರಿಗೆ ಅವರ ಹಣವು ಶೀಘ್ರದಲ್ಲಿಯೇ ಮರಳಿ ಸಿಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭರವಸೆ ನೀಡಿದರು.

ಬ್ಯಾಂಕ್ ಠೇವಣಿದಾರರಿಗೆ ವಿಮಾ ಸುರಕ್ಷೆಯನ್ನು ₹ 5 ಲಕ್ಷಕ್ಕೆ ಹೆಚ್ಚಿಸುವ ಕಾನೂನು ಜಾರಿಗೆ ಬಂದ ನಂತರದಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಠೇವಣಿದಾರರು ಒಟ್ಟು ₹ 1,300 ಕೋಟಿ ಪಡೆದುಕೊಂಡಿದ್ದಾರೆ ಎಂದು ಮೋದಿ ಅವರು ಹೇಳಿದರು. ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿ ಇರಿಸಿರುವ ಹಣದ ಸುರಕ್ಷತೆಗೆ ಸಂಬಂಧಿಸಿದ 'ಠೇವಣಿದಾರರು ಮೊದಲು' ಎಂಬ ಕಾರ್ಯಕ್ರಮದಲ್ಲಿ ಅವರು ಈ ಮಾತು ಹೇಳಿದರು.

ಮೊದಲು ₹ 50 ಸಾವಿರದವೆಗಿನ ಠೇವಣಿ ಹಣಕ್ಕೆ ವಿಮಾ ಸುರಕ್ಷತೆ ಇತ್ತು. ನಂತರ ಈ ಮೊತ್ತವನ್ನು ₹ 1 ಲಕ್ಷಕ್ಕೆ ಹೆಚ್ಚಿಸಲಾಯಿತು. ಆದರೆ, ವಿಮಾ ಹಣ ಪಾವತಿಗೆ ಕಾಲಮಿತಿ ಇರಲಿಲ್ಲ ಎಂದು ಮೋದಿ ಹೇಳಿದರು.

'ಬಡ ಹಾಗೂ ಮಧ್ಯಮ ವರ್ಗದ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ನಾವು ವಿಮಾ ಸುರಕ್ಷತೆಯ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸಿದೆವು. ಅಲ್ಲದೆ, ವಿಮಾ ಹಣವನ್ನು 90 ದಿನಗಳಲ್ಲಿ ಠೇವಣಿದಾರರಿಗೆ ನೀಡಬೇಕು ಎಂದು ಕೂಡ ನಮ್ಮ ಸರ್ಕಾರವು ಹೇಳಿದೆ. ಅಂದರೆ, ಒಂದು ಬ್ಯಾಂಕ್ ಮುಳುಗುತ್ತಿದೆ ಎಂದಿದ್ದರೂ ಠೇವಣಿದಾರರಿಗೆ ಅವರ ಹಣವು 90 ದಿನಗಳಲ್ಲಿ ಸಿಗುತ್ತದೆ' ಎಂದು ಅವರು ಹೇಳಿದರು.

ಬ್ಯಾಂಕ್‌ಗಳ ಮೇಲೆ ಆರ್‌ಬಿಐ ನಿರ್ಬಂಧ ವಿಧಿಸಿದ 90 ದಿನಗಳಲ್ಲಿ ₹ 5 ಲಕ್ಷದವರೆಗಿನ ಠೇವಣಿಗಳಿಗೆ ವಿಮಾ ಸುರಕ್ಷತೆಯನ್ನು ಒದಗಿಸುವ 'ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮ (ತಿದ್ದುಪಡಿ) ಮಸೂದೆ'ಗೆ ಸಂಸತ್ತು ಈ ವರ್ಷದ ಆರಂಭದಲ್ಲಿ ಅನುಮೋದನೆ ನೀಡಿದೆ.

ವಿಮಾ ಮೊತ್ತವನ್ನು ಹೆಚ್ಚಿಸಿದ ನಂತರದಲ್ಲಿ, ಸಂಪೂರ್ಣವಾಗಿ ವಿಮಾ ಸುರಕ್ಷೆಗೆ ಒಳಪಟ್ಟ ಖಾತೆಗಳ ಪ್ರಮಾಣವು ಶೇಕಡ 98.1ರಷ್ಟು ಆಗಿದೆ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಅನುಸರಿಸಲಾಗುತ್ತಿರುವ ಶೇಕಡ 80ರ ಮಾನದಂಡಕ್ಕಿಂತಲೂ ಶೇ 18ರಷ್ಟು ಹೆಚ್ಚು.

ಹೆಚ್ಚಿನ ಲಾಭದ ಹೂಡಿಕೆಯಲ್ಲಿ ಅಪಾಯವೂ ಹೆಚ್ಚು: ದಾಸ್

ನವದೆಹಲಿ (ಪಿಟಿಐ): ಹೆಚ್ಚಿನ ಲಾಭ ತಂದುಕೊಡುವ ಹೂಡಿಕೆಗಳಲ್ಲಿ ಅಪಾಯವೂ (ರಿಸ್ಕ್) ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ಈ ಬಗ್ಗೆ ಎಚ್ಚರಿಕೆಯಿಂದ ಇರಿ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಠೇವಣಿದಾರರಿಗೆ ಸಲಹೆ ನೀಡಿದ್ದಾರೆ.

ಬ್ಯಾಂಕೊಂದು ಹೆಚ್ಚಿನ ಬಡ್ಡಿದರ ನೀಡುತ್ತದೆ ಎನ್ನುವ ಕಾರಣಕ್ಕಾಗಿ ಠೇವಣಿದಾರರು ಅಲ್ಲಿ ಹಣವನ್ನು ಇರಿಸುವ ಮುನ್ನ ಜಾಗರೂಕತೆ ವಹಿಸಬೇಕು. ಏಕೆಂದರೆ ಹೆಚ್ಚಿನ ಗಳಿಕೆ ಅಥವಾ ಹೆಚ್ಚಿನ ಬಡ್ಡಿದರವು ಯಾವಾಗಲೂ ಗರಿಷ್ಠ ಅಪಾಯದೊಂದಿಗೆ ಬೆಸೆದುಕೊಂಡಿರುತ್ತದೆ ಎಂದು ಅವರು ಹೇಳಿದ್ದಾರೆ. ಹೂಡಿಕೆಗೆ ಹೆಚ್ಚಿನ ಬಡ್ಡಿದರ ನೀಡುವ ಸಂಸ್ಥೆಗಳಿವೆಯಾದರೂ ಠೇವಣಿದಾರರು ಯಾವಾಗಲೂ ಎಚ್ಚರಿಕೆಯಿಂದ ಇರಬೇಕು ಎಂದಿದ್ದಾರೆ.

150 ಎಕರೆ ಜಾಗ ಗುರುತು: ₹5,000 ಕೋಟಿ ಹೂಡಿಕೆ

ರಾಯಾಪುರದಲ್ಲಿ ಇ.ವಿ ಘಟಕ

• ಶಿವಕುಮಾರ ಹಳ್ಯಾಳ

ಧಾರವಾಡ: ಇಲ್ಲಿನ ರಾಯಾಪುರದಲ್ಲಿ ಬ್ಯಾಟರಿ ಚಾಲಿತ ವಾಹನ ತಯಾರಿಕಾ ಘಟಕ ಆರಂಭವಾಗಲಿದೆ. ಶುಭಂ ಗೋಲ್ಡ್‌ನ ಮಾಲೀಕ ರಾಜೇಶ ಮೆಹ್ತಾ ಅವರು ₹ 5 ಸಾವಿರ ಕೋಟಿ ಹೂಡಿಕೆ ಮಾಡಲಿದ್ದಾರೆ. ಈ ವಿಷಯವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಖಚಿತಪಡಿಸಿದ್ದಾರೆ.

ಘಟಕ ನಿರ್ಮಾಣಕ್ಕೆ 150 ಎಕರೆ ಜಮೀನು ಗುರುತಿಸಲಾಗಿದೆ. ಮುಂದಿನ ತಿಂಗಳಲ್ಲಿ ಕಾಮಗಾರಿ ಆರಂಭವಾಗಲಿದ್ದು, ಈ ಘಟಕದಲ್ಲಿನ ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಶೇ 85ರಷ್ಟು ಪಾಲು ಸಿಗಲಿದೆ.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿರುವ ನಿರಾಣಿ ಅವರು, 'ದೇಶದಲ್ಲಿನ ವಿದ್ಯುತ್ ಚಾಲಿತ ವಾಹನ (ಇ.ವಿ) ಕ್ಷೇತ್ರದಲ್ಲಿ ಅಚ್ಚರಿಯ ಬೆಳವಣಿಗೆಗಳು ಆಗುತ್ತಿವೆ. ಈ ಕ್ಷೇತ್ರದಲ್ಲಿ ಬೃಹತ್ ಅವಕಾಶಗಳು ತೆರೆದುಕೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ' ಎಂದರು.

'ಇ.ವಿ. ಸಂಶೋಧನೆ ಮತ್ತು ಅಭಿವೃದ್ಧಿ ಘಟಕಗಳು ಬಿಡದಿ, ಕೋಲಾರ, ಹೊಸೂರು ಹಾಗೂ ಧಾರವಾಡದಲ್ಲಿ ಸ್ಥಾಪನೆಗೊಳ್ಳಲಿವೆ. ರಾಜ್ಯದಲ್ಲಿ ಬ್ಯಾಟರಿ ಚಾಲಿತ ವಾಹನಗಳ ಮಾರಾಟದಲ್ಲಿ ಶೇ 31ರಷ್ಟು ಪ್ರಗತಿ ಕಂಡುಬಂದಿದ್ದು, ಇದನ್ನು ಇನ್ನಷ್ಟು ಉತ್ತೇಜಿಸುವ ನಿಟ್ಟಿನಲ್ಲಿ ರಾಯಾಪುರ ಘಟಕಕ್ಕೆ ಅನುಮೋದನೆ ನೀಡಲಾಗಿದೆ' ಎಂದರು.

ಬ್ಯಾಟರಿ ಚಾಲಿತ ವಾಹನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಹೈಬ್ರಿಡ್ ವಾಹನ ಮತ್ತು ಇ.ವಿ. ತಯಾರಿಕೆ ಹಾಗೂ ತ್ವರಿತ ಅಳವಡಿಕೆ (ಎಫ್‌ಎಎಂಇ) ನೀತಿಯ ಎರಡನೇ ಹಂತದಲ್ಲಿ 2021ರ ಜುಲೈ 20ರವರೆಗೆ 87,659 ಇ.ವಿ.ಗಳ ಮಾರಾಟಕ್ಕೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡಿತ್ತು. ಇದರಲ್ಲಿ 19,270 ವಾಹನಗಳು ಕರ್ನಾಟಕದಲ್ಲೇ ಮಾರಾಟವಾಗಿವೆ' ಎಂದು ನಿರಾಣಿ ಹೇಳಿದರು.

ವಾರಾಣಸಿ ನಗರದಲ್ಲಿ ಪ್ರವಾಸೋದ್ಯಮ ಚೇತರಿಕೆ ನಿರೀಕ್ಷೆ

ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟನೆಗೆ ಸಜ್ಜು

ವಾರಾಣಸಿ (ಪಿಟಿಐ): ವಾರಾಣಸಿಯ ಕೇಂದ್ರ ಭಾಗದಲ್ಲಿ ನಿರ್ಮಿಸಿರುವ ಬಹುನಿರೀಕ್ಷಿತ ಕಾಶಿ ವಿಶ್ವನಾಥ ಕಾರಿಡಾರ್ ಅನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವರು. ಈ ಯೋಜನೆಯಿಂದಾಗಿ ಪಾರಂಪರಿಕ ನಗರದಲ್ಲಿ ಪ್ರವಾಸೋದ್ಯಮ ಚೇತರಿಕೆ ಕಾಣಲಿದೆ ಎಂದು ಆಶಿಸಲಾಗಿದೆ.

ಐತಿಹಾಸಿಕ ಕಾಶಿ ವಿಶ್ವನಾಥ ದೇಗುಲ ಮತ್ತು ಪ್ರಮುಖ ದಶಾಶ್ವಮೇದ ಘಾಟ್ ಬಳಿ ನಿರ್ಮಿಸಿರುವ ಈ ಅತ್ಯಾಧುನಿಕ ಸೌಲಭ್ಯವು, ಉತ್ತರಪ್ರದೇಶವು ವಿಧಾನಸಭೆ ಚುನಾವಣೆಗೆ ಹತ್ತಿರವಾಗುತ್ತಿರುವಂತೆಯೇ ಉದ್ಘಾಟನೆಗೆ ಸಜ್ಜಾಗಿದೆ.

ಕಾರಿಡಾರ್‌ನ ಮಹಾದ್ವಾರ ಮತ್ತು ಇತರೆ ಸಂಕೀರ್ಣಗಳಿಗೆ ಕಲ್ಲು ಮತ್ತು ಇತರೆ ಪರಿಕರಗಳನ್ನು ಬಳಸಿದ್ದು, ಸಾಂಪ್ರದಾಯಿಕ ಕರಕುಶಲಕಾರರ ಸೇವೆಯನ್ನು ಬಳಸಿ ನಿರ್ಮಾಣ ಮಾಡಲಾಗಿದೆ.

ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಸಂತರು, ಸ್ವಾಮೀಜಿಗಳು, ಸ್ಥಳೀಯ ವ್ಯಾಪಾರಿಗಳಲ್ಲಿ ಸಂಭ್ರಮ ಮನೆಮಾಡಿದೆ.



ಸೋಮವಾರ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿರುವ, ನವೀಕೃತ ಕಾಶಿ ವಿಶ್ವನಾಥ ದೇಗುಲದ ಕಾರಿಡಾರ್‌ನ ನೋಟ

ಈ ದೇಗುಲ 1780ರಲ್ಲಿ ಮಹಾರಾಣಿ ಅಹಿಲ್ಯಾಬಾಯಿ ಹೋಳ್ಕರ್ ಅವಧಿಯಲ್ಲಿ ಪುನರ್‌ನಿರ್ಮಾಣಗೊಂಡಿತ್ತು. ಬಳಿಕ 19ನೇ ಶತಮಾನದಲ್ಲಿ ಮಹಾರಾಜ ರಣಜಿತ್ ಸಿಂಗ್ 'ಚಿನ್ನದ ಕಳಶ' ಅಳವಡಿಸಿದ್ದರು. ಕಾಶಿ ವಿಶ್ವನಾಥ ದೇಗುಲ ಟ್ರಸ್ಟ್‌ನ ವೆಬ್‌ಸೈಟ್‌ನ ಪ್ರಕಾರ, ಈ ಧಾರ್ಮಿಕ ತಾಣವನ್ನು 'ಚಿನ್ನದ ದೇವಸ್ಥಾನ' ಎಂದೂ ಗುರುತಿಸಲಾಗುತ್ತದೆ.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು, ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

'ಕಾಶಿ ವಿಶ್ವನಾಥ ಕಾರಿಡಾರ್' ಉದ್ಘಾಟನೆಯೊಂದಿಗೆ ಒಂದು ತಿಂಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಉದ್ಘಾಟನೆ ಸಮಾರಂಭದಲ್ಲಿ ಬಿಜೆಪಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಭಾಗವಹಿಸುವರು. ದೇಶದ ವಿವಿಧೆಡೆ 51 ಸಾವಿರ ಕಡೆ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಬಿಜೆಪಿ ಮುಖಂಡರು ತಿಳಿಸಿದ್ದಾರೆ.

₹ 339 ಕೋಟಿ ವೆಚ್ಚ: ಪ್ರಧಾನ ಮಂತ್ರಿಗಳ ಕಚೇರಿಯು ಈ ಕುರಿತು ಹೇಳಿಕೆ ನೀಡಿದ್ದು, 'ಕಾಶಿ ವಿಶ್ವನಾಥ ಕಾರಿಡಾರ್ ಯೋಜನೆಯ ಮೊದಲ ಹಂತದ ಯೋಜನೆಯ ವೆಚ್ಚ ಸುಮಾರು ₹ 339 ಕೋಟಿ. ಯೋಜನೆಯ ಉದ್ಘಾಟನೆಗೆ ಪ್ರಧಾನಿ ಮೋದಿ ಅವರು ಮಧ್ಯಾಹ್ನ 1 ಗಂಟೆಗೆ ದೇಗುಲಕ್ಕೆ ಭೇಟಿ ನೀಡುವರು' ಎಂದು ತಿಳಿಸಿದೆ.

ದೇಗುಲ ಚೌಕ ನಿರ್ಮಾಣ, ಸಿಟಿ ಗ್ಯಾಲರಿ, ಸಂಗ್ರಹಾಲಯ, ಬಹೂಪಯೋಗಿ ಸಭಾಂಗಣ, ಭಕ್ತರ ತಂಗುದಾಣ, ಸಂತರು, ಸನ್ಯಾಸಿಗಳ ಸೇವಾದರ, ಧಾರ್ಮಿಕ ಪುಸ್ತಕಕೇಂದ್ರ ನಿರ್ಮಾಣ ಕಾರಿಡಾರ್ ಅಭಿವೃದ್ಧಿಯಲ್ಲಿ ಸೇರಿವೆ.

'ಪಾಸ್‌ಪೋರ್ಟ್ ನಿರಾಕರಣೆ ಸಲ್ಲದು'

ಲಖನೌ (ಪಿಟಿಐ): 'ಕ್ರಿಮಿನಲ್ ಪ್ರಕರಣದಲ್ಲಿ ಖುಲಾಸೆಗೊಂಡಿದ್ದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದನ್ನು ಆಧರಿಸಿ ವ್ಯಕ್ತಿಗೆ ಪಾಸ್‌ಪೋರ್ಟ್ ನಿರಾಕರಿಸಲಾಗದು' ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ.

ಪಾಸ್‌ಪೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಪ್ರಮೋದ್ ಕುಮಾರ್ ರಾಜ್‌ಭರ್ ಅವರು ಅರ್ಜಿ ಸಲ್ಲಿಸಿದರು.

ಪಾಸ್‌ಪೋರ್ಟ್ ಕಾಯ್ದೆ 1967ರಲ್ಲಿ ಯಾವ ಸಂದರ್ಭದಲ್ಲಿ ಪಾಸ್‌ಪೋರ್ಟ್ ನಿರಾಕರಿಸಬಹುದು ಎಂಬುದು ಸ್ಪಷ್ಟವಾಗಿದೆ. ಅರ್ಜಿದಾರರ ಪ್ರಕರಣ ಈ ಅಂಶಗಳಡಿ ಬರುವುದಿಲ್ಲ ಎಂದು ಪೀಠ ಹೇಳಿತು.

ಅರ್ಜಿದಾರರ ವಿರುದ್ಧ ಲೈಂಗಿಕ ದೌರ್ಜನ್ಯ, ಕ್ರಿಮಿನಲ್ ಸಂಚು ಆರೋಪಕ್ಕೆ ಸಂಬಂಧಿಸಿ ಐಪಿಸಿ ಅನ್ವಯ ಪ್ರಕರಣ ದಾಖಲಿಸಲಾಗಿತ್ತು. ಆದರೆ, ಕೆಳಹಂತದ ಕೋರ್ಟ್ ಕಳೆದ ವರ್ಷ ಈ ಆರೋಪಗಳಿಂದ ಖುಲಾಸೆಗೊಳಿಸಿತ್ತು.

ಮೇಜರ್ ಆತ್ಮಹತ್ಯೆ

ಬನಿಹಾಲ್, ಜಮ್ಮು (ಪಿಟಿಐ): ಇಲ್ಲಿನ ರಂಬನ್ ಜಿಲ್ಲೆ ಮಹುಬಲ್‌ನಲ್ಲಿದ್ದ ಸೇನಾ ಶಿಬಿರದಲ್ಲಿ 29 ವರ್ಷದ ಮೇಜರ್, ಸರ್ವೀಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡು ಶನಿವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೂಲತಃ ದೆಹಲಿ ನಿವಾಸಿ ಮೇಜರ್ ಪರ್ವಿಂದರ್ ಸಿಂಗ್ ಶಿಬಿರಕ್ಕೆ ಹೊಂದಿಕೊಂಡಿರುವ ವಸತಿ ಗೃಹದ ನಿವಾಸದಲ್ಲಿಯೇ ಗುಂಡು ಹಾರಿಸಿಕೊಂಡು ಮೃತಪಟ್ಟಿದ್ದಾರೆ.

ಅಮೆರಿಕ: ಚಂಡಮಾರುತಕ್ಕೆ 83 ಜನರ ಸಾವು, ಹಲವರು ಕಣ್ಮರೆ

ಮೇಫೀಲ್ಡ್ (ಎಎಫ್‌ಪಿ): ಅಮೆರಿಕದ ಆರು ರಾಜ್ಯಗಳಲ್ಲಿ ಶುಕ್ರವಾರ ಸಂಜೆಯಿಂದ ಬೀಸುತ್ತಿರುವ ಚಂಡಮಾರುತದಿಂದಾಗಿ ಈ ವರೆಗೆ ಕನಿಷ್ಠ 83 ಜನರು ಮೃತಪಟ್ಟಿದ್ದಾರೆ. 10ಕ್ಕೂ ಹೆಚ್ಚು ಜನರು ಕಣ್ಮರೆಯಾಗಿದ್ದು, ಹಲವಾರು ಪಟ್ಟಣಗಳು ಹಾನಿಗೊಳಗಾಗಿವೆ.

'ಇದು ಅಮೆರಿಕದ ಇತಿಹಾಸದಲ್ಲಿಯೇ ದೊಡ್ಡ ಚಂಡಮಾರುತ' ಎಂದು ಅಧ್ಯಕ್ಷ ಜೋ ಬೈಡನ್ ತಿಳಿಸಿದ್ದಾರೆ.

'ಎಷ್ಟು ಜನರು ಪ್ರಾಣ ಕಳೆದುಕೊಂಡಿದ್ದಾರೆ ಹಾಗೂ ಹಾನಿಯ ಪ್ರಮಾಣ ಎಷ್ಟು ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ. ತೊಂದರೆಗೆ ಒಳಗಾಗಿರುವ ರಾಜ್ಯಗಳಿಗೆ ಎಲ್ಲ ನೆರವು ನೀಡಲಾಗುವುದು' ಎಂದು ಹೇಳಿದ್ದಾರೆ.

ಪ್ರಧಾನಿ ಟ್ವಿಟರ್ ಖಾತೆ ಹ್ಯಾಕ್ ಬಿಟ್‌ಕಾಯಿನ್ ಪ್ರಚಾರಕ್ಕೆ ಬಳಕೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಟ್ವಿಟರ್ ಖಾತೆ ಭಾನುವಾರ ಅಲ್ಪಾವಧಿಗೆ ಹ್ಯಾಕ್ ಆಗಿತ್ತು. 'ಬಿಟ್ ಕಾಯಿನ್‌ಗೆ ಭಾರತ ಅಧಿಕೃತವಾಗಿ ಮಾನ್ಯತೆ ನೀಡಿದೆ' ಎಂಬ ಸಂದೇಶವನ್ನು ಹಾಕಲಾಗಿತ್ತು.

'ಪ್ರಧಾನಿಯ ಟ್ವಿಟರ್ ಖಾತೆ ಹ್ಯಾಕ್ ಆಗಿರುವುದನ್ನು ತಕ್ಷಣವೇ ಗುರುತಿಸಿ ಟ್ವಿಟರ್ ಸಂಸ್ಥೆಯ ಗಮನಕ್ಕೆ ತಂದಿದ್ದು, ಕ್ಷಿಪ್ರವಾಗಿ ಸರಿಪಡಿಸಲಾಗಿದೆ' ಎಂದು ಪ್ರಧಾನಮಂತ್ರಿಗಳ ಕಚೇರಿ ಈ ಕುರಿತು ಹೇಳಿಕೆಯನ್ನು ನೀಡಿದೆ.

ಖಾತೆಯು ಹ್ಯಾಕ್ ಆಗಿದ್ದ ಅವಧಿಯಲ್ಲಿ ಮಾಡಲಾಗಿರುವ ಎಲ್ಲ ಟ್ವೀಟ್‌ಗಳನ್ನು ಕಡೆಗಣಿಸಬೇಕು ಎಂದು ಪ್ರಧಾನಮಂತ್ರಿಗಳ ಕಚೇರಿಯು ಮನವಿ ಮಾಡಿದೆ. ಹ್ಯಾಕ್ ಮಾಡಲಾಗಿದ್ದ ಅವಧಿಯಲ್ಲಿ ಹಾಕಿದ್ದ ಟ್ವೀಟ್‌ನಲ್ಲಿ 'ಭಾರತ ಅಧಿಕೃತವಾಗಿ 500 ಬಿಟ್ ಕಾಯಿನ್ ತಂದಿದ್ದು, ನಾಗರಿಕರಿಗೆ ವಿತರಿಸುತ್ತಿದೆ. ಅದನ್ನು ಪಡೆಯಲು ಇಲ್ಲಿ ಸಂಪರ್ಕಿಸಿ' ಎಂದು ಲಿಂಕ್ ಕೊಡಲಾಗಿತ್ತು.

ಇದರ ಹಿಂದೆಯೇ, ಟ್ವಿಟರ್‌ನ ಹೆಚ್ಚಿನ ಬಳಕೆದಾರರು ಖಾತೆಯು ಹ್ಯಾಕ್ ಆಗಿದೆ ಎಂಬುದನ್ನು ಉಲ್ಲೇಖಿಸಿದ್ದರು. ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಈ ಸಂದೇಶದ ಸ್ಕ್ರೀನ್ ಶಾಟ್ ಅನ್ನು ಬಳಸಿ, 'ಗುಡ್ ಮಾರ್ನಿಂಗ್ ಮೋದಿಜೀ. ಸಬ್ ಚಂಗಾ ಸೀ?' ಎಂದು ಟ್ವೀಟ್ ಮಾಡಿದ್ದರು. ಬಳಿಕ ಈ ಟ್ವೀಟ್ ಅನ್ನು ಅಳಿಸಿಹಾಕಲಾಗಿತ್ತು.

ಪ್ರಧಾನಮಂತ್ರಿಯವರ ಟ್ವಿಟರ್ ಖಾತೆಯನ್ನು ಈ ಹಿಂದೆ ಸೆಪ್ಟೆಂಬರ್ 2020ರಲ್ಲಿಯೂ ಹ್ಯಾಕ್ ಮಾಡಲಾಗಿತ್ತು. ಬಿಟ್‌ಕಾಯಿನ್ ಪ್ರಚಾರಕ್ಕೆ ಪ್ರಮುಖರ ಟ್ವೀಟ್ ಖಾತೆಯನ್ನು ಹ್ಯಾಕ್ ಮಾಡಲಾಗುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ಬರಾಕ್ ಒಬಾಮಾ ಮತ್ತು ಬಿಲ್ ಗೇಟ್ಸ್ ಅವರ ಖಾತೆಗಳನ್ನು ಗುರಿಯಾಗಿಸಿ ಕೃತ್ಯ ಎಸಗಲಾಗಿತ್ತು.

ವಿಶ್ವದ ಅತಿದೊಡ್ಡ ನೀಲಮಣಿ ರತ್ನ ಶ್ರೀಲಂಕಾದಲ್ಲಿ ಪತ್ತೆ

ಕೊಲಂಬೊ(ರಾಯಿಟರ್ಸ್): ವಿಶ್ವದ ಅತಿದೊಡ್ಡ, 310 ಕಿಲೋ ಗ್ರಾಂ ತೂಕದ ನೈಸರ್ಗಿಕ ನೀಲಮಣಿಯೊಂದು ಮೂರು ತಿಂಗಳ ಹಿಂದೆ ರತ್ನದ ಗಣಿಯಲ್ಲಿ ಸಿಕ್ಕಿರುವುದಾಗಿ ಶ್ರೀಲಂಕಾದ ಅಧಿಕಾರಿಗಳು ಭಾನುವಾರ ಘೋಷಿಸಿದ್ದಾರೆ.

ನೀಲಮಣಿಯನ್ನು ಪರೀಕ್ಷಿಸಿದ ಸ್ಥಳೀಯ ರತ್ನಶಾಸ್ತ್ರಜ್ಞರು, 300 ಕಿಲೋಗ್ರಾಂಗಳಿಗಿಂತ ಹೆಚ್ಚು ತೂಕವಿರುವುದರಿಂದ ಇದು ವಿಶ್ವದ ಅಪರೂಪದ ರತ್ನಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಅಂತರರಾಷ್ಟ್ರೀಯ ಸಂಸ್ಥೆಗಳು ಈ ರತ್ನವನ್ನು ಇನ್ನಷ್ಟೇ ಪ್ರಮಾಣೀಕರಿಸಬೇಕಾಗಿದೆ.

ಕೊಲಂಬೊ ಹೊರ ವಲಯದ ಹೊರಾಣ ಎಂಬಲ್ಲಿರುವ ರತ್ನದ ಗಣಿ ಮಾಲೀಕರೊಬ್ಬರ ಮನೆಯಲ್ಲಿ ನೀಲಮಣಿಯನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ರತ್ನಗಳಿಂದ ಸಮೃದ್ಧವಾಗಿರುವ ಶ್ರೀಲಂಕಾದ ರತ್ನಪುರ ಎಂಬಲ್ಲಿ ಈ ನೀಲಮಣಿ ಪತ್ತೆಯಾಗಿದೆ.

ರತ್ನಪುರವನ್ನು ಶ್ರೀಲಂಕಾದ ರತ್ನದ ರಾಜಧಾನಿ ಎಂದೂ ಕರೆಯಲಾಗುತ್ತದೆ. ಇಲ್ಲಿಂದ ಅಮೂಲ್ಯ ರತ್ನಗಳು ರಫ್ತಾಗುತ್ತವೆ.

ಬಸವನಗುಡಿ ಕೇಂದ್ರ ಚಾಂಪಿಯನ್

ರೋಟರಿ ಕ್ಲಬ್ ಆಯೋಜಿಸಿದ ಅಂತರ ಕ್ಲಬ್ ಈಜು: 3 ಚಿನ್ನ ಗಳಿಸಿದ ಸ್ಪರ್ಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ವಿಭಾಗಗಳಲ್ಲೂ ಪಾರಮ್ಯ ಮೆರೆದ ಬಸವನಗುಡಿ ಈಜುಕೇಂದ್ರ ಇಲ್ಲಿನ ನೆಟ್ಟಕಲ್ಲಪ್ಪ ಈಜುಕೇಂದ್ರದಲ್ಲಿ ರೋಟರಿ ಕ್ಲಬ್ ಆಫ್ ಬೆಂಗಳೂರು ಆಯೋಜಿಸಿದ್ದ ಅಂತರ ಕ್ಲಬ್ ಈಜು ಸ್ಪರ್ಧೆಯ ಚಾಂಪಿಯನ್ ಆಯಿತು.



ಸ್ಪರ್ಶ ಜೆ. ಮುನ್ನುಗ್ಗಿದ ಪರಿ –ಪ್ರಜಾವಾಣಿ ಚಿತ್ರ

ಫಲಿತಾಂಶಗಳು: ಬಾಲಕರ 100 ಮೀ ಫ್ರೀಸ್ಟೈಲ್ ಗುಂಪು 4: ಆರವ್ ಜೆ (ಪೂಜಾ ಅಕ್ವಾಟಿಕ್ ಸೆಂಟರ್)-1. ಕಾಲ: 1ನಿ 18.33ಸೆ, ಆಮವ್ ಅಕ್ಷಯ್ (ಬೆಂಗಳೂರು ಸ್ವಿಮ್ ರೀಸರ್ಚ್ ಸೆಂಟರ್–ಬಿಎಸ್‌ಆರ್‌ಸಿ), ಆ್ಯರನ್ ಡೊಮಿನಿಕ್ (ಡಾಲ್ಫಿನ್ ಅಕ್ವಾಟಿಕ್ಸ್)-3; ಗುಂಪು3: ಅಗಸ್ತ್ಯ ಮಂಜುನಾಥ್ (ಏಕಲವ್ಯ)-1. ಕಾಲ: 1:10.00, ಅಮೋಘ್ ಎಸ್.ಎಂ (ನಿಶಾ ಮಿಲೆಟ್ಸ್ ಸ್ವಿಮಿಂಗ್ ಅಕಾಡೆಮಿ)-2, ಮೊಹಮ್ಮದ್ ಬಿಲಾದುದ್ದೀನ್ (ಬಸವನಗುಡಿ ಅಕ್ವಾಟಿಕ್ ಸೆಂಟರ್)-3; ಗುಂಪು2: ಅಮಂತ್‌ಜಿತ್ ಮುಖರ್ಜಿ (ಬಿಎಸ್‌ಆರ್‌ಸಿ)-1. ಕಾಲ: 59.50, ಸುಯೋಗ್ ಗೌಡ (ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್–ಎನ್‌ಎಸಿ)-2, ಬಸಿತ್ ಅಹಮ್ಮದ್ (ಎಂಇಜಿ–ಸೆಂಟರ್)-3; ಗುಂಪು1: ಸಂಭವ್ ಆರ್ (ಬಿಎಸ್‌ಆರ್‌ಸಿ)-1. ಕಾಲ: 54.64, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)-2, ಅಕ್ಷಯ್ ಶೇಟ್ (ಬಿಎಸ್‌ಆರ್‌ಸಿ)-3; 50 ಮೀ ಬಟರ್‌ಫ್ಲೈ, ಗುಂಪು4: ಸಾತ್ವಿಕ್ ಸಿಂಗ್ (ಬಸವನಗುಡಿ)-1. ಕಾಲ: 38.97, ಅಬ್ದೀಲಿ ಮುರ್ಜುಜ (ಜಿಎಎಫ್‌ಆರ್‌ಎವೈ)-2, ಆಮವ್ ಅಕ್ಷಯ್ (ಬಿಎಸ್‌ಆರ್‌ಸಿ)-3; ಗುಂಪು3: ಅಮೋಘ್ (ನಿಶಾ ಮಿಲೆಟ್)-1. ಕಾಲ: 34.19, ಅಗಸ್ತ್ಯ ಮಂಜುನಾಥ್ (ಏಕಲವ್ಯ)-2, ಶಿವಕೃಷ್ಣನ್ (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)-3; ಗುಂಪು2: ಆದಿತ್ಯ ಥಾಪ (ಎಂಇಜಿ-ಸೆಂಟರ್)-1. ಕಾಲ: 1:03.90, ಹರಿಕಾರ್ತಿಕ್ (ಗೋಲ್ಡನ್ ಫಿನ್ಸ್)-2, ಸ್ವರೂಪ್ ಸತೀಶ್ (ಎಂಇಜಿ-ಸೆಂಟರ್)-3; ಗುಂಪು1: ನಯನ್ ವಿಘ್ನೇಶ್ (ಎನ್‌ಎಸಿ)-1. ಕಾಲ: 59.94, ಸಂಭವ್ ಆರ್ (ಬಿಎಸ್‌ಆರ್‌ಸಿ)-2, ಕಾರ್ತಿಕೇಯನ್ (ಡಾಲ್ಫಿನ್)-3; 50 ಮೀ ಫ್ರೀಸ್ಟೈಲ್: ಗುಂಪು4: ಅಬ್ದುಲಿ ಮುರ್ತಜಾ (ಜಿಎಎಫ್‌ಆರ್‌ಎವೈ)-1. ಕಾಲ: 35.44, ಲಕ್ಷ್ಯ (ಬಸವನಗುಡಿ)-2, ಅರ್ಣವ್ (ಬಿಎಸ್‌ಆರ್‌ಸಿ)-3; ಗುಂಪು3; ಅಗಸ್ತ್ಯ (ಏಕಲವ್ಯ)-1.ಕಾಲ: 31.89, ಅಮೋಘ್ (ನಿಶಾ ಮಿಲೆಟ್)-2, ಮೊಹಮ್ಮದ್ (ಬಸವನಗುಡಿ)-3; ಗುಂಪು2: ಅನಂತಜಿತ್ (ಬಿಎಸ್‌ಆರ್‌ಸಿ)-1. ಕಾಲ: 27.54, ಬಸಿತ್ (ಎಂಇಜಿ-ಸೆಂಟರ್)-2, ಸುಯೋಗ್ ಗೌಡ (ಎನ್‌ಎಸಿ)-3; ಗುಂಪು1: ಸಂಭವ್ ಆರ್ (ಬಿಎಸ್‌ಆರ್‌ಸಿ)-1. ಕಾಲ: 25.35, ನಯನ್ (ಎನ್‌ಎಸಿ)-2, ಸಂಕರ್ಷನ (ಗೋಲ್ಡನ್ ಫಿನ್ಸ್)-3; 50 ಮೀ ಬ್ಯಾಕ್‌ಸ್ಟ್ರೋಕ್; ಗುಂಪು4: ಅಬ್ದೀಲಿ ಮುರ್ತುಜ (ಜಿಎಎಫ್‌ಆರ್‌ಎವೈ)-1. ಕಾಲ: 41.60, ಆರವ್ (ಪೂಜಾ)-2, ವಿಶ್ರುತ್ (ಬಿಎಸ್‌ಆರ್‌ಸಿ)-3; ಗುಂಪು3: ಮೊಹಮ್ಮದ್-1. ಕಾಲ: 1:23.42, ಸ್ಕಂದನ್ ಪ್ರಸಾದ್-2, ಶೇಷಾದ್ರಿ-3 (ಮೂವರೂ ಬಸವನಗುಡಿ); ಗುಂಪು2: ಅನಂತಜಿತ್ (ಬಿಎಸ್‌ಆರ್‌ಸಿ)-1. ಕಾಲ: 1:09.60, ರಾಘವ್ ಸ್ವಚ್ಛಂದಂ-2, ಸಾತ್ವಿಕ್ ಪ್ರಸನ್ನ-3 (ಇಬ್ಬರೂ ಎನ್‌ಎಸಿ); ಗುಂಪು1: ಅಕ್ಷಯ್ (ಬಿಎಸ್‌ಆರ್‌ಸಿ)-1. ಕಾಲ: 1:05.47, ಆಕರ್ಷ (ಬಸವನಗುಡಿ)-2; 50 ಮೀ ಬ್ರೆಸ್ಟ್‌ಸ್ಟ್ರೋಕ್: ಗುಂಪು4: ಆರವ್ (ಪೂಜಾ)-1. ಕಾಲ: 47.24, ಸಾತ್ವಿಕ್-2, ಲೋಹಿತ್-3 (ಇಬ್ಬರೂ ಬಸವನಗುಡಿ); ಗುಂಪು3: ಶಿವಕೃಷ್ಣನ್ (ಗೋಲ್ಡನ್ ಫಿನ್ಸ್)-1. ಕಾಲ: 1:41.56, ವಿಪ್ಲವ್ (ನಿಶಾ ಮಿಲೆಟ್)-2, ಶ್ರೇಯಸ್ (ಸ್ಟಾರ್ ಅಕ್ವಾಟಿಕ್ಸ್)-3; ಗುಂಪು2: ಬಸಿತ್ ಅಹಮ್ಮದ್-1. ಕಾಲ: 1:12.87, ಅಭಿಷೇಕ್-2, (ಇಬ್ಬರೂ ಎಂಇಜಿ-ಸೆಂಟರ್), ಸುಯೋಗ್ (ಎನ್‌ಎಸಿ)-3; ಗುಂಪು1: ನಯನ್ ವಿಘ್ನೇಶ್ (ಎನ್‌ಎಸಿ)-1. ಕಾಲ: 1:12.09, ಸಂಕರ್ಷನ (ಗೋಲ್ಡನ್ ಫಿನ್ಸ್)-2, ಭೂಪೇಂದ್ರ (ಎಂಇಜಿ-ಸೆಂಟರ್).

ಬಾಲಕಿಯರ 100 ಮೀ ಫ್ರೀಸ್ಟೈಲ್ ಗುಂಪು 4: ತನ್ವಿ ಗೌರವ್ (ವಿಜಯನಗರ)-1. ಕಾಲ: 1:19.85, ಸ್ಪರ್ಶ ಹರೀಶ (ಪೂಜಾ)-2, ವೆನ್ನಶ್ರೀ (ಮತ್ಸ್ಯ ಐಎನ್‌ಸಿ)-3; ಗುಂಪು3: ಸ್ಪರ್ಶ ಜೆ (ಬಸವನಗುಡಿ)-1. ಕಾಲ: 1:14.23, ಆಕಾಂಕ್ಷ ತಗಡೂರು (ಎನ್‌ಎಸಿ), ಅದಿತಿ ವಿನಾಯಕ್ (ಬಸವನಗುಡಿ); ಗುಂಪು2: ಆರುಷಿ ಅಗರವಾಲ್ (ಡಾಲ್ಫಿನ್)-1. ಕಾಲ: 1:06.25, ಲಿನೇಶಾ ಅನಿಲ್ ಕುಮಾರ್ (ಬಿಎಸ್‌ಆರ್‌ಸಿ)-2, ಅಂಜನ ಶಿವಕುಮಾರ್ (ಬಸವನಗುಡಿ)-3; ಗುಂಪು1; ನಯಿಷಾ ಶೆಟ್ಟಿ (ಡಾಲ್ಫಿನ್)-1. ಕಾಲ: 1:05.47, ಶ್ರೇಯಾ ಬಿ.ಎ (ಎನ್‌ಎಸಿ)-2, ಸಾಕ್ಷಿ ದೇಮನ್ನವರ್ (ಮತ್ಸ್ಯ)-3; 50 ಮೀ ಬಟರ್‌ಫ್ಲೈ, ಗುಂಪು4: ತನ್ವಿ ಗೌರವ್ (ವಿಜಯನಗರ)-1, ಕಾಲ: 42.94, ಸಾನ್ವಿ ತ್ರಿಪಾಠಿ (ಮತ್ಸ್ಯ)-2, ಭಾನುಪ್ರಿಯ (ಬಿಎಸ್‌ಆರ್‌ಸಿ)-3; ಗುಂಪು3: ಸ್ಪರ್ಶ (ಬಸವನಗುಡಿ)-1. ಕಾಲ: 37.09, ಡಿಂಪಲ್ ಸೋನಾಕ್ಷಿ (ಡಾಲ್ಫಿನ್)-2, ಜಾಹ್ಮವಿ ಶೆಟ್ಟಿ (ಬಸವನಗುಡಿ)-3; ಗುಂಪು2: ತನಿಶ್ತಾ ನಾಯರ್ (ಜಿಎಎಫ್‌ಆರ್‌ಎವೈ)-1. ಕಾಲ: 1:13.37, ಸಾವರ್ ಅಕುಶ್ಕರ್ (ಜಿಎಎಫ್‌ಆರ್‌ಎವೈ)-2, ಮೋನ್ಯ ಕೌಸುಮಿ (ಎನ್‌ಎಸಿ)-3; ಗುಂಪು1: ನಯಿಷಾ ಶೆಟ್ಟಿ-1. ಕಾಲ: 1:09.36, ಅನ್ವಯಿ-2 (ಇಬ್ಬರೂ ಡಾಲ್ಫಿನ್), ಸಾಕ್ಷಿ (ಮತ್ಸ್ಯ)-3; 50 ಮೀ ಫ್ರೀಸ್ಟೈಲ್: ಗುಂಪು4: ಸ್ಪರ್ಶ (ಪೂಜಾ)-1.ಕಾಲ: 37.15, ವೆನ್ನಶ್ರೀ (ಮತ್ಸ್ಯ)-2, ವರ್ಷಿಣಿ (ಬಸವನಗುಡಿ)-3; ಗುಂಪು3: ಸ್ಪರ್ಶ-1. ಕಾಲ: 33.99, ಆಕಾಂಕ್ಷ (ಎನ್‌ಎಸಿ)-2, ಅಹಲ್ಯ (ನಿಶಾ ಮಿಲೆಟ್)-3; ಗುಂಪು2: ಲಿನೇಶಾ (ಬಿಎಸ್‌ಆರ್‌ಸಿ)-1. ಕಾಲ: 30.11, ಆರುಷಿ (ಡಾಲ್ಫಿನ್)-2, ತನಿಶ್ತಾ (ಜಿಎಎಫ್‌ಆರ್‌ಎವೈ)-3; ಗುಂಪು1: ನಯಿಷಾ ಶೆಟ್ಟಿ (ಡಾಲ್ಫಿನ್)-1. ಕಾಲ: 30.36, ಶ್ರೇಯಾ ಬಿ. (ಎನ್‌ಎಸಿ)-2, ಸಾಕ್ಷಿ (ಮತ್ಸ್ಯ)-3; 50 ಮೀ ಬ್ಯಾಕ್‌ಸ್ಟ್ರೋಕ್; ಗುಂಪು4: ಇಂಚರ ಭಟ್ (ಮತ್ಸ್ಯ)-1. ಕಾಲ: 46.14, ತನ್ವಿ (ವಿಜಯನಗರ)-2, ಅದ್ವಿತ (ಬಸವನಗುಡಿ)-3; ಗುಂಪು3: ಆಕಾಂಕ್ಷ (ಎನ್‌ಎಸಿ)-1. ಕಾಲ: 1:27.46, ಅದಿತಿ, ಜಾಹ್ನವಿ (ಇಬ್ಬರೂ ಬಸವನಗುಡಿ); ಗುಂಪು2: ಸಿದ್ದಿ ಶಾ-1. ಕಾಲ: 1:16.01, ಆರುಷಿ-2 (ಇಬ್ಬರೂ ಡಾಲ್ಫಿನ್), ತನಿಶ್ತ (ಜಿಎಎಫ್‌ಆರ್‌ಎವೈ)-3; ಗುಂಪು1: ಅನ್ವಯಿ (ಡಾಲ್ಫಿನ್)-1. ಕಾಲ: 1:24.88, ಭವ್ಯ (ಮತ್ಸ್ಯ)-2, ನಯನ (ಎನ್‌ಎಸಿ)-3; 50 ಮೀ ಬ್ರೆಸ್ಟ್‌ಸ್ಟ್ರೋಕ್: ಗುಂಪು4: ಸ್ಪರ್ಶ (ಪೂಜಾ)-1. ಕಾಲ: 46.44, ಸಿಯಾ-2, ದೃತಿ-3 (ಇಬ್ಬರೂ ಬಸವನಗುಡಿ); ಗುಂಪು3: ಪ್ರತೀಕ್ಷ (ಡಿಕೆವಿ ಅಕ್ವಾಟಿಕ್ ಸೆಂಟರ್)-1. ಕಾಲ: 1:38.27, ನಾಗಸಾಕ್ಷಿ-2, ಅದಿತಿ-3 (ಇಬ್ಬರೂ ಬಸವನಗುಡಿ); ಗುಂಪು2: ಲಿನೇಶಾ (ಬಿಎಸ್‌ಆರ್‌ಸಿ)-1. ಕಾಲ: 1:20.03, ಭಾಷಿಕ (ಪೂಜಾ)-2, ಅಂಜನ (ಬಸವನಗುಡಿ)-3; ಗುಂಪು1: ಮೇಘಾಂಜಲಿ (ಬಿಎಸ್‌ಆರ್‌ಸಿ)-1. ಕಾಲ: 1:27.93, ಅನ್ವಯಿ (ಡಾಲ್ಫಿನ್)-2, ರಿಯಾ (ನಿಶಾ ಮಿಲೆಟ್ಸ್)-3.

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ತಂಡಕ್ಕೆ ಅರವಿಂದ್ ನಾಯಕ

ಬೆಂಗಳೂರು: ದಕ್ಷಿಣ ವಲಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕದ ಪುರುಷ ಮತ್ತು ಮಹಿಳೆಯರ ತಂಡಗಳನ್ನು ಪ್ರಕಟಿಸಲಾಗಿದೆ.

ದಕ್ಷಿಣ ವಲಯ ಚಾಂಪಿಯನ್‌ಷಿಪ್ ಡಿಸೆಂಬರ್ 13ರಿಂದ 17ರವರೆಗೆ ಚೆನ್ನೈನಲ್ಲಿ ನಡೆಯಲಿದೆ. ರಾಜ್ಯ ಪುರುಷರ ತಂಡಕ್ಕೆ ಅರವಿಂದ್ ನಾಯಕರಾಗಿದ್ದರೆ, ಮಹಿಳಾ ತಂಡದ ಸಾರಥ್ಯವನ್ನು ಭೂಮಿಕಾ ಅವರು ವಹಿಸಲಿದ್ದಾರೆ.

ತಂಡಗಳು: ಪುರುಷರು: ಅರವಿಂದ್ (ನಾಯಕ), ಅನಿಲ್ ಕುಮಾರ್, ಹರೀಶ್ ಮುತ್ತು ಕುಮಾರ್ (ಬ್ಯಾಂಕ್ ಆಫ್ ಬರೋಡಾ), ಮನು ಥಾಮಸ್, ಜಿನು ಥಾಮಸ್ ಮತ್ತು ರಾಜಶೇಖರ್ (ಎಂಇಜಿ ಮತ್ತು ಸೆಂಟರ್), ಅಭಿಷೇಕ್ ಗೌಡ (ಸದರ್ನ್ ಬ್ಲ್ಯೂಸ್), ಶಶಾಂಕ್ ರೈ, ಅಶ್ವಿಜ್ ವಿ. (ಮಂಗಳೂರು ಬಿ.ಸಿ), ಮನೋಜ್ ಕುಮಾರ್ (ಕ್ರೀಡಾ ವಸತಿನಿಲಯ, ಬೆಂಗಳೂರು), ಪ್ರತ್ಯಾಂಶು ಥೋಮರ್ (ಯಂಗ್ ಒರಾಯನ್ಸ್ ಎಸ್‌ಸಿ), ಅಚಿಂತ್ಯ ಕೃಷ್ಣ (ಬೀಗಲ್ಸ್). ಕೋಚ್: ತಾಂಕ್‌ಚಾನ್, ವ್ಯವಸ್ಥಾಪಕ: ಪ್ರಭುದೇವ್.

ಮಹಿಳೆಯರು: ಭೂಮಿಕಾ (ನಾಯಕಿ), ಮಾನಸಾ (ಕ್ರೀಡಾ ಶಾಲೆ, ವಿದ್ಯಾನಗರ), ಸಂಜನಾ, ಮೇಖಲಾ ಗೌಡ, ಚಂದನಾ (ಬೀಗಲ್ಸ್), ಗ್ರೀಷ್ಮಾ ಎನ್, ಪಾವನಿ ಎಸ್ (ಮೌಂಟ್ಸ್ ಕ್ಲಬ್) ಹರಿಣಿ, ಸಂಧ್ಯಾ (ಕೆ.ಎಸ್.ಹೆಗ್ಡೆ, ನಿಟ್ಟೆ) ಅನಘಾ ನಾಗರಾಜನ್ (ಜೆಎಸ್‌ಸಿ) ಸಹನಾ (ಕ್ರೀಡಾ ವಸತಿನಿಲಯ, ಮೈಸೂರು) ಲೇಖನಾ ಎಂ. (ಯಂಗ್ ಒರಾಯನ್ಸ್ ಎಸ್‌ಸಿ). ಕೋಚ್: ಶ್ರೀನಿವಾಸ ಮೂರ್ತಿ, ವ್ಯವಸ್ಥಾಪಕಿ : ಅಂಚೆ ಅಶ್ವಥಾ.

ವಿಶ್ವ ಬ್ಯಾಡ್ಮಿಂಟನ್: ಶ್ರೀಕಾಂತ್‌ಗೆ ಜಯ

ಹುವೆಲ್ವಾ, ಸ್ಪೇನ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 21-12, 21-16ರಿಂದ ಸ್ಪೇನ್‌ನ ಪ್ಯಾಬ್ಲೊ ಅಬಿಯನ್ ಅವರನ್ನು ಮಣಿಸಿದರು. ಕೇವಲ 36 ನಿಮಿಷಗಳಲ್ಲಿ ಪಂದ್ಯ ಮುಗಿಯಿತು.

ಡಬಲ್ಸ್‌ನಲ್ಲಿ ಸ್ಪರ್ಧಿಸಿದ್ದ ಮನು ಅತ್ರಿ– ಬಿ.ಸುಮೀತ್ ರೆಡ್ಡಿ 16-21, 15-21ರಿಂದ ಡೆನ್ಮಾರ್ಕ್‌ನ ಜೋಯಲ್ ಎಲ್ಪ್ ಮತ್ತು ರಾಸ್ಮಸ್ ಜೇರ್ ಎದುರು ನಿರಾಸೆ ಅನುಭವಿಸಿದರು.

ಇದಕ್ಕೂ ಮೊದಲು ಪೂಜಾ ದಂಡು ಮತ್ತು ಸಂಜನಾ ಸಂತೋಷ್ ಅವರು ಮಹಿಳಾ ಡಬಲ್ಸ್‌ನ ಮೊದಲ ಸುತ್ತಿನಲ್ಲಿ 12-21ರಿಂದ ನೆದರ್ಲೆಂಡ್ಸ್‌ನ ಅಲಿಸ್ಸಾ ತಿರ್ತೊಸೆಂಟೊನೊ– ಇಮ್ಕೆ ವ್ಯಾನ್ ಡರ್ ಆರ್ ಎದುರು ಹಿನ್ನಡೆಯಲ್ಲಿದ್ದಾಗ ಪಂದ್ಯದಿಂದ ಹಿಂದೆ ಸರಿದರು.

ಟೆನಿಸ್ ಆಟಗಾರ ಸಂಟಾನ ನಿಧನ

ಮ್ಯಾಡ್ರಿಡ್ (ರಾಯಿಟರ್ಸ್): ನಾಲ್ಕು ಬಾರಿಯ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಸ್ಪೇನ್‌ನ ಟೆನಿಸ್ ದಿಗ್ಗಜ ಮ್ಯಾನ್ಯುಯೆಲ್ ಸಂಟಾನ (83) ಬುಧವಾರ ನಿಧನರಾದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸಂಟಾನ 1961 ಹಾಗೂ 1964ರಲ್ಲಿ ಫ್ರೆಂಚ್ ಓಪನ್ ಪ್ರಶಸ್ತಿ ಜಯಿಸಿದ್ದರು. 1966ರಲ್ಲಿ ವಿಂಬಲ್ಡನ್ ಟ್ರೋಫಿ ಗೆದ್ದುಕೊಂಡಿದ್ದರು. 1965ರಲ್ಲಿ ಅಮೆರಿಕ ಓಪನ್ ಕಿರೀಟ ಧರಿಸಿದ್ದರು.

ವಿಜಯ್ ಹಜಾರೆ ಟೂರ್ನಿ: ಕಾರ್ಯಪ್ಪ, ಸಿದ್ಧಾರ್ಥ್ ಮಿಂಚು; ಬರೋಡಾಗೆ ಸೋಲು

ಕರ್ನಾಟಕ ಜಯಭೇರಿ

ಪ್ರಜಾವಾಣಿ ವಾರ್ತೆ



ಕೆ.ಸಿ.ಕಾರ್ಯಪ್ಪ –ಟ್ವಿಟರ್ ಚಿತ್ರ



ಆರ್. ಸಮರ್ಥ್– ಪ್ರಜಾವಾಣಿ ಚಿತ್ರ

ಬೆಂಗಳೂರು: ಮಳೆ ಕಾಡಿದ ಪಂದ್ಯದಲ್ಲಿ ದಿಟ್ಟ ಆಟವಾಡಿದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು. ತಿರುವನಂತಪುರದ ಮಂಗಳಾಪುರ ಕ್ರೀಡಾಂಗಣದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗ ಬರೋಡಾವನ್ನು (ವಿಜೆಡಿ ನಿಯಮದಡಿ) ಆರು ವಿಕೆಟ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 48.3 ಓವರ್‌ಗಳಲ್ಲಿ ಎದುರಾಳಿಗಳನ್ನು 176 ರನ್‌ಗಳಿಗೆ ನಿಯಂತ್ರಿಸುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ಬರೋಡ ಇನಿಂಗ್ಸ್ ಮುಗಿದ ಕೂಡಲೇ ಮಳೆ ಸುರಿದ ಕಾರಣ ಪಂದ್ಯಕ್ಕೆ ಅಡ್ಡಿಯಾಯಿತು. ಮತ್ತೆ ಆರಂಭಗೊಂಡಾಗ 42 ಓವರ್‌ಗಳಲ್ಲಿ 147 ರನ್‌ಗಳ ಗುರಿಯನ್ನು ನೀಡಲಾಯಿತು.

ಆರಂಭಿಕ ಜೋಡಿ ಆರ್. ಸಮರ್ಥ್ ಮತ್ತು ರೋಹನ್ ಕದಂ 44 ರನ್ ಸೇರಿಸಿದರು. ಅಷ್ಟರಲ್ಲಿ ರೋಹನ್ ವಿಕೆಟ್ ಕಳೆದುಕೊಂಡರು.

ನಂತರ ಸಿದ್ಧಾರ್ಥ್ ಆಟ ರಂಗೇರಿತು. 25 ರನ್‌ಗಳ ಜೊತೆಯಾಟವಾಡಿ ಸಮರ್ಥ್ ಔಟಾದರು. ನಾಯಕ ಮನೀಷ್ ಪಾಂಡೆ ಕೇವಲ 19 ರನ್ ಗಳಿಸಿ ಔಟಾದರೆ ಕರುಣ್ ನಾಯರ್ ರನ್ ಔಟಾಗಿ ವಾಪಸಾದರು.

ಆದರೆ ಸಿದ್ಧಾರ್ಥ್ ಕ್ರೀಸ್‌ನಲ್ಲಿ ತಳವೂರಿ ಇನಿಂಗ್ಸ್ ಮುನ್ನಡೆಸಿದರು. ಮುರಿಯದ ಐದನೇ ವಿಕೆಟ್‌ಗೆ ವಿಕೆಟ್ ಕೀಪರ್ ಶರತ್ ಜೊತೆ 47 ರನ್‌ಗಳ ಜೊತೆಯಾಟವಾಡಿ ಅವರು ತಂಡವನ್ನು ಸುಲಭವಾಗಿ ಗೆಲುವಿನ ದಡ ಸೇರಿಸಿದರು. ತಂಡ ಗೆದ್ದಾಗ ಇನ್ನೂ 20 ಎಸೆತಗಳು ಬಾಕಿ ಉಳಿದಿದ್ದವು.

ಮೊದಲು ಬ್ಯಾಟಿಂಗ್ ಮಾಡಿದ ಬರೋಡ ತಂಡಕ್ಕೆ ಆರಂಭಿಕ ಜೋಡಿ ಕೇದಾರ್ ದೇವಧರ್ ಮತ್ತು ಆದಿತ್ಯ ವಾಘ್ಮೋಡೆ 59 ರನ್‌ಗಳ ಜೊತೆಯಾಟದ ಮೂಲಕ ಭರವಸೆ ಮೂಡಿಸಿದರು. ಇವರಿಬ್ಬರ ವಿಕೆಟ್ ಕೌಶಿಕ್ ಉರುಳಿಸಿದರು. ಹಿಂದಿನ ಪಂದ್ಯದ ಹೀರೊ ಪ್ರವೀಣ್ ದುಬೆ ಅವರು ಅಭಿಮನ್ಯು ಸಿಂಗ್ ರಜಪೂತ್ ವಿಕೆಟ್ ಪಡೆದರು. ನಂತರ ಕೃಣಾಲ್ ಪಾಂಡ್ಯ ತಾಳ್ಮೆಯ ಆಟದ ಮೂಲಕ ರನ್ ಸೇರಿಸಿದರು. ಅವರು ಕೆ.ಸಿ.ಕಾರ್ಯಪ್ಪ ಅವರ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ನಂತರ ತಂಡದ ವಿಕೆಟ್‌ಗಳು ಬೇಗನೇ ಉರುಳತೊಡಗಿದವು.

ಭಾನು ಪನ್ಯ ಏಕಾಂಗಿ ಹೋರಾಟದ ಮೂಲಕ ತಂಡಕ್ಕೆ ಆಸರೆಯಾದರು. ಇನಿಂಗ್ಸ್‌ನ ಎರಡು ಸಿಕ್ಸರ್‌ಗಳು ಅವರ ಬ್ಯಾಟಿನಿಂದ ಬಂದವು. ಐವರು ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟಲಾಗದೆ ಮರಳಿದರು.

ಸ್ಕೋರ್ ಕಾರ್ಡ್

ಬರೋಡಾ 176 (48.3 ಓವರ್)
ಕೇದಾರ್ ಸಿ ಶರತ್ ಬಿ ಕೌಶಿಕ್ 31 (41 ಎ, 4x4), ಆದಿತ್ಯ ಸಿ ಶರತ್ ಬಿ ಕೌಶಿಕ್ 27 (38 ಎ, 4x3), ಅಭಿಮನ್ಯು ಸಿಂಗ್ ಬಿ ದುಬೆ 4 (15 ಎ), ಕೃಣಾಲ್ ಎಲ್‌ಬಿಡಬ್ಲ್ಯು ಬಿ ಕಾರ್ಯಪ್ಪ 24 (50 ಎ, 4x2), ಭಾನು ಬಿ ದುಬೆ 40 (64 ಎ, 4x1, 6x2), ಧ್ರುವ ಬಿ ಕಾರ್ಯಪ್ಪ 2 (10 ಎ), ಮಿತೇಶ್ ಎಲ್‌ಬಿಡಬ್ಲ್ಯು ಬಿ ಕಾರ್ಯಪ್ಪ 15 (32 ಎ), ಕಾರ್ತಿಕ್ ರನೌಟ್ (ಕರುಣ್) 6 (12 ಎ), ಅತೀತ್ ಸಿ ಶರತ್ ಬಿ ಕೌಶಿಕ್ 15 (18 ಎ), ಭಾರ್ಗವ್ ರನೌಟ್ (ಶರತ್) 2 (11 ಎ), ಲುಕ್ಮನ್ ಔಟಾಗದೆ 0 (1 ಎ)
ಇತರೆ (ಲೆಗ್‌ಬೈ 6, ನೋಬಾಲ್ 1, ವೈಡ್ 3) 10
ವಿಕೆಟ್ ಪತನ: 1-59 (ಕೇದಾರ್ ದೇವಧರ್, 11.6), 2-65 (ಆದಿತ್ಯ ವಾಘ್ಮೋರೆ, 13.6), 3-73 (ಅಭಿಮನ್ಯು ಸಿಂಗ್ ರಜಪೂತ್, 16.5), 4-117 (ಕೃಣಾಲ್ ಪಾಂಡ್ಯ, 30.5), 5-129 (ಧ್ರುವ ಪಟೇಲ್, 34.4), 6-140 (ಭಾನು ಪನಿಯ, 36.6), 7-152 (ಕಾರ್ತಿಕ್ ಕಾಕಡೆ, 41.4), 8-165 (ಮಿತೇಶ್ ಪಟೇಲ್, 45.2), 9-174 (ಭಾರ್ಗವ್ ಭಟ್, 47.6), 10-176 (ಅತೀತ್ ಶೇಟ್, 48.3)
ಬೌಲಿಂಗ್: ವಾಸುಕಿ ಕೌಶಿಕ್ 8.3–0–38–3, ಎಂ.ವೆಂಕಟೇಶ್ 4–0–17–0, ಜೆ.ಸುಚಿತ್ 10–2–37–0, ಕೆ.ಸಿ. ಕಾರ್ಯಪ್ಪ 10–0–28–3, ಪ್ರವೀಣ್ ದುಬೆ 10–0–31–2, ರವಿಕುಮಾರ್ ಸಮರ್ಥ್ 6–0–19–0

ಕರ್ನಾಟಕ 4ಕ್ಕೆ 150 (38.4 ಓವರ್)
ಸಮರ್ಥ್ ಸ್ಟಂಪ್ಡ್ ಧ್ರುವ ಬಿ ಕೃಣಾಲ್ 35 (61ಎ, 4x3), ರೋಹನ್ ಸಿ ಅಭಿಮನ್ಯು ಸಿಂಗ್ ಬಿ ಕಾರ್ತಿಕ್ 14 (34ಎ, 4x2), ಸಿದ್ಧಾರ್ಥ್ ಔಟಾಗದೆ 46 (78ಎ, 4x2), ಪಾಂಡೆ ರನೌಟ್ ಪ್ರತ್ಯೂಷ್‌ಕುಮಾರ್ (ಬದಲಿ) 19 (21ಎ, 4x1, 6x1), ಕರುಣ್ ರನೌಟ್ (ಅಭಿಮನ್ಯು ಸಿಂಗ್) 0 (11ಎ), ಶರತ್ ಔಟಾಗದೆ 21 (28ಎ, 4x2)
ಇತರೆ (ಬೈ 6, ನೋಬಾಲ್ 1, ವೈಡ್ 8) 15
ವಿಕೆಟ್ ಪತನ: 1-44 (ರೋಹನ್ ಕದಂ, 11.2), 2-69 (ರವಿಕುಮಾರ್ ಸಮರ್ಥ್, 20.4), 3-102 (ಮನೀಷ್ ಪಾಂಡೆ, 28.2), 4-103 (ಕರುಣ್ ನಾಯರ್, 30.5)
ಬೌಲಿಂಗ್: ಲುಕ್ಮನ್ ಮೆರಿವಾಲಾ 7.4–2–31–0, ಅತೀತ್ ಶೇಟ್ 7–1–33–0, ಕೃಣಾಲ್ ಪಾಂಡ್ಯ 10–1–27–1, ಕಾರ್ತಿಕ್ ಕಾಕಡೆ 4–1–11–1, ಭಾರ್ಗವ್ ಭಟ್ 9–1–36–0, ಧ್ರುವ ಪಟೇಲ್ 1–0–6–0

ಫಲಿತಾಂಶ: ವಿಜೆಡಿ ನಿಯಮದಡಿ ಕರ್ನಾಟಕ ತಂಡಕ್ಕೆ ಆರು ವಿಕೆಟ್‌ಗಳ ಜಯ

ಪುದುಚೇರಿಗೆ ಮಣಿದ ತಮಿಳುನಾಡು

ತಿರುವನಂತಪುರಂ (ಪಿಟಿಐ): ಜಿದ್ದಾಜಿದ್ದಿ ಹೋರಾಟದಲ್ಲಿ ಪುದುಚೇರಿ ತಂಡವು ವಿಜಯ್ ಹಜಾರೆ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಬಲಿಷ್ಠ ತಮಿಳುನಾಡು ವಿರುದ್ಧ ವಿಜೆಡಿ ನಿಯಮದಡಿ ಒಂದು ರನ್‌ನ ರೋಚಕ ಜಯ ಸಾಧಿಸಿತು.

ಇಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ 49 ಓವರ್‌ಗಳಲ್ಲಿ 9 ವಿಕೆಟ್‌ಗೆ 225 ರನ್ ಗಳಿಸಿತು. ಗೆಲುವಿಗೆ 44 ಓವರ್‌ಗಳಲ್ಲಿ 206 ರನ್ ಗುರಿ ಪಡೆದ ತಮಿಳುನಾಡು 9 ವಿಕೆಟ್ ಕಳೆದುಕೊಂಡು 204 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಪುದುಚೇರಿ ಪರ ಫಾಬಿದ್ ಅಹಮದ್ ಔಟಾಗದೆ 87 ರನ್ ಕಲೆಹಾಕಿದರು.

ಸಂಕ್ಷಿಪ್ತ ಸ್ಕೋರುಗಳು: 'ಬಿ' ಗುಂಪು: ಪುದುಚೇರಿ: 40 ಓವರ್‌ಗಳಲ್ಲಿ 9 ವಿಕೆಟ್‌ಗೆ 225 (ಫಾಬಿದ್ ಅಹಮದ್ ಔಟಾಗದೆ 87, ಆರ್.ರಘುಪತಿ 29 ವಾಷಿಂಗ್ಟನ್ ಸುಂದರ್ 48ಕ್ಕೆ 5, ರಘುಪತಿ ಸಿಲಂಬರಸನ್ 48ಕ್ಕೆ 2). ತಮಿಳುನಾಡು: 44 ಓವರ್‌ಗಳಲ್ಲಿ 9 ವಿಕೆಟ್‌ಗೆ 204 (ದಿನೇಶ್ ಕಾರ್ತಿಕ್, 65, ಎನ್.ಜಗದೀಶನ್ 64, ಫಾಬಿದ್ ಅಹಮದ್ 22ಕ್ಕೆ 2, ಭರತ್ ಶರ್ಮಾ 33ಕ್ಕೆ 2). ಫಲಿತಾಂಶ: ವಿಜೆಡಿ ನಿಯಮದಡಿ ಪುದುಚೇರಿ ತಂಡಕ್ಕೆ 1 ರನ್ ಜಯ.

ಬಂಗಾಳ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 318 (ಅನುಸ್ಟುಪ್ ಮಜುಂದಾರ್ 110, ಶಹನಾಜ್ ಅಹಮದ್ 106; ಮೋಹಿತ್ ಅವಸ್ಥಿ 63ಕ್ಕೆ 4). ಮುಂಬೈ: 41 ಓವರ್‌ಗಳಲ್ಲಿ 8 ವಿಕೆಟ್‌ಗೆ 223 (ಸೂರ್ಯಕುಮಾರ್ ಯಾದವ್ 49, ಅರ್ಮಾನ್ ಜಾಫರ್ 47, ಶಮ್ಸ್ ಮುಲಾನಿ 36; ಪ್ರದೀಪ್ತ ಪ್ರಮಾಣಿಕ್ 33ಕ್ಕೆ 3). ಫಲಿತಾಂಶ: ವಿಜೆಡಿ ನಿಯಮದಡಿ ಬಂಗಾಳಕ್ಕೆ 67 ರನ್‌ಗಳ ಜಯ.



ಎಸ್‌ಸಿ ಈಸ್ಟ್ ಬೆಂಗಾಲ್ ತಂಡದ ತೊಮಿಸ್ಲಾವ್ ಮಾರ್ಸೆಲಾ ಅವರು ಸಹ ಆಟಗಾರರ ಜೊತೆ ಸಂಭ್ರಮಿಸಿದರು —ಐಎಸ್‌ಎಲ್ ಚಿತ್ರ


ಗಾಲ್ಫ್: ಆರ್ಯನ್ ಚಾಂಪಿಯನ್



ಆರ್ಯನ್

ಬೆಂಗಳೂರು: ಮೈಸೂರಿನ ಆರ್ಯನ್ ರೂಪ ಆನಂದ್ ಅವರು ಐಜಿಯು ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ನಡೆದ ಕೊನೆಯ ಸುತ್ತಿನಲ್ಲಿ 20 ವರ್ಷದ ಆರ್ಯನ್ ಪಂಜಾಬ್‌ನ ಯುವರಾಜ್ ಸಿಂಗ್ ಅವರನ್ನು ಹಿಂದಿಕ್ಕಿದರು.

ಈ ಮೂಲಕ ಪ್ರಶಸ್ತಿ ಉಳಿಸಿಕೊಂಡರು. 2019ರಲ್ಲಿ ನಡೆದ ಹಿಂದಿನ ಆವೃತ್ತಿಯಲ್ಲೂ ಅವರು ಚಾಂಪಿಯನ್ ಆಗಿದ್ದರು. ಆರ್ಯನ್ ಈ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡು ಬಾರಿ ಪ್ರಶಸ್ತಿ ಗೆದ್ದ ಅಪರೂಪದ ಸಾಧನೆಯನ್ನೂ ಮಾಡಿದರು. ಬೆಂಗಳೂರಿನ ಚಿಕ್ಕರಂಗಪ್ಪ ಈ ಸಾಧನೆ ಮಾಡಿದ್ದರು.



ಯೊಂಗ್ ಸಂಗ್ ಯೂ

ಪಿಪಿಬಿಎಗೆ ಯೊಂಗ್ ಸಂಗ್ ಮುಖ್ಯ ಕೋಚ್


ಬೆಂಗಳೂರು: ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯು (ಪಿಪಿಬಿಎ) ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತ, ಕೊರಿಯಾದ ಯೊಂಗ್ ಸಂಗ್ ಯೂ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಿದೆ.

ಒಲಿಂಪಿಕ್ ಗೋಲ್ಡ್ ಕೋಸ್ಟ್ ಸಂಸ್ಥೆಯ ಸಹಯೋಗದಲ್ಲಿ ಪಿಪಿಬಿಎ ಯೊಂಗ್ ಸಂಗ್ ಯೂ ಅವರ ಹೆಸರನ್ನು ಅಂತಿಮಗೊಳಿಸಿದೆ. ಪಿಪಿಬಿಎಗೆ ಇನ್ಫೊಸಿಸ್ ಫೌಂಡೇಷನ್ ಕೂಡ ನೆರವು ನೀಡುತ್ತಿದೆ.

47 ವರ್ಷದ ಯೊಂಗ್ ಅವರು 2000ರ ಸಿಡ್ನಿ ಹಾಗೂ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಪುರುಷರ ಡಬಲ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಏಷ್ಯನ್ ಗೇಮ್ಸ್‌ಗಳಲ್ಲಿ ಕೊರಿಯಾ ತಂಡವನ್ನು ಪ್ರತಿನಿಧಿಸಿದ್ದರು.

ಕೊರಿಯಾ, ಮಲೇಷ್ಯಾ ಮತ್ತು ಸಿಂಗಪುರ ರಾಷ್ಟ್ರೀಯ ತಂಡಗಳಿಗೂ ತರಬೇತಿ ನೀಡಿದ ಅನುಭವ ಅವರಿಗಿದೆ.

ಕ್ರಿಕೆಟ್: ಋತುರಾಜ್, ವೆಂಕಟೇಶ್ ಆಯ್ಕೆ ಸಾಧ್ಯತೆ



ಋತುರಾಜ್ ಗಾಯಕವಾಡ್ —ಟ್ವಿಟರ್ ಚಿತ್ರ

ನವದೆಹಲಿ (ಪಿಟಿಐ): ಯುವ ಆಟಗಾರರಾದ ಋತುರಾಜ್ ಗಾಯಕವಾಡ್ ಮತ್ತು ವೆಂಕಟೇಶ್ ಅಯ್ಯರ್ ಅವರು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳಲಿರುವ ಭಾರತ ತಂಡಕ್ಕೆ ಆಯ್ಕೆಯಾಗುವ ಸಾಧ್ಯತೆ ಇದೆ. ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ನೀರಸ ಆಟವಾಡಿರುವ ಶಿಖರ್ ಧವನ್ ಅವರ ಭವಿಷ್ಯ ಡೋಲಾಯಮಾನವಾಗಿದೆ.

ಜನವರಿಯಲ್ಲಿ ನಡೆಯಲಿರುವ ಏಕದಿನ ಸರಣಿಗೆ ಭಾರತ ತಂಡದ ನಾಯಕನಾಗಿ ರೋಹಿತ್ ಶರ್ಮಾ ಅವರನ್ನು ಬಿಸಿಸಿಐ ನೇಮಕ ಮಾಡಿದೆ. ಆದರೆ ತಂಡದ ಆಯ್ಕೆ ಇನ್ನಷ್ಟೇ ನಡೆಯಬೇಕಿದೆ. ಆಟಗಾರರು ಬಯೊ-ಬಬಲ್‌ನಲ್ಲಿ ಕಳೆಯಬೇಕಾಗಿದ್ದು ಒತ್ತಡ ನಿರ್ವಹಣೆಯ ಕಡೆಗೂ ಗಮನ ನೀಡಬೇಕಾಗಿದೆ. ಆದ್ದರಿಂದ ಆಯ್ಕೆ ಸಮಿತಿ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂಬುದು ಕುತೂಹಲ ಕೆರಳಿಸಿದೆ.

ಋತುರಾಜ್ ಗಾಯಕವಾಡ್ ಮತ್ತು ವೆಂಕಟೇಶ್ ಅಯ್ಯರ್ ಅವರು ವಿಜಯ್ ಹಜಾರೆ ಟೂರ್ನಿಯಲ್ಲಿ ಅಮೋಘ ಆಟವಾಡುತ್ತಿದ್ದಾರೆ. ಅವರು ಕ್ರಮವಾಗಿ ಮೂರು ಮತ್ತು ಎರಡು ಶತಕ ದಾಖಲಿಸಿದ್ದಾರೆ. ಅಯ್ಯರ್ ಬೌಲಿಂಗ್‌ನಲ್ಲೂ ಮಿಂಚಿದ್ದು ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಹೀಗಾಗಿ ಹಾರ್ದಿಕ್ ಪಾಂಡ್ಯ ಬದಲಿಗೆ ಸ್ಥಾನ ಗಳಿಸುವ ಸಾಧ್ಯತೆ ಇದೆ.

ಒಂದು ವೇಳೆ ವೆಂಕಟೇಶ್ ಅಯ್ಯರ್ ಅವರಿಗೆ ಸ್ಥಾನ ಸಿಕ್ಕಿದರೂ ಕೆ.ಎಲ್.ರಾಹುಲ್ ಮತ್ತು ರೋಹಿತ್ ಶರ್ಮಾ ಅವರ ಉಪಸ್ಥಿತಿಯಲ್ಲಿ ಅಗ್ರ ಕ್ರಮಾಂಕದಲ್ಲಿ ಆಡುವ ಅವಕಾಶ ಸಿಗುವುದು ಸಂದೇಹ. ಐದನೇ ಅಥವಾ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಕಳುಹಿಸಿ ತಂಡಕ್ಕೆ 'ಫಿನಿಷರ್' ಒಬ್ಬರನ್ನು ಕಾಣಿಕೆಯಾಗಿ ನೀಡಲು ಆಡಳಿತ ಸಜ್ಜಾಗಲಿದೆ.

ಐಪಿಎಲ್ ಪ್ರತಿಭೆ ಗಾಯಕವಾಡ್

ಐಪಿಎಲ್‌ನಲ್ಲಿ ಆರೆಂಜ್ ಕ್ಯಾಪ್ ಗಳಿಸಿದ್ದ ಋತುರಾಜ್ ಗಾಯಕವಾಡ್ ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಮಹಾರಾಷ್ಟ್ರ ತಂಡವನ್ನು ಮುನ್ನಡೆಸುತ್ತಿದ್ದು ಐಪಿಎಲ್‌ನಲ್ಲಿ ತೋರಿರುವ ಸಾಮರ್ಥ್ಯವನ್ನು ರಾಷ್ಟ್ರೀಯ ಟೂರ್ನಿಯಲ್ಲೂ ಮುಂದುವರಿಸಿದ್ದಾರೆ.

ಐಎಸ್‌ಎಲ್: ಕೇರಳ–ಬೆಂಗಾಲ್ ಪಂದ್ಯ ಡ್ರಾ

ವಾಸ್ಕೊ (ಪಿಟಿಐ): ಮೊದಲಾರ್ಧದಲ್ಲಿ ದಾಖಲಾದ ತಲಾ ಒಂದೊಂದು ಗೋಲುಗಳ ಬಲದಿಂದ ಎಸ್‌ಸಿ ಈಸ್ಟ್ ಬೆಂಗಾಲ್ ಮತ್ತು ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡಗಳು ಸಮಬಲ ಸಾಧಿಸಿದವು.

ಭಾನುವಾರ ರಾತ್ರಿ ಇಲ್ಲಿನ ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯ 1–1ರಲ್ಲಿ ಸಮ ಆಯಿತು.

ಪಂದ್ಯದ 37ನೇ ನಿಮಿಷದಲ್ಲಿ ತೊಮಿಸ್ಲೊವ್ ಮಾರ್ಸೆಲಾ ಗಳಿಸಿದ ಗೋಲಿನ ಬಲದಿಂದ ಈಸ್ಟ್ ಬೆಂಗಾಲ್ ಮುನ್ನಡೆ ಸಾಧಿಸಿತು.

ತಿರುಗೇಟು ನೀಡಿದ ಕೇರಳ ತಂಡಕ್ಕೆ 44ನೇ ನಿಮಿಷದಲ್ಲಿ ಅಲ್ವಾರೊ ವಾಕ್ವೆಜ್ ಗೋಲು ಗಳಿಸಿಕೊಟ್ಟರು.

ಇಂದಿನ ಪಂದ್ಯ: ಹೈದರಾಬಾದ್ ಎಫ್‌ಸಿ–ನಾರ್ತ್ ಈಸ್ಟ್ ಯುನೈಟೆಡ್
ಸ್ಥಳ: ಬ್ಯಾಂಬೊಲಿಮ್
ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಅರವಿಂದ್ ಸಿಂಗ್ —ಟ್ವಿಟರ್ ಚಿತ್ರ

ಏಷ್ಯನ್ ರೋಯಿಂಗ್: ಅರವಿಂದ್‌ಗೆ ಚಿನ್ನದ ಪದಕ

ಬಾನ್ ಚಾಂಗ್, ಥಾಯ್ಲೆಂಡ್ (ಪಿಟಿಐ): ಅನುಭವಿ ರೋವರ್ ಅರವಿಂದ್ ಸಿಂಗ್ ಭಾನುವಾರ ಕೊನೆಗೊಂಡ ಏಷ್ಯನ್ ರೋಯಿಂಗ್ ಚಾಂಪಿಯನ್‌ಷಿಪ್‌ನ ಸಿಂಗಲ್ಸ್ ಸ್ಕಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು. ಕೊನೆಯ ದಿನ ಭಾರತಕ್ಕೆ ಮೂರು ಬೆಳ್ಳಿ ಪದಕಗಳು ಕೂಡ ಒಲಿದವು.

7 ನಿಮಿಷ 55.942 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಅರವಿಂದ್ ಸಿಂಗ್ ಅವರು ಉಜ್ಬೆಕಿಸ್ತಾನ, ಚೀನಾ, ವಿಯೆಟ್ನಾಂ, ಇಂಡೊನೇಷ್ಯಾ ಮತ್ತು ಥಾಯ್ಲೆಂಡ್‌ನ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದರು. ಚಾಂಪಿಯನ್‌ಷಿಪ್‌ನಲ್ಲಿ ಭಾರತ ಒಟ್ಟು ಎರಡು ಚಿನ್ನ ಮತ್ತು ನಾಲ್ಕು ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿತು.

ಲೈಟ್‌ವೇಟ್ ಡಬಲ್ ಸ್ಕಲ್ಸ್‌ನಲ್ಲಿ ಆಶಿಶ್ ಫುಗಟ್ ಮತ್ತು ಸುಖ್‌ಜಿಂದರ್ ಸಿಂಗ್ 7 ನಿಮಿಷ 12.568 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಪ್ರಬಲ ಪೈಪೋಟಿ ಕಂಡುಬಂದ ಕ್ವಾಡ್ರಪಲ್ ಸ್ಕಲ್ಸ್‌ನಲ್ಲಿ ಬಿಟ್ಟು ಸಿಂಗ್, ಝುಕರ್ ಖಾನ್, ಮನ್‌ಜಿತ್ ಕುಮಾರ್ ಮತ್ತು ಸುಖ್‌ಮೀತ್ ಸಿಂಗ್ ಎರಡನೇ ಸ್ಥಾನ ಗಳಿಸಿದರು. 6 ನಿಮಿಷ 33:661 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು 0.523 ಸೆಕೆಂಡುಗಳ ಅಂತರದಲ್ಲಿ ಚಿನ್ನ ಕಳೆದುಕೊಂಡರು. ಕಾಕ್ಸ್‌ಲೆಸ್ ಫೋರ್ ವಿಭಾಗದಲ್ಲಿ ಜಸ್ವೀರ್ ಸಿಂಗ್, ಪುನೀತ್ ಕುಮಾರ್, ಗುರುಮೀತ್ ಸಿಂಗ್ ಮತ್ತು ಚರಣ್‌ಜೀತ್ ಸಿಂಗ್ ಭಾರತಕ್ಕೆ ಬೆಳ್ಳಿ ಪದಕ ಗಳಿಸಿಕೊಟ್ಟರು. 6 ನಿಮಿಷ 51.661 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದ್ದರು.

ಎರಡು ಕುದುರೆಗಳಿಗೆ ದಯಾಮರಣ

ಹಾಂಗ್‌ಕಾಂಗ್ (ಎಎಫ್‌ಪಿ): ರೇಸ್‌ನಲ್ಲಿ ಕುದುರೆಯೊಂದು ಮುಗ್ಗರಿಸಿ ಬಿದ್ದ ಪರಿಣಾಮ ಮೂವರು ಜಾಕಿಗಳು ಗಾಯಗೊಂಡು, ಎರಡು ಅಶ್ವಗಳಿಗೆ ದಯಾಮರಣ ನೀಡಿದ ಘಟನೆ ಭಾನುವಾರ ಇಲ್ಲಿ ನಡೆದಿದೆ.

ಇಲ್ಲಿನ ಶಾ ಟಿನ್ ಟ್ರ್ಯಾಕ್‌ನಲ್ಲಿ ನಡೆಯುತ್ತಿರುವ ಹಾಂಗ್‌ಕಾಂಗ್ ಗುಂಪು ಒಂದರ ರೇಸ್‌ನ ಐದನೇ ದಿನ ಜಾಕಿ ಲೈಲ್ ಹೆವಿಸ್ಟನ್ ಸವಾರಿ ಮಾಡುತ್ತಿದ್ದ ಕುದುರೆ ಮುಗ್ಗರಿಸಿ ಬಿತ್ತು. ಇದರಿಂದಾಗಿ ನಾಗಾಲೋಟದಲ್ಲಿದ್ದ ಜಾಕ್ ಪ್ರೂರ್ಟನ್ ಅವರ ಲಕ್ಕಿ ಪ್ಯಾಚ್ ಹಾಗೂ ಕ್ಯಾರಿಸ್ ಟೀಟನ್ ಅವರ ನಬೂ ಅಟ್ಯಾಕ್ ಮತ್ತು ಯೂಚಿ ಫುಕುನಗಾ ಅವರ ಪಿಕ್ಸಿ ನೈಟ್ ಹೆಸರಿನ ಅಶ್ವಗಳು ಎಡವಿ ಬಿದ್ದವು.

ಘಟನೆಯಲ್ಲಿ ಗಾಯಗೊಂಡ ಸವಾರರಾದ ಪ್ರೂರ್ಟನ್, ಹೆವಿಸ್ಟನ್ ಮತ್ತು ಫುಕುನಗಾ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿರವಾಗಿದೆ ಎಂದು ಹಾಂಗ್‌ಕಾಂಗ್ ಕ್ಲಬ್ ಹೇಳಿದೆ. ತೀವ್ರ ಗಾಯ ಗೊಂಡಿದ್ದ ಅಮೇಜಿಂಗ್ ಸ್ಟಾರ್, ನಬೂ ಕುದುರೆಗಳಿಗೆ ದಯಾಮರಣ ನೀಡಲಾಯಿತು.

ಹೈದರಾಬಾದ್ ರೇಸ್

ಹೌಸ್ ಆಫ್ ಡೈಮಂಡ್ಸ್ ಗೆಲ್ಲುವ ನಿರೀಕ್ಷೆ

ಕಾಸು ರಾಮಚಂದ್ರ ರೆಡ್ಡಿ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಹೌಸ್ ಆಫ್ ಡೈಮಂಡ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಎನ್.ಆರ್.ಐ ಟಚ್ 3, ದಿ ಪ್ರಾಸ್ಪೆಕ್ಟ್ 1, ಥಂಡರ್ ರೋಡ್ 5
2ನೇ ರೇಸ್: ಸಿಲ್ವರ್ ಬೆಲ್ಸ್ 9, ಡಿಲ್ಲಾನ್ 8, ರೀಗಲ್ ಗ್ರೇಸ್ 2
3ನೇ ರೇಸ್: ಸಿಟಿ ಆಫ್ ಬ್ಲೆಸ್ಸಿಂಗ್ 1, ಎಕ್ಸಿಕ್ಯುಟಿವ್ ಡಿಸಿಷನ್ 4, ಹಾಟ್ ಸೀಟ್ 11
4ನೇ ರೇಸ್: ಮುಯಾಸೆರ್ 3, ಚೆಲ್ಟನ್‌ಹ್ಯಾಮ್ 1, ಬ್ಯಾಂಡಿಟ್ ಕಿಂಗ್ 2
5ನೇ ರೇಸ್: ಹೌಸ್ ಆಫ್ ಡೈಮಂಡ್ಸ್ 2, ಟುಮಾರೊ ಡ್ರೀಮ್ಸ್ 7, ಬುಕಿಟ್ 3
6ನೇ ರೇಸ್: ಸೀ ಆಫ್ ಕ್ಲಾಸ್ 2, ನೆಫ್ಟರಿಟಿ 3, ಓಪನ್ ಅಫೇರ್ 1.

ಉತ್ತಮ ಬೆಟ್: ಎನ್.ಆರ್.ಐ ಟಚ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ





